ಶರಣಸಾಹಿತ್ಯ ಗ್ರಂಥಮಾಲಾ—೭.

# ಯುಗವಾಣಿ

(ಕವನ ಸಂಗ್ರಹ)

★

ಪ್ರಕಾಶಕರು :

ಶಾಸ್ತ್ರಾನನಿರ್ವಾಣ, ಪಂಡಿತರತ್ನಂ, ಕೀರ್ತನಾಚಾರ್ಯ

**ಬಿ. ಶಿವಮೂರ್ತಿಶಾಸ್ತ್ರೀ**

★

೧೯೫೦ ಬೆಲೆ: ೧-೦-೦

UNIVERSAL LIBRARY
OU_202333
UNIVERSAL LIBRARY

ಶರಣಸಾಹಿತ್ಯ ಗ್ರಂಥಮಾಲಾ—೭.

# ಯುಗವಾಣಿ

(ಕವನ ಸಂಗ್ರಹ)

★

ಪ್ರಕಾಶಕರು.


ಆಸ್ಥಾನವಿದ್ವಾನ್, ಪಂಡಿತರತ್ನಂ, ಕೀರ್ತನಾಚಾರ್ಯ

**ಬ. ಶಿವಮೂರ್ತಿಶಾಸ್ತ್ರೀ**

★

೧೯೫೦ ಬೆಲೆ: ೧–೦–೦

# ಯು ಗ ವಾ ಣಿ (ಕವನ ಸಂಗ್ರಹ)



ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು

**ಶ್ರೀ ಜಯವಿಭವ ಮುರುಘರಾಜೇಂದ್ರ ಮಹಾಸ್ವಾಮಿಗಳು**

ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ.

# ಸಮರ್ಪಣ

ಶ್ರೀ ಮುಚ್ಚಿತ್ರದುರ್ಗ ಬೃಹನ್ಮಠ ಸಂಸ್ಥಾನ ಶೂನ್ಯಸಿಂಹಾಸನಾಧ್ಯಕ್ಷರೂ, ವಿದ್ಯಾವಿನಯಾದಿ ಸದ್ಗುಣ ಸಂಪನ್ನರೂ, ಸ್ವತಂತ್ರ ಭಾರತದ ಅಭ್ಯುದಯಕ್ಕಾಗಿ ಹಗಲಿರುಳು ಚಿಂತಿಸತಕ್ಕವರೂ, ಕರ್ನಾಟಕ ಪ್ರಾಂತದ ಹಿತಚಿಂತಕರೂ, ತಪೋಧನರೂ, ಉದಾರಚಿತ್ತರೂ, ಬಹುಭಾಷಾವಿಶಾರದರೂ, ವೇದಶಾಸ್ತ್ರ ಸಂಪನ್ನರೂ ಆದ **ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯವಿಭವ ಮುರುಘರಾಜೇಂದ್ರ ಮಹಾಸ್ವಾಮಿಗಳ** ದಿವ್ಯ ಸನ್ನಿಧಿಗೆ **ಯುಗವಾಣಿಯು** ಕಾಣಿಕೆಯಾಗಿ ಸಮರ್ಪಿಸಲ್ಪಟ್ಟಿದೆ.

—ಸಂಪಾದಕ

# ಬಿನ್ನಹ

ಸುಮಾರು ಎರಡು ವರ್ಷಗಳ ಹಿಂದೆ ನಾನು ಹೈದರಾಬಾದಿಗೆ **ಹೋಗಿ**ದ್ದಾಗ ಅಲ್ಲಿನ ಕನ್ನಡ ತರುಣರ ಮತ್ತು ಸಾಹಿತಿಗಳ **ಪರಿಚಯವನ್ನು ಮಾಡಿಕೊಳ್ಳಬೇಕಾಯಿತು.** ಅವರ ಮತ್ತು ನನ್ನ ಸ್ನೇಹ ಬಳೆದಂತೆ **ಕೆಲವು ಉತ್ಸಾಹಿ**ಗಳಾದ ತರುಣರು ತಾವು ಬರೆದ ಸುಂದರವಾದ ಗದ್ಯ-ಪದ್ಯಗಳನ್ನು ನನ್ನ ಮುಂದೆ ಅಂದು ತೋರಿಸಿದರು. ಅವುಗಳಲ್ಲಿ ಕೆಲವು ಬಹಳ ಸ್ವಾರಸ್ಯವಾಗಿದ್ದು ವಾಚನಾರ್ಹವಾಗಿದ್ದವು. ಇವುಗಳನ್ನೆಲ್ಲಾ ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವುದರಿಂದ ಸಾಹಿತ್ಯಕ್ಕೆ ಲಾಭವುಂಟೆಂದು ನನಗೆ ಕಂಡು ಬಂದಿತು. ಈ ನನ್ನ ಬಯಕೆಯನ್ನು ಹೈದರಾಬಾದು ಪಟ್ಟಣದ ಪ್ರಮುಖ ವ್ಯಾಪಾರಿಗಳೂ, ತರುಣರ ಮುಂದಾಳುಗಳೂ ಆದ **ಶ್ರೀಮಾನ್ ರುದ್ರಶೆಟ್ಟರು** ತಿಳಿದು ಈ ಗ್ರಂಥಮುದ್ರಣಕ್ಕೆ ನೆರವಾದರು. ಅವರ ಸಹಾಯದ ಫಲವಾಗಿ **ಈಗ ಈ** ಗ್ರಂಥ ಬೆಳಕಿಗೆ ಬಂದು ವಾಚಕರ ಕೈ ಸೇರಿದೆ.

ಈ ಪುಸ್ತಕ ಅಚ್ಚಾದ ಮೇಲೆ ಇದನ್ನು ಯಾರಿಗೆ ಸಮರ್ಪಿಸಬೇಕೆಂಬ ಆಲೋಚನೆ ಬಂತು. ತನ್ನ ಮಗಳನ್ನು ಯೋಗ್ಯವರನಿಗೆ ಕೊಡಬೇಕೆಂಬ ಕನ್ಯಾಪಿತೃವಿಗೂ, ಕಾವ್ಯವಧುವನ್ನು ತಕ್ಕವರಿಗೆ ಸಮರ್ಪಿಸಬೇಕೆಂಬ ಕೃತಿಕರ್ತೃವಿಗೂ ಇರುವ ಆಶೆ ಸಜಾತೀಯವೇತಾನೆ? ಆಲೋಚನೆಗೆ ತಕ್ಕ ನಿರ್ಧರವು ಮನಸ್ಸಿನಲ್ಲಿ ಹೊಳೆಯಿತು. ಈಗ ಚಿತ್ರದುರ್ಗದ ಬೃಹನ್ಮಠ ಸಂಸ್ಥಾನ ಶೂನ್ಯ ಸಿಂಹಾಸನಾಧೀಶ್ವರರಾಗಿರುವ **ಶ್ರೀಮನ್ನಿರಂಜನ ಜಗದ್ಗುರು ಜಯವಿಭವ ಮುರುಘರಾಜೇಂದ್ರ ಮಹಾಸ್ವಾಮಿಗಳವರ** ದಿವ್ಯಸನ್ನಿಧಿಗೆ ಈ ಪುಸ್ತಕವನ್ನು ಭಕ್ತಿಕಾಣಿಕೆಯಾಗಿ ಸಮರ್ಪಿಸಬೇಕೆಂದು ಮನಸ್ಸಿನಲ್ಲಿ ತೀರ್ಮಾನಿಸಿದೆನು. ಇದಕ್ಕೆ ಕಾರಣವೆಂದರೆ ಪುಸ್ತಕದ ಹೆಸರು **ಯುಗವಾಣಿ** ಎಂದು. ಇದನ್ನು ಬರೆದವರು ದೇಶಾಭಿಮಾನಿಗಳಾದ ಕನ್ನಡ ತರುಣರು. ಆದುದರಿಂದ ಈ ಪುಸ್ತಕವನ್ನು ಸಮರ್ಪಿಸಿಕೊಳ್ಳಲು ಪ್ರಾಚೀನಪೀಠದ ಮೇಲೆ ನೂತನ ತೇಜಸ್ಸಿನಿಂದ ಕಂಗೊಳಿಸುತ್ತಿರುವ ವಿದ್ಯಾವಿನಯ ಸಂಪನ್ನರಾದ ಈ ನೂತನಯುಗಕ್ಕೆ ತಕ್ಕ ಗುಣಲಕ್ಷಣಗಳಿಂದ ಕೂಡಿರುವ **ಶ್ರೀ ಜಗದ್ಗುರು ಜಯವಿಭವ ಮಹಾಸ್ವಾಮಿಗಳು ಯೋಗ್ಯ ಪಾತ್ರರೆಂಬುದು** ಒಪ್ಪತಕ್ಕ ವಿಷಯವಾಗಿದೆಯಲ್ಲವೆ?

ಚಿತ್ರದುರ್ಗದ ನೂತನ ಜಗದ್ಗುರುಗಳು ಪ್ರಾಚೀನ ಅರ್ವಾಚೀನಗಳ ಸಮನ್ವಯದ ಗುಟ್ಟುಗುರಿಗಳನ್ನು ಬಲ್ಲವರು. ಪ್ರತಿಭಾಶಾಲಿಗಳು. ಶ್ರೇಷ್ಠವಾದ **ಧಾರ್ಮಿಕ ಮನೆತನದಲ್ಲಿ** ಜನ್ಮಿಸಿದವರು. ಅನೇಕ ವರ್ಷಗಳಕಾಲ **ಶ್ರೀಕ್ಷೇತ್ರ ಕಾಶಿಯಲ್ಲಿ** ಅಭ್ಯಾಸಮಾಡಿ ಹಲವು ಶಾಸ್ತ್ರಗಳನ್ನೂ, ಕೆಲವು ಭಾಷೆಗಳನ್ನೂ ಅಳವಡಿಸಿಕೊಂಡು ದೊಡ್ಡ ಪಂಡಿತರೆನಿಸಿ ಕೊಂಡಿರತಕ್ಕವರು. ನಮ್ಮ ಸಾಹಿತ್ಯ ಸಂಸ್ಕೃತಿಗಳ ಏಳಿಗೆಯನ್ನು ಮಾಡಬೇಕೆಂಬ ಉದಾರವಾದ ಮನಸ್ಸಿನವರು. ಸಮಾಜದಲ್ಲಿಯೂ,ದೇಶದಲ್ಲಿಯೂ ಉನ್ನತೋನ್ನತವಾದ ಸ್ಥಾನ ಮಾನಗಳನ್ನು ಗಳಿಸಿರತಕ್ಕವರು. ನೂತನ ಪ್ರಪಂಚಕ್ಕೆ ಚಿರನೂತನಗಳಾದ ತಮ್ಮ ಸಂದೇಶ ಗಳನ್ನು ಸಾರಲು ಅನುವಾಗಿರತಕ್ಕವರು. ಆದುಕಾರಣವೇ '**ಯುಗವಾಣಿ**' ಯು ಪರಮ ಪೂಜ್ಯರಾದ ಶ್ರೀ **ತರುಣ ಜಗದ್ಗುರು ಮಹಾಸ್ವಾಮಿಗಳಿಗೆ ಕಾಣಿಕೆಯಾಗಿ** ಸಮರ್ಪಿಸಲ್ಪಟ್ಟಿರುವುದು.

ಅಚ್ಚಾದ ಈ ಪುಸ್ತಕವು ಹೊರಗೆ ಬರಲು ಹಲವು ಕಾರಣಗಳಿಂದ ತಡ ವಾಯಿತು. ಹೀಗೆ ತಡವಾದುದೇ ಪುಸ್ತಕದ ಸಾರ್ಥಕ್ಯಕ್ಕೆ ಕಾರಣವಾಯಿತೆಂದು ಈಗ ನನಗೆ ಅನ್ನಿಸಪತ್ತಿದೆ. 'ಆದದ್ದೆಲ್ಲ ಒಳ್ಳೇದಾಯಿತು'ಎಂಬ ದಾಸರ ಮಾತು ಉಂಟಷ್ಟೆ. **ಶ್ರೀ ಮನ್ನಿರಂಜನ ಜಗದ್ಗುರು ಜಯವಿಭವ ಮುರುಘರಾ ಜೇಂದ್ರ ಮಹಾಸ್ವಾಮಿಗಳು** ಚಿತ್ರದುರ್ಗದ ಶೂನ್ಯಪೀಠವನ್ನು ಅಲಂಕರಿಸಿ ದುದರ ಪುಣ್ಯಸ್ಮಾರಕವಾಗಿ ಈ ಗ್ರಂಥವು ಪ್ರಕಟವಾಗಿದೆ. ಅಲ್ಲದೆ ವಿದ್ಯಾನಿಧಿಗ ಳೆನಿಸಿರುವ ಆ ಪರಮಪೂಜ್ಯ ಶ್ರೀಗಳ ಸನ್ನಿಧಿಗೆ ಭಕ್ತಿ ಕಾಣಿಕೆಯಾಗಿ ಸಮ ರ್ಪಿಸಲ್ಪಟ್ಟಿದೆ.

ಶರಣಸಾಹಿತ್ಯ ಗ್ರಂಥಮಾಲೆಯಿಂದ ಇದುವರೆಗೆ—

೧. ರಾಘವಾಂಕನ **ವೀರೇಶಚರಿತೆ**

೨. ನಿಜಗುಣರ **ಪುರಾತರ ತ್ರಿವಿಧಿ**

೩. ಸೋಮನಾಥನ **ಬಸವೋದಾಹರಣಮ್**

೪. ಗುರುಬಸವನ **ಮನೋವಿಜಯಮ್**

೫. **ಬಿಲ್ವಾಷ್ಟೋತ್ತರಮ್**

ಎಂಬ ಐದು ಗ್ರಂಥಗಳು ಪ್ರಕಟವಾಗಿ ವಾಚಕರ ಕೈಸೇರಿವೆ. ಈ ಎಲ್ಲ ಗ್ರಂಥಗಳ ಪ್ರತಿಗಳೂ ಮುಗಿದು ಪುನರ್ಮುದ್ರಣಕ್ಕೆ ಸಿದ್ಧವಾಗಿವೆ. ೬ನೇ

ಗ್ರಂಥವಾದ **ಘನಲಿಂಗಿಯ ವಚನಗಳು** ಶ್ರೀ ಸುತ್ತೂರು ವೀರಸಿಂಹಾಸನ ಮಠಾಧ್ಯಕ್ಷರಾದ **ಶ್ರೀ ಪಟ್ಟದ ಶಿವರಾತ್ರೀಶ್ವರ ಮಹಾಸ್ವಾಮಿಗಳ** ಉದಾರ ಸಹಾಯದಿಂದ ಈಗ ಸಿದ್ಧವಾಗಿದೆ. ೭ನೇ ಗ್ರಂಥವಾದ **ಯುಗವಾಣಿಯು** ಈಗ ವಾಚಕರ ಕೈಸೇರಿದೆ. ೮ನೇ ಗ್ರಂಥವಾದ **'ಸಂಕ್ಷಿಪ್ತ ಶಿವಪೂಜಾ ವಿಧಿಯು'** ಮೈಸೂರಿನ ಸುಪ್ರಸಿದ್ಧ ವ್ಯಾಪಾರಿಗಳೂ ಧರ್ಮಾಭಿಮಾನಿಗಳೂ ಆದ **ಮ॥ ರಾ॥ ಪಿ. ಎಜ್. ಸಂಗಪ್ಪನವರ** ಉದಾರಾಶ್ರಯದಿಂದ ಪ್ರಕಟವಾಗಿದೆ. ೯ನೇ ಗ್ರಂಥವಾದ **'ಕನ್ನಡ ಹಾಡುಗಳು'** ಡಾ॥ **ಸರ್. ಎಂ. ವಿಶ್ವೇಶ್ವರಯ್ಯನವರ** ಸಹಾಯದೊಡನೆ ಅಚ್ಚಾಗುತ್ತಿದೆ. ಬೇಗನೆ ವಾಚಕರ ಕೈ ಸೇರುತ್ತದೆ. ೧೦ನೇ ಗ್ರಂಥವಾದ **'ವೀರಶೈವ ಸಾಹಿತ್ಯ ಮತ್ತು ಇತಿಹಾಸ'** ಅಚ್ಚಿನಲ್ಲಿದೆ. ಹೀಗೆಯೇ ಗ್ರಂಥಮಾಲೆಯ ಇತರ ಪುಸ್ತಕಗಳು ಬೇಗಬೇಗನೆ ಇನ್ನು ಮುಂದೆ ವಾಚಕರ ಕೈಸೇರುತ್ತವೆ. ಸಾಹಿತ್ಯ ಸಂಸ್ಕೃತಿಯ ಅಭಿಮಾನಿಗಳು ಎಂದಿನಂತೆ ನಮ್ಮ ಗ್ರಂಥಗಳಿಗೆ ಪ್ರೋತ್ಸಾಹವೀಯುತ್ತಾರೆಂದು ನಂಬಲಾಗಿದೆ.

ದಿನಾಂಕ: ೩-೩-೧೯೫೦
ಬೆಂಗಳೂರು.

**ಬ. ಶಿವಮೂರ್ತಿ ಶಾಸ್ತ್ರೀ**
ಪ್ರಕಾಶಕ

# ಪ್ರಸ್ತಾವನೆ

ಸಮಾಜದ ಕಂದಾಚಾರಗಳಿಗೂ, ಜನತೆಯನ್ನು ಪೀಡಿಸುವ ಕಷ್ಟ ನಷ್ಟಗಳಿಗೂ ಬೇಸರಗೊಂಡು ಕ್ರಾಂತಿಕಾರಕ ಮನಸ್ಸಿನಿಂದ ಕೂಡಿದ ಕೆಲವು ತರುಣರು ಹೊಸಯುಗವನ್ನು ಕಾಣಲು ಬಯಸಿ ಬರೆದ ಗದ್ಯ-ಪದ್ಯಗಳಿಂದ ಕೂಡಿದ ಈ ಗ್ರಂಥಕ್ಕೆ '**ಯುಗವಾಣಿ**' ಎಂಬ ಹೆಸರು ಅನ್ವರ್ಥವಾಗಿದೆ. ಈ ಪುಸ್ತಕವನ್ನು ಮೊದಲಿಂದ ಕೊನೆಯುವರೆಗೆ ಮನವಿಟ್ಟು ಓದಿದವರಿಗೆ ಗ್ರಂಥಸ್ಥ ವಿಷಯಗಳಿಗೂ ಗ್ರಂಥದ ಹೆಸರಿಗೂ ಇರುವ ಅರ್ಥಪೂರ್ಣವಾದ ಬಾಂಧವ್ಯವು ಮನವರಿಕೆಯಾಗುತ್ತದೆ.

ಈ ಪುಸ್ತಕದಲ್ಲಿ ಯುಗವಾಣಿ, ದೇವನಿರುವಾಗ, ಆತ್ಮಪಕ್ಷಿ, ಮೋಕ್ಷ ಮಾರ್ಗ, ಕೋಗಿಲೆಗಳು, ರಣಕಾಳಿ, ಬಾರೆಲವೊ, ಯಾಚನೆ, ಬೇಡಿಕೆ, ಸುಜ್ಞಾನ, ನಂಬಲೇತಕೆ, ಕಲ್ಯಾಣವಾಣಿ, ವಚನಗೀತೆಗಳು, ಹರಳಯ್ಯ ಎಂಬ ೧೪ ಕವನಗಳೂ, ವಚನಗಳು, ಬಸವನ ಆದರ್ಶ, ನವರಾತ್ರಿ, ಅನುಭವ ಮಂಟಪ, ಕ್ರಾಂತಿ ಮತ್ತು ಕಾಯಕ, ನನ್ನದಾವ ಧರ್ಮ, ಸರ್ವಜ್ಞ ಮೂರ್ತಿ, ಪೂಜೆ, ನೀನೇಕೆ ಜನ್ಮಕೊಟ್ಟೆ, ಮರಳಿ ಬಂದಾವೆ, ನಾ ಕಂಡ ಕನಸು ಎಂಬ ೧೧ ಗದ್ಯಗಳೂ ಸಂಗ್ರಹಿಲ್ಪಸಟ್ಟಿವೆ. ಇವುಗಳಲ್ಲಿ ಆತ್ಮಪಕ್ಷಿ, ಸುಜ್ಞಾನ ಮೊದಲಾದ ಕವಿತೆಗಳನ್ನು ಓದುವಾಗ ಬರೆದವರ ರಸಜ್ಞತೆಯನ್ನೂ, ಪ್ರತಿಭೆಯನ್ನೂ ನಾವು ಚೆನ್ನಾಗಿ ಮನಗಾಣಬಹುದು.

ಜೀವನದಲ್ಲಿ ಬೇಸರವಾದಾಗ, ಕಾವ್ಯಾನಂದವನ್ನು ಅನುಭವಿಸಬೇಕೆಂದಾಗ ವಾಚನಚಾಪಲ್ಯವನ್ನು ತೃಪ್ತಿಪಡಿಸಿಕೊಳ್ಳಬೇಕಾದಾಗ, ಇಂತಹ ಸಾಹಿತ್ಯ ಪ್ರಧಾನವಾದ ಪುಟ್ಟ ಪುಟ್ಟ ಗ್ರಂಥಗಳನ್ನು ಓದುವುದರಲ್ಲಿ ಲಾಭವುಂಟು. 'ರಸಿಕರಾಡಿದ ಮಾತು ಶಶಿಯುದಿಸಿ ಬಂದಂತೆ' ಎಂದು ಕನ್ನಡ ಜಾಣ ಸರ್ವಜ್ಞನು ಹೇಳಿರುವ ಮಾತು ಇಲ್ಲಿ ಸ್ಮರಣಾರ್ಹವಾಗಿದೆ. ದೊಡ್ಡ ದೊಡ್ಡ ಮಹಾಕಾವ್ಯಗಳನ್ನು ಓದಿ ಆನಂದಿಸಲು ಅವಕಾಶವೂ ಇಚ್ಛೆಯೂ ಇಲ್ಲದವರಿಗೆ, ಇಂತಹ ಖಂಡ ಕಾವ್ಯಗಳೂ, ಸಾಹಿತ್ಯ ಸಂಗ್ರಹಗಳೂ ಬಹಳ ಪ್ರಯೋಜನಕಾರಿ. ಇತ್ತೀಚೆಗೆ ಇಂತಹ ಕವನ ಸಂಗ್ರಹಗಳು ಕನ್ನಡದಲ್ಲಿ

ಹೆಚ್ಚು ಹೆಚ್ಚು ಪ್ರಕಟವಾಗುತ್ತಿರುವುದೂ ಅದಕ್ಕೆ ರಸಿಕರ ಬೆಂಬಲ ಸಿಗುತ್ತಿರುವುದೂ ಈ ಜಾತಿಯ ಗ್ರಂಥಗಳ ಜನಪ್ರಿಯತೆಗೆ ನಿದರ್ಶನವಾಗಿದೆ.

ಹಿಂದಿನವರ ಅನುಭವಗಳನ್ನು ಮುಂದಿನವರಿಗೆ ತಿಳಿಸುವುದು, ಜನರ ಮನಸ್ಸಿಗೆ ಆನಂದ ಉಂಟಾಗುವಂತೆ ಮಾಡುವುದು, ಜನಜೀವನದ ಪ್ರಗತಿಗೆ ಸಾಧಕವಾದ ಉನ್ನತ ಭಾವನೆಗಳನ್ನು ಮೃದು ಮಧುರವಾದ ಮಾತುಗಳಲ್ಲಿ ಪ್ರಚಾರ ಮಾಡುವುದು, ಜನರಿಗೆ ಇದು ಪಾಪ ಇದು ಪುಣ್ಯ, ಇದು ಸಾಧು ಇದು ಅಸಾಧು, ಎಂಬುದನ್ನು ಬೋಧಿಸುವುದು, ಜನರ ರಸಜ್ಞತೆಯನ್ನು ಹೆಚ್ಚಿಸುವುದು ಇದುವೇ ಸಾಹಿತ್ಯದ ಮುಖ್ಯವಾದ ಗುರಿಯೆಂದು ತೋರುತ್ತದೆ. ಒಂದು ದೇಶದ ಅಥವಾ ಜನದ ಸಂಸ್ಕೃತಿಯನ್ನು ಅಳೆಯಲು ಅವರ ಸಾಹಿತ್ಯ ಒಳ್ಳೆಯ ನಿದರ್ಶನವೆಂದು ಅಭಿಜ್ಞರು ಹೇಳುತ್ತಾರೆ. ಸಾಹಿತ್ಯವು ಸಮಕಾಲೀನ ಜನರ ರನ್ನಗನ್ನಡಿ (Literature is the golden mirror of the Conte--mporary society) ಎಂದು ವಿವೇಕಾನಂದರು ಹೇಳುತ್ತಾರೆ. ಆದುದರಿಂದ ತಮ್ಮ ಸಾಹಿತ್ಯದ ಸರ್ವಾಂಗೀನ ಪ್ರಗತಿಯನ್ನು ಬಯಸುವುದು ಸಜೀವ ಜನಾಂಗದ ಕರ್ತವ್ಯವೇ ಆಗಿದೆಯಲ್ಲವೆ?

ಈ ಗ್ರಂಥದ ಕವನ ಮತ್ತು ಗದ್ಯಗಳನ್ನು ಬರೆದವರು ಪ್ರಥಮ ಪ್ರಯತ್ನವಾದರೂ ಒಳ್ಳೆಯ ದಾರಿಯಲ್ಲಿ ಮುಂದುವರಿದ್ದಾರೆ- ಹಿಂದೆಬಿದ್ದಿರುವ ಹೈದರಾಬಾದು ಕರ್ಣಾಟಕ ಪ್ರಾಂತದಲ್ಲಿನ ನಮ್ಮ ತರುಣರು ಹೀಗೆ ಕೊಂಚಕೊಂಚವಾಗಿಯಾದರೂ ಸಾಹಿತ್ಯ ಕ್ಷೇತ್ರದಲ್ಲಿ ಮುಂದೆ ನುಗ್ಗುತ್ತಿರುವುದು ಸ್ವಾಗತಾರ್ಹವಾಗಿದೆ. ಅವರ ಈ ಪ್ರಯತ್ನವು ಮುಂದುವರಿಯಲಿ. ರಾಷ್ಟ್ರಕೂಟ, ಚಾಲುಕ್ಯ, ಕಾಕತೀಯ, ಯಾದವ ರಾಜ್ಯ ಸಾಮ್ರಾಜ್ಯಗಳು ಆಗಿಹೋದ ಆ ನಾಡಿನಲ್ಲಿ, ನೃಪತುಂಗ, ಬಸವೇಶ್ವರ, ದಾಸಿಮಯ್ಯ, ಜಗನ್ನಾಥದಾಸ, ಬಿಲ್ಹಣ, ವಿಜ್ಞಾನೇಶ್ವರಾದಿ ಮಹಾಕವಿಗಳು ಬಾಳಿ ಬದುಕಿದ ಆ ನಾಡಿನಲ್ಲಿ ಕಂಗೊಳಿಸುವ ನಮ್ಮ ಕನ್ನಡ ತರುಣರು ಸರಸ್ವತಿಯ ಅನುಗ್ರಹಕ್ಕೆ ಪಾತ್ರರಾಗಲಿ. **ಯುಗವಾಣಿ** ಯಂತಹ ಹಲವು ಗ್ರಂಥಗಳೂ, ಕಾವ್ಯಗಳೂ ಅಲ್ಲಿನವರಿಂದ ಪ್ರಕಟವಾಗಲಿ.

ದಿನಾಂಕ ೨–೨–೧೯೫೦. **ಬ. ಶಿವಮೂರ್ತಿಶಾಸ್ತ್ರೀ,**

ಬೆಂಗಳೂರು ನಗರ ' ಶರಣಸಾಹಿತ್ಯ ಮಂದಿರ'

# ವಿಷಯ ಸೂಚಿಕೆ


**ಕವಿತೆಗಳು**

೧. ಯುಗವಾಣಿ
೨. ನಿಮ್ಮೆದುರೆ ದೇವನಿರುವಾಗ
೩. ಆತ್ಮಪಕ್ಷಿ
೪. ಮೋಕ್ಷಮಾರ್ಗ
೫. ಕೋಗಿಲೆಗಳು
೬. ರಣಕಾಳಿ
೭. ಬಾರೆಲವೊ ಚಿತ್ರಕನೆ
೮. ಯಾಚನೆ
೯. ಬೇಡಿಕೆ
೧೦. ಸುಜ್ಞಾನ
೧೦. ನಂಬಲೇತಕೆ
೧೨. ಕಲ್ಯಾಣ ವಾಣಿ
೧೩. ವಚನ ಗೀತೆಗಳು

**ಗದ್ಯಗಳು**

೧೪. ಹರಳಯ್ಯ
೧೫. ವಚನಗಳು
೧೬. ಬಸವನ ಆದರ್ಶಮಾರ್ಗ
೧೭. ನವರಾತ್ರಿ
೧೮. ಅನುಭವ ಮಂಟಪ
೧೯. ಬಸವಣ್ಣನವರ ಕ್ರಾಂತಿಮತ್ತು ಕಾಯಕ
೨೦. ನನ್ನದಾವ ಧರ್ಮ ?
೨೧. ಸರ್ವಜ್ಞ ಮೂರ್ತಿ
೨೨. ಪೂಜೆ
೨೩. ದೇವ ನೀನೇಕೆ ಜನ್ಮಕೊಟ್ಟೆ ?
೨೪. ಮತ್ತೆ ಮರಳಿ ಬಂದಾವೆ ?
೨೫. ನಾಕಂಡ ಕನಸು

# ಯುಗ ವಾಣಿ

ಸಾಕಿನ್ನು ಕುಲ ಜಾತಿಗಳ ಪೀಡೆ ನಮಗೆ
ಸಾಕಿನ್ನು ಮತ ಪಂಥಗಳ ಕಾಟ ನಮಗೆ
ಕಲೆಯೋಣ ಒಂದೆಡೆಗೆ ಎಲ್ಲರೊಂದಾಗಿ
ಭೇದ ಭಾವಗಳನ್ನು ಬೇಗ ಹೊರದೂಡಿ

ನಮ್ಮದೊಂದೇ ಜಾತಿ, ನಾವು ಮಾನವರು
ನಮ್ಮದೊಂದೇ ಧರ್ಮ, ಅದುವೆ ನರಧರ್ಮ
ಮನುಜರೇ ಮನುಜರಲಿ ಕುಲವೆಣಿಸಬೇಕೆ ?
ನಾವೆ ನಮ್ಮವರನ್ನು ಕಡೆಗಣಿಸಬೇಕೆ ?

ಹೆಣ್ಣನ್ನು ಕೀಳೆಂದು ತಿಳಿಯುವದು ಸಾಕು
ಆದಿಬಂಧುಗಳನ್ನು ಹಳಿಯುವದು ಸಾಕು :
ಇವ ವೈಶ್ಯ, ಅವ ಶೂದ್ರ, ಅವನು ಕ್ಷತ್ರಿಯನು
ನಾವು ಬ್ರಾಹ್ಮಣರೆಂಬ ಹೆಮ್ಮೆಯದು ಸಾಕು.

ಕ್ರಿಶ್ಚನರು, ಮುಸ್ಲಿಮರು, ಬೇರಲ್ಲ ಒಂದೆ
ಲಿಂಗವಂತರು, ಜೈನ, ಬ್ರಾಹ್ಮಣರು ಒಂದೆ
ಅವರೇನು ? ಇವರೇನು ? ಎಲ್ಲರೂ ಒಂದೆ
ನಮ್ಮೊಳಗೆ ಕುಲವೆಲ್ಲಿ ? ನಾವೆಲ್ಲರೊಂದೆ.

ಹುರುಳಿಲ್ಲದಿಹ ಧರ್ಮವನ್ನುಳಿಸ ಬೇಕೆ ?
ತಿರುಳಿಲ್ಲದಿಹ ಪಂಥಗಳ ಬೆಳೆಸಬೇಕೆ ?
ಎಲ್ಲ ಕುಲಗಳ ಕತ್ತು ಒತ್ತೋಣ ಇಂದು ;
ಎಲ್ಲ ಧರ್ಮಗಳನ್ನು ಹುಗಿಯೋಣ ಇಂದು !

ಶಾಸ್ತ್ರಗಳ ಆಡಳಿತ ಬೇಕಿಲ್ಲ ನಮಗೆ,
ಧರ್ಮದ ಅಧಿಕಾರ ಮೊದಲೆ ಬೇಡೆಮಗೆ,
ಪಂಡಿತರ ಹೇಳಿಕೆಗೆ ಒಪ್ಪುವದು ಬೇಡ
ಮೌಲ್ವಿಗಳ ಮಾತುಗಳ ನಂಬುವದು ಬೇಡ !

ಜಗವೆಲ್ಲ ಒಂದು ; ಜಗ ಜೀವಿಗಳು ಒಂದು,
ಜಗದ ಮಾನವಕುಲದ ಬೇರುತಾ ಒಂದು !
ನಮ್ಮ ನಮ್ಮೊಳಗೇಕೆ ಒಡಕು ದ್ವೇಷಗಳು,
ನಮ್ಮ ನಮ್ಮೊಳಗೇಕೆ ಕುನಸು ಕಲಹಗಳು.

ನಮ್ಮ ಧರ್ಮವು ' ಸತ್ಯ '
ನಮ್ಮ ತತ್ವವು ' ಶಾಂತಿ'
ಸಮತೆಯೇ ನಿಜವಾದ ಜಗದ ನೀತಿ.

ಇದುವೆ ಮಾನವ ಕುಲದ
ನಿಜ ಧರ್ಮವಲ್ಲವೆ ?
ಇದನು ಪಡೆಯಲು ನಾವು
ಹೆಣಗ ಬೇಕಲ್ಲವೆ ?

**ಕಲಾನಂದ.**

# ನಿಮ್ಮೆದುರೆ ದೇವನಿರುವಾಗ....!

ಕಲ್ಲು ಗುಡಿಗಳು ಏಕೆ, ಕಟೆದ ಲಿಂಗವು ಏಕೆ
ಧೂಪ ದೀಪಗಳೇಕೆ, ಪತ್ರಿ ಪುಷ್ಪಗಳೇಕೆ
ಜಲವೇಕೆ, ಘಂಟೆ ಜಾಗಟೆಗಳೇಕೆ ?

ಮಂತ್ರ ಘೋಷಗಳೇಕೆ, ಹೊಗಳಿಕೆಯ ಹಾಡೇಕೆ,
ಕತ್ತಲೆಯ ಗವಿಯಲ್ಲಿ ನಿರ್ಜೀವ ಶಿಲೆಯೆದುರು
ಬಕಧ್ಯಾನಗೈವಂತೆ ತಪಗೈವುದೇಕೆ ?

ಕೋಟಿ ರೂಪವ ಧರಿಸಿ ಶಿವ ತಾನು ಮೆರೆವಾಗ
ನಿಮ್ಮ ಬದಿ ಇರುವಾಗ, ನಿಮ್ಮೆದುರೆ ಇರುವಾಗ
ನಿಮ್ಮ ಕಣ್ಣಿನ ಜ್ಯೋತಿ ನಂದಿ ಹೋಯ್ತೆ ?
ನಿಮ್ಮ ಅರುವಿನ ಬೆಳಕು ಮಾಯವಾಯ್ತೆ ??
ಹರಕು ಚಿಂದಿಯ ಧರಿಸಿ, ಒಡಲ ಕಿಚ್ಚನು ಸಹಿಸಿ
ಎಲುವಿನ್ಹಂದರದಂತೆ, ಪ್ರಳಯ ಮೂರ್ತಿಯ ತೆರದಿ
ನಿಮ್ಮೆದುರೆ ಇರುವಾಗ, ಕೈಯೊಡ್ಡಿ ನಿಂತಾಗ
ಅವನ ಅರಸುವದೇಕೆ ? ಆವನ ಸ್ತೋತ್ರವದೇಕೆ ??

ಕಾಶಿ ಕ್ಷೇತ್ರಕೆ ಹೋಗಿ
ಪುಣ್ಯ ಗಂಗೆಯ ಮಿಂದು
ವಿಶ್ವನಾಥಗೆ ಬಾಗೆ

ನಿಮ್ಮ ಪಾಪದ ಕೊಳೆಯು ಕೊಚ್ಚಿ ಹೊಯ್ತೆ ?
ನಿಮ್ಮ ಮುಕ್ತಿಯ ದಾಹ ಆರಿ ಹೋಯ್ತೆ ??
ಎಲ್ಲವೂ ಬರಿ ಭ್ರಮೆಯು
ಜ್ಞಾನ, ಧರ್ಮದ ಕೊಲೆಯು !

ವಿಶ್ವವೇ ದೇಗುಲವು
ಬಡವನೇ ದೈವತವು
ಜ್ಞಾನವೇ ದೀಪಕವು
ಕರ್ಮವಾರಾಧನೆಯು
ಸೇವೆಯೇ ಪೂಜೆಯು
ದೇವನಿಂಗಿತವರಿತು
ಅವನ ಕಷ್ಟದಿ ಬೆರೆತು

ಅವನ ಚಿತ್ರವನಿಂದು ಚಿತ್ರಿಸುವ ಬನ್ನಿ
ಅವನ ಮಹಿಮೆಯ ಜಗಕೆ ತೋರಿಸುವ ಬನ್ನಿ.

ಗೀತಾನಂದ

# ಆತ್ಮಪಕ್ಷಿ

ಯಾರದಾರಿ ಕಾಯುತಿರುವೆ
ಯಾರನೆನೆದು ನೋಯುತಿರುವೆ
ಯಾಕೆ ಬಳಲಿ ಬೇಯುತಿರುವೆ
ಆತ್ಮಪಕ್ಷಿಯೆ ?

ದೆಸೆ ದೆಸೆಗಳ ನಿಟ್ಟಿಸುವೆ
ಭೂ ಗಗನವ ದಿಟ್ಟಿಸುವೆ
ಅನುಕಂಪವ ಹುಟ್ಟಿಸುವೆ
ಯಾಕೆ ಹಕ್ಕಿಯೆ ?

ಹೆಸರಿಲ್ಲದ ಯಾವ ವ್ಯಸನ
ಉತ್ತರವೇ ಇರದಬೆಸನ
ತೃಪ್ತಿಯಿಲ್ಲದತುಲತೃಷಣ
ನಿನ್ನ ಕಾಡಿದೆ ?

ಹಗಲು ಇರುಳು ಬೈಗು ಬೆಳಗು
ಜಾಗ್ರತ ಸುಷುಪ್ತಿ ಯೊಳಗು
ಯಾವ ದಿವ್ಯ ಧ್ವನಿಯ ಮೊಳಗು
ಏನಬೇಡಿದೆ ?

ಮುಗಿಲನಂತದಲ್ಲಿ ತೇಲಿ
ಹಗಲತಾರೆಯನ್ನು ಹೋಲಿ
ಏನಾಟ ವಿಶ್ವರೂಪಲೀಲೆ
ನೋಡಲಾಸೆಯೆ ?

ಬೃಹತ್ ಜಲಧಿಯನ್ನು ಈಸಿ
ಮುಗಿಲಗಾಳಿಗಳನುಜ್ಜೈಸಿ
ಅನಂತದಾಚೆ ರೆಕ್ಕೆಬೀಸಿ
ಹಾರಲಾಸೆಯೆ ?

ಯಾರುನಿನ್ನ ಕರೆಯುತಿಹರು ?
ಯಾಕೆ ನಿನ್ನ ಕರೆಯುತಿಹರು ?
ಯಾವ ಆಶೆ ತೋರುತಿಹರು ?
ಹೇಳುಹಕ್ಕಿಯೆ !

ಇಲ್ಲ— ಸ್ವಯಂಪ್ರೇರಣೆ
ಜೀವನ ಸಂವೇದನೆ
ಪೂರ್ಣತೆಯಾರಾಧನೆ
ತಾನೆ ಉಕ್ಕಿದೆ !

ಅನಂತ ಕಾಲಿನಂಚಿನಲ್ಲಿ
ಅದೃಷ್ಟ ಪ್ರಪಂಚಿನಲ್ಲಿ
ಶಕ್ಯಾಶಕ್ಯದಾಚೆಯಲ್ಲಿ
ಹಾರು ಹಾರು ಹಕ್ಕಿ ;

ಆಗುಹೋಗುಗಳನುಮೀರಿ
ಮೇಗುಕೇಳಗುಗಳನು ಸಾರಿ
ಭವಿಷತ್ತಿನ ನೆತ್ತಿಗೇರಿ
ಹಾರು ಆತ್ಮ ಪಕ್ಷಿ !

ಮೇರೆಯಲ್ಲಿ ನಿನ್ನಗುರಿಗೆ ?
ದಣಿವದೆಲ್ಲಿ ನಿನ್ನಗರಿಗೆ ?
ಶಾಂತಿಯೆಲ್ಲಿ ನಿನ್ನ ಬಗೆಗೆ ?
ಹಾರು ಹಾರು ಹಕ್ಕಿ !

ದಿಗ್ ದಿಗಂತಗಳನುಸುತ್ತಿ
ಭೂ–ವ್ಯೋಮಗಳಾಚೆ ಹತ್ತಿ
ಅನಂತದೊಡನೆ ಜೂಜುಕಟ್ಟಿ
ಹಾರು ಆತ್ಮಪಕ್ಷಿಯೆ

**ಕಾವ್ಯಾನಂದ**

# ಮೋಕ್ಷ ಮಾರ್ಗ

ಅಣುರೇಣುತೃಣಕಾಷ್ಠದೊಳು ನಿನ್ನ ಕಳೆಯಿರಲು
ಬನಗಳನು ಬಹುನೆಚ್ಚಿ ದೆಸೆಗೆಟ್ಟರಲ್ಲ,
ತನುವದಂಡಿಸಿ ಮನವತೃಪ್ತಿಬಡಿಸದೆ ನಿನ್ನ
ಆಶೆವೊಂದನೆ ಮೆಚ್ಚಿ ಭವಗೆಟ್ಟರಲ್ಲ !

ಮರನ ಕಂಡರೆ ಸುತ್ತಿ ನೀರಕಂಡರೆ ಮುಳುಗಿ
ಪಶುವ ಯಾಗದಿ ಕೊಂದು ಜಗದಿ ಬಾಳಿದರಲ್ಲ,
ಹಾಳುಮೊರಡಿಗಳಲ್ಲಿ ಊರದಾರಿಗಳಲ್ಲಿ
ನಿನ್ನ ಪೂಜಿಸಿ ಹಾಸ್ಯ ಕೀಡಾದರಲ್ಲ !

ಉದರದಾಶೆಗೆ ಕಾಶಿ ಕೇದಾರಗಳ ತಿರುಗಿ
ನಿನ್ನನರಸುವೆವೆಂದು ಹುಸಿನುಡಿದರಲ್ಲ,
ಎಲ್ಲೆಲ್ಲಿಯೂ ದೇವ ! ನಿನ್ನ ಕಾಣದೆ ಅವರು
ಹಾಳು ಶಿಲೆಗಳ ನೆಮ್ಮಿ ಮಡಿದರಲ್ಲ !

ಅವರಂತೆ ತರದೊಳಗೆ ಮಣಿಗಳನು ತಿರುಗಿಸುತ
ಮುಚ್ಚಿಮೂಗನು ನಿನ್ನ ನೆನೆಯಲೊಲ್ಲೆ
ಅವರ ಬಟ್ಟೆಯಲಾನು ನಡೆದರೆನ್ನಯಬಾಳು
ಪಾಳಪ್ಪುದೀಜಗದಿ ಎಂಬುದನು ಬಲ್ಲೆ.

ಶಿವಲಿಂಗ

# ಕೋಗಿಲೆಗಳು *

ನೀನಿರುತಿರುವ ಪರ್ವತವು ಸೌಂದರ್ಯ ಬೀಡು
ನೀ ಕಲಿತ ಗೀತೆಯಾ ತಾಣವದು ನೋಡು
ಫಲಭರಿತ ಕುಜಗಳಿಂದಂದವಾಗಿಹ ಕೊಳನ
ಮಧ್ಯದೊಳ್ ಮಿರಿ ಮಿರಿದು ಸೂಸುತಿಹ ಹೊನಲು
ಅದುವೆ ನಿನ್ನಯ ತಾಣವು.

ನಕ್ಷತ್ರಮಯವಾದ ಕುಜಾಕಾಶವೆಲ್ಲಿ ?
ಸ್ವರ್ಗೀಯ ಪವನದೊಳಲಿ ಮಲೆವ ಕುಸುಮಗಳ
ಬರಿಸದುದ್ದಕೆ ಬಾಡಿ ಕುಂದದಿಹ ಪರಿಮಳದ
ಸೊಬಗ ನೀಂಟಲು ನಾನಲ್ಲಿ ಸುಳಿಯ ಬಹುದೇ ಹೇಳು.
ಇದುವೆ ನನ್ನಯ ಬಯಕೆಯು.

ನಗ್ನ ಶಿಖರವದಾಯ್ತು, ಬತ್ತಿದುದು ಆ ಹೊನಲು
ನಮ್ಮ ಗೀತೆಯದಿಂದು ಕಾಮ ಕಾಮನೆಯೊಳಗು
ಗಾಢ ನಿದ್ರೆಯುಲಂದು ವ್ಯೆಯಾಂತ ಸುಖತಾನು
ಕನಸಿನಾಕನಸಾಗಿ ಪರಿಣಮಿಸು ತಿರುವದರ
ನನಸ ಬಯಕೆಯ ಕೊರಗನಾಂತ ಹೃದಯದ ಮೊಳಗು
ಮರೆಯಲಾಗದೀ ಕೊರಗು.

ಅದಕಾಗಿ ಕಾತರಿಸಿ ಆಶೆಭಂಗವದಾಯ್ತು
ಮುರಿದ ಆಕಾಂಕ್ಷೆಗಳು ಕೊನೆಯ ಮೀರಿದುದಾಯ್ತು
ಆದೊಡಂ ತದ್ಭಾವ ಸೊಬಗ ಪ್ರಕಟಿಸಲೀಗ

* R. Bridges ನ Nightingales ಕವಿತೆಯ ಭಾವಾನುವಾದ.

ಕುಶಲವಹ ಇನಿಸರವು ಅಸಮರ್ಥವಹುದಹುದು.
ಇದುವೆ ಬಿಸಿಯುಸಿರ ಭಾವವು.

ಏಕಾಕಿಯಾಗಿ ನಾವಿರುಳಿಲ್ಲ ಜಗಜನದ
ಶ್ರೋತೃ ವೃಂದಕೆ ನಮ್ಮ ಮನದ ಕೊರಗನು ಬೀರಿ
ಸೂರ್ಯನುದಯಿಸಲಾಗ ಪಕ್ಷಿನಿಕರವು ಮಧುರ
ವಸಂತರಾಗ ದೊಲವನ ಸ್ವಾಗತಿಸುತಿರಲು
ಸ್ತಬುಧ ಶರಧಿಯ ನಾನುವೆವು.

ಗುರುತನಯ

# ರಣಕಾಳಿ

ಕೆರಳಿ ಕಿಡಿಕಿಡಿಯಾಗಿ
ಕರೆವಳಿದೊ ರಣಕಾಳಿ !

‘ ಏಳಿ ವೀರರೆ ಏಳಿ
ವಿಶ್ವಚಾಲಕರೇಳಿ ’ !

ರಣವೆ ವೀರನ ಮಂತ್ರ
ರಣವೆ ಜಾಣನ ತಂತ್ರ !

ರಣವೆ ವಿಶ್ವದ ಮಂತ್ರ
ಉಳಿದದ್ದು ಪರತಂತ್ರ !

ಗೆಲವೆ ಬಾಳಿನ ಸುಗ್ಗಿ
ಸೋಲು ಮರಣದ ಕುರುಹು !

ಬಲವೆ ಪರಮಾನಂದ
ನಿರ್ವೀರ್ಯವದು ಶಾಂತಿ !

ಮೋಸ ಹೋಗಿಹರೆಲ್ಲ
ಬರಿ ಭ್ರಮೆಯ ಮಬ್ಬಿನಲಿ !

ಆತ್ಮ ವಿದ್ಯೆಯು ಕನಸು
ಮೋಕ್ಷವೆಂಬುದು ಶೂನ್ಯ !

ಪ್ರೇಮ ಮಾಯೆಯ ಮುಸುಕು ;
ಕಸವು ತಿಳಿಗೇಡಿತನ !

ಸೌಂದರ್ಯ ಬರಿಹೊಳವು
ಕಲೆ ಹೇಡಿತನವಿಹುದು !

ಕಾವ್ಯ ಕಲೆ ಸಂಗೀತ
ವರ್ಣಕಲೆ ನೃತ್ಯವೂ,

ಬಾಳ ಹಾವಾಡಿಗನ
ಬಿಕ್ಕೆಯ ಮಂತ್ರಗಳು !

ದಯವು ದುರ್ಬಲತನವು
'ಧರ್ಮ' ಹಂದೆಯ ಹುಚ್ಚು !

ಶಸ್ತ್ರ ವಿದ್ಯೆಯೆ ಜ್ಞಾನ
ಮಿಕ್ಕೆಲ್ಲವಪಮಾನ !

'ಏಳಿ ವೀರರೆ ಏಳಿ
ವಿಶ್ವ ಚಾಲಕರೇಳಿ'!

ಸ್ವಾತಂತ್ರ್ಯವೇ ಸ್ವರ್ಗ
ಸ್ವಾತಂತ್ರ್ಯವೇ ಮೋಕ್ಷ

ಸತ್ಯಾನಂದ.

## ಬಾರಲವ್ರೊ ಚಿತ್ರಕನ—

ಲೆಕ್ಕಣಿಯ ಮಿಕ್ಕಿಸಲು
ಹೃದಯವನು ಉಕ್ಕಿಸಲು
ಜಾಣ್ಮೆಯನು ತೋರಿಸಲು
ಬಾರೆಲವೊ ಚಿತ್ರಕನೆ

ಚಿತ್ರವಿದೆ * ನಿನಗಾಗಿ
ಚಿತ್ರಿಸಲು ಇಲ್ಲಿ
ಎನ್ನೆದುರಿನಲ್ಲಿ.

ಮನದಣಿಯೆ, ಕಣ್ತಣಿಯೆ
ಚಿತ್ರವನು ಚಿತ್ರಿಸಲು
ಯುಕ್ತನಾಗುವೆ ನೀನು
ಮುಕ್ತನಾಗುವೆ ನೀನು

ಬಾರೆಲವೊ ಚತುರವನು
ತೋರಲಿಲ್ಲಿ
ಚಿತ್ರದಲ್ಲಿ.

ನಿರ್ಮಲದ ಚರ್ಮವನು
ಸುಜ್ಞಾನ ಶಿರವನ್ನು
ಭಕ್ತಿರಸ ರಕ್ತವನು
ದಿಟ ಉಳುವ ತೋಳ್ಗಳನು
ಸಟೆ ತುಳಿವ ಕಾಲ್ಗಳನು

---

[* ಭಾವಿಸಿದ ಚಿತ್ರ : ಬಸವಣ್ಣನವರದು]

ಅರಳಿದಾ ಹೃದಯವನು
ಧೈರ್ಯದಾ ಎದೆಯನ್ನು
ಸ್ಥೈರ್ಯದಾ ಮನವನ್ನು
ಉಚ್ಚೆಯದ ಭಾವವನು
ಲಿಂಗಮಯ ದೃಷ್ಟಿಯನು
ಲಿಂಗದಾ ಆತ್ಮವನು
ಬೆಳಗಿಸಲು ಚಿತ್ರವನು

ಬಾರೆಲವೊ ಚಿತ್ರಕನೆ
ಚಿತ್ರಿಸಲು ಇಲ್ಲಿ
ಎನ್ನೆದುರಿನಲ್ಲಿ.

ಬಳಲಿಸಿದ ಒಡಲನ್ನು
ಕರಗಿಸಿದ ಕರುಣವನು
ಕೊರಗಿಸಿದ ಕರುಳನ್ನು
ಮರುಗಿಸಿದ ಹೃದಯವನು
ಮರುಳಿಸುವ ಜಿಹ್ವೆಯನು
ಮಿಡಿಯಿಸಿದ ನರಗಳನು
ಮಿಡುಕಿದಾ ಮನವನ್ನು
ಮಮತೆಯಾ ಮೊಗವನ್ನು
ಮರೆವೆಯಾ ಮೋಹವನು
ಹನಿಗರೆವ ಕಣ್ಗಳನು
ಒರಲಿಸಿದ ಬಾಯನ್ನು
ಕೊರಲಿಸಿದ ತನುವನ್ನು

ಚಿತ್ರಿಸಲು ಬಾರೆಲವೊ
ಚಿತ್ರಕನೆ ಇಲ್ಲಿ
ಎನ್ನೆದುರಿನಲ್ಲಿ.

ಈಶನಾ ಶೀಲಗಳು
ವಿಾಸಲಾಗಿಯೆ ಬಂದು
ರೋಮ ರೋಮದೊಳಳಿದು
ತನುವ ತುಂಬಿಸುವಂತೆ
ಸತ್ಯ ತುಳ್ಕಿಸುವಂತೆ
ಆತ್ಮ ಉಕ್ಕಿಸುವಂತೆ
ಉಕ್ಕಿ ಸೂಳ್ನುಡಿವಂತೆ
ಧರ್ಮವನು ಎಸೆವಂತೆ
ಕರ್ಮವನು ಸುಡುವಂತೆ
ಶರಣರನು ಕರೆವಂತೆ
ನರ ಹರನೆ ಆದಂತೆ
ಹರ ನೆಲಕೆ ಇಳಿದಂತೆ

ಬಾರೆಲವೊ ಚಿತ್ರಕನೆ
ಚಿತ್ರಿಸಲು ಇನ್ನು
ಎಮ್ಮಣ್ಣನನ್ನು

ಶ್ರೀಸಿದ್ಧ

# ಯಾಚನೆ

ಕಾಳ ಕತ್ತಲೆಯಲ್ಲಿ
ಬಿರುಗಾಳಿ, ಸುರಿವ ಮಳೆ,
ಗುಡು ಗುಡಿಪ ಸಿಡಿಲುಗಳ
ಖಡಖಡಾಟಕೆ ಹೆದರಿ,
ಕಂಗೆಟ್ಟು, ಹಾಯಾಗಿ
ಹಾದಿಗಾಣದೆ ಬಳಲಿ,
ಖತಿಗೊಂಡ ಹೋತನಿಗೆ
ಮಿಂಚೊಂದು ಸತಿ ಸುಳಿದು
ಹಾದಿದೋರುವ ತೆರದಿ—

ಬಾಳಿಲ್ಲ ಬರಿ ಭ್ರಮೆಯು,
ಹುರುಳಿಲ್ಲ, ಸಾರವದು
ಎನಿತಿಲ್ಲವೆಂದರಿದು,
ಬೇಸರಕೆ ಬಲಿಯಾಗಿ
ಬಾಳು ಬೇಸರವಾಗಿ
ಸಾವ ಬಯಸುತಲಿರಲು
ಎನ್ನ ಬಾಳಲಿ ಅಂದು
ಬೆಳಕು ನೀಡಿದ ನೀನು—

ಎನ್ನಿರವ ನೋಡಿಯೂ
ಖಿನ್ನಳಾಗದೆ ಮೇಣು
ಕಣ್ಣೆತ್ತಿ ನೋಡದೆಯೆ
ಬನ್ನದೊಳೆ ಬೇಯೆಂದು
ಮುನ್ನಡೆದು ಹೋಗುವದೆ ?

ನಿನಗಾಗಿ ಎನ್ನಿರವು
ಇನಿದಾಗಿ, ನನೆದಾಗಿ
ಕೊನರಿ ಕವಲೊಡೆದಿರಲು
ಕೆನೆಕಿತ್ತು, ಗೊನೆಕಡಿದು,
ವನಗೆಡಿಸಿ, ಎನ್ನೆದೆಯ
ಸೌರಭವ ನೀಂಟದೆಯೆ
ಸರಿ ಸಂದು ಈ ಹೂವ
ಹುಡಿಯಲೆಸೆಯುವದೆ ?

ಬೇಡ ಬೇಡೆಲೆ ಕೆಳದಿ
ಕಾಡದಿರು, ಕೊಸರದಿರು,
ನೀಡು ಕರುಣೆಯ ಬಿಕ್ಕೆ,
ಬೇಡುವೆನು, ಬಳಸುವೆನು
ಕೂಡಿ ಕಾಪಾಡು ಒಮ್ಮೆ.

ಗಗನ ವಿಹಾರಿ

# ಬೇಡಿಕೆ

ಇಣಿರೆಕ್ಕೆ ನೋಡುತಿಹ ತಿಂಗಳನೆ ನೀ ಹೇಳು
ತಂಪನ್ನು ತರುತಿರುವ ಮಾರುತನೆ ನೀನುಸಿರು
ಕಂಡಿಹಿರೆ ನೀವೆನ್ನ ಮೋಹದಾ ಮೂರುತಿಯು
ಬಾಳಿನಾ ಬೆಳಕನ್ನು, ಜೀವದ ಉಸಿರನ್ನು
ತಿಳುಹಿರೈ ಆ ಎನ್ನ ಚೆಲುವಿಕೆಯ ಇರುವನು

ಮೋಡಗಳು ಮುತ್ತಿಹವು, ತಾರೆಗಳು ಬತ್ತಿಹವು
ಕಾಡು ಕತ್ತಲೆ ಇಂದು ತುಂಬಿಹುದು ಜೀವನದಿ
ಗುಡುಗುತಿಹ ಮೇಘಗಳ ಮಿಂಚು ಕಡಿಯುವ ತೆರೆದಿ
ಕಡಿದೋಗೆದು ಕತ್ತಲೆಯ, ಬೆಳಗಬಹುದೆಂಬಾಸೆ
ಮೂಡಿರಲು ಮನದೊಳಗೆ, ಬದುಕಿಹೆನು ಇದುವರೆಗೆ.

ತಿಳಿಸುವಿರಿ ನೀವಿಂದು ಎಂದು ನಾ ನಂಬಿರಲು
ಕುಲ ಕುಲನೆ ನಗುನಗುತ, ಲೆಕ್ಕಿಸದೆ ನೀವದನು
ಮರೆಯಿಸಲು ಆ ಮಾತ ಯತ್ನಿಸುವದುಚಿತನೆ ?
ಅರುಹಿರೈ, ತಿಳುಹಿರೈ, ಹೇಳಲಾರಿರ ನೀವು ?
ಹರುಷವೇ ನಿಮಗಿಂದು ನನ್ನ ಬಗೆಯನು ನೋಡಿ ?
ಕರುಣೆ ಇನಿತಿಲ್ಲದಯೆ ಕಾಠಿಣ್ಯ ತುಂಬಿರಲು

ಸುರರೆಂಬ ಪೆಸರೇಕೆ ನಿಮಗಿನ್ನು ಕಟುಕರೆ ?
ಹಾರುತಿಹ ಹಕ್ಕಿಯೇ ನೀನಾದರೂ ಹೋಗಿ
ತಾಣದೋರದೆ ಇರುವ ಒಲುಮೆಯ ಮೂರುತಿಯ
ಕಾಣುತೊಮ್ಮೆಯೆ ತಿಳಿಸು ನನ್ನೀ ಪರಿಯ.

ಶ್ರೀಸಂಗ

# ಸುಜ್ಞಾನ

೧

ಬಾ ಬೇರು ಕರ್ಮಾನು ಸಾರಿ ನೀ ಸುಜ್ಞಾನ
ನಾ ' ಬೇರು ' ಎಂಬುದರ ಚಿಂತೆಯೇಕೆ ;
ಆ, ಭಾರಿ ಕರಿನೋಡ ಸುರಿವಾಗ ಹಿರಿಕಿರಿಯ
ಭೂ ಭಾರಗಳ ಗಣನೆ ಮಾಡುತಿಹುದೆ ?

೨

ಮರೆಯೊಳೋ, ತೆರೆಯೊಳೋ, ಗಿರಿಯೊಳೋ ಅಡಗಿರ್ದ
ಪರಿಯನಾ ರವಿಯುರಿದು ಮೂಡುತಿಹನೆ ?
ಹರಿದೋಡು ತಿಹುದೆಂತು ? ಕಗ್ಗತ್ತಲೆಯು ಜವದಿ
ಅರಿದು ನೀನದನು ಸುರವ ರೊಳಗುದಿಸು.

೩

ನಿನ್ನ ರೂಪವ ಕಾಣಬಯಸಿಯು ಕಾಣದವ—
ರುನ್ನತೋನ್ನತನೆಂದು ಪೊಗಳಿರುವರೆ ?
ಸುಣ್ಣ ಮನೆಕೊಳೆಯ ಕಳೆವುದು ಕಳೆಯ ತರುವುದ
ಬಣ್ಣವಿದು ನಿನಗೆ ಸರಿ ಎಂದಿರುವದೆ ?

೪

ಮನವೆ ಮಂದಿರವಾಗಲೆನಿತು ನೀನದರೊಳಿಹೆ
ಘನ ದೋಷ ಭಿತ್ತಿಗಳು ಸುತ್ತಿರುವವು

ಅನುದಿನದಿ ತೊಳೆ ತೊಳೆದು ಸಿಂಗರಿಸಿ ಬೇಸತ್ತೆ
ಮಿನುಗು ನೀನೊಮ್ಮೆ ಎಂತಹುದೊ ಕಾಂಬೆ.

೫

ಗಾಳಿಯನೆ ಕೂಳನಾಗಿಸಿಕೊಂಡು ತಪಿಸಿದರು
ಭಾಳಲೋಚನನ ಭಜಿಸಿದರು ಬಿಡದೆ
ಹೇಳಿದರು, ಕೇಳಿದರು ಶಾಸ್ತ್ರದೊಳಗಣ ಕೀಲ
ಮೇಳಿಲ್ಲ ನೀನೋರ್ವ ನಿಲ್ಲದಿರಲು.

೬

ಇವರು ಸಂಸಾರಿಗಳು, ಇವು ಯೋಗಿಗಳೆಂಬ
ಕುವಿಚಾರ ನಿನಗಿಲ್ಲ ಪರಿಭಾವಿಸಿ,
ಅವರವರ ಕರ್ಮಪಾಕವನರಿತು ನೀನುದಿಸು—
ವವಧಿಯನು ವಾಗೀಶಗಾಗಿ ಸವೆಸು.

ವರಕವಿ ಶ್ರೀವಾಗೀಶ.

# ನಂಬಲೇತಕೆ? ಹೇಗೆ?

ನಂಬಲೇತಕೆ ? ಹೇಗೆ ? ಈ ಮರುಳು ಮಾನವರ

ನಂಬಿ ಏಕಿನ್ನು ನೀ ಮರುಳಾಗುವಿ—!!

ನಂಬಿದನರರು ನಿನ್ನನ್ನು ದಿನದಿ ಶಪಿಸುವರು
ನಂಬಲಾರದೆ ಇರಲು ನಿಂದಿಸುವರು.

ನಂಬಿದರೆ ಕಂಠಕ್ಕೆ ಗರಗಸವ ತಂದೊಡ್ಡಿ
ಹರಣಕೊಂಡೊಯ್ಯ್ವ ಯಮದೂತರಾಗುವರು.

ನಂಬಿ ನೀನವರಲ್ಲಿ ನಿನ್ನಂತರಂಗವನು
ಬಿಚ್ಚಿನೀ ಕಷ್ಟಕ್ಕೆ ಗುರಿಯಾಗಬೇಡ.

ನಂಬು ! ನಂಬೂ ! ನಂಬು ! ನಂಬು ! ಎಂದೊರಲುವ
ಚಿತ್ತಶೂನ್ಯರ ಮಾತನಾಲಿಸಲು ಬೇಡ.

ಆಲಿಸಲು ನೀ ನಿನ್ನ ಮನಸೆಳದಿಯಾದರೆ
ಎಚ್ಚರಿಕೆ ! ಎಚ್ಚರಿಕೆ ! ಎಂದ್ಹೇಳುವೆ.

ನಿನ್ನಂತರಂಗವದು ನಂಬಲನುವಾದರೆ
ದೃಷ್ಟಿ ಪ್ರಸಾರಣೆಯ ಮೊದಲು ನೀಮಾಡು.

ಅವರಂತರಂಗವನು ಮೊದಲು ನೀನರಿತಿರಲು
ಅವರ ನೀನಂಬಲು ಬೇಗಲನುವಾಗ.

ಪರರಂತರಂಗವನು ಅರಿಯದೇ ನೀನವರ
ಸ್ನೇಹವೆಳಸಿದಿಯಾದರಿನ್ನು ಮರಣ.

ನಂಬು ನೀನವರನ್ನು ನಿನ್ನನಂಬಿದರನ್ನು
ನಂಬಿನೀ ಬಾಳು ಆದರ್ಶನಾಗಿ.

**ದಿನಮಣಿ**

# ಕಲ್ಯಾಣ ವಾಣಿ

ಹತ್ತು ಮೇಲೆರಡು ಶತಮಾನದಲಿ, ಕರುನಾಡು,
ಮುತ್ತಿತ್ತು ಅಜ್ಞಾನ ತಿಮಿರದಿ, ಕಾರ್ಮೋಡದಿ,
ಎತ್ತನೋಡಿದಡತ್ತ, ಕುಹಕ, ಕುಟಿಲ, ಭೇದಭಾವ, ನಲಿನಲಿದಾಡುತಿರಲು,
" ಸತ್ಯವೇ ಜನನಿ, ಜ್ಞಾನವೇ ಜನಕ, ಶಾಂತಿಯೇ
ಪತ್ನಿ, ಧರ್ಮವೇ ಸೋದರ, ದಯವೇ ಸಖ ಕ್ಷಮೆಯೇ
ಪುತ್ರ" ಎಂಬತತ್ವವ ಬೀರಲು, ಕಲ್ಯಾಣವಾಣಿ ಮೊಳಗಿತ್ತು ಕೋಲ್ಮಿಂಚಿತು||೧||

ಶಿವಶರಣರನು ನೆರೆಯಿಸಿತು, 'ಕಲ್ಯಾಣವಾಣಿ'
ಶಿವಮತನ ಸಾರಿತಾಘನ ಗಂಭೀರವಾಣಿ.
ಶಿವಭಕ್ತರನು, ಶ್ವಪಚರನು, ಪತಿತರನು, ಸುಪಥಕೆಳೆಸಿತಾ ಮಧುರವಾಣಿ !
ಶಿವಭಕ್ತಿ ಸುಧೆಯನು, ಎಣಿಸಿತಾ ದಿವ್ಯವಾಣಿ
ಶಿವಭಕ್ತರನೊಂದು ಗೂಡಿಸಿತಾ ಸುರವಾಣಿ
'ಶಿವಭಕ್ತರನೆ ಕುಲಜ' ನೆಂದರಸಿತಾ ಧೀರವಾಣಿ ; ವರ ಕಲ್ಯಾಣವಾಣಿ ||೨||

ಸಮಾನತೆಯ ಸಂದೇಶವ ಬೀರಿತಾ ವಾಣಿ
ಸಮಾಜದಲಿ ಮೇಲ್ಕೀಳನಳುಕಿಸಿತಾವಾಣಿ
ಸಮಾಜದಿ ಸರೋಜ ಮುಖಿಯರಿಗೆ, ಸ್ವಾತಂತ್ರ್ಯವ ದೊರಕಿಸಿತಾ ಅಮರವಾಣಿ
ವಿಮಲ ಖಾದಿಯ ತತ್ವವ ಬೋಧಿಸಿತಾವಾಣಿ
ನಮಗೆ, ಕೈಗಾರಿಕೆಯ ಮಹಿಮೆ ತೋರಿಸಿತಾವಾಣಿ
ಅಮಮ 'ಕಾಯಕವೆ ಕೈಲಾಸ'ಎಂದುಸಿರಿತು; ಗರ್ಜಸಿತು; ಕಲ್ಯಾಣವಾಣಿ||೩||

ಅನುಭವದ ವಚನದ, ತಿರುಳದು ವಾಣಿ
ಮನದ ಮಲಿನ, ತೊಳೆಸಿದಮೃತವಾಣಿ
ತನುವನಳಬೇಡಿ, ' ತನುವೇ ಆತ್ಮದೇವನ ಗುಡಿ ' ; ಎಂದವಾಣಿ

ಜನದಿ, ' ನುಡಿದಂತೆ ನಡೆ ' ಎಂದವಾಣಿ
ಜ್ಞಾನ ನುಡಿಯನು ಸೂರೆ ಮಾಡಿದ ವಾಣಿ
' ವಿನಯ, ಮೃದು ವಚನಗಳೇ ಜಪ ' ವೆಂದ ' ಕಲ್ಯಾಣವಾಣಿ ' ||೪||

ಇದು, ವೇದವಾಕ್ಯನು ಮೀರಿದವಾಣಿ
ಇದು, ಶಸ್ತ್ರ, ಶಾಸ್ತ್ರವ ಜಯಿಸಿದವಾಣಿ
ಇದು, ಷಟ್‌ಸ್ಥಲ, ಅಷ್ಟಾವರಣ ಗಳನುಸಿರಿದ ಮಹಾವಾಣಿ ;
ಇದು ಭಕ್ತಿಯು ಬೆಳಕನು ತೋರಿದ ವಾಣಿ
ಇದು ' ಅನುಭವ ಮಂಟಪದ ' ಹೃದಯವಾಣಿ
ಇದು ' ದಯವಿರಲಿ ಸಕಲ ಪ್ರಾಣಿಗಳಲೆಂದ '**ಕಲ್ಯಾಣ ವಾಣಿ**' ||೫||

**ಸಂಗನಗೌಡ ಪಾಟೀಲ**

# ವಚನ ಗೀತಗಳು

೧

ಹಣವುಳ್ಳವರು ಹಣದೆ ಪೂಜಿಸುವರು ।
ಗುಣಿಗಳು ಗುಣದೆ ಪೂಜಿಸುತಿಹರು ॥
ಹಣವಿಲ್ಲದ ಗುಣವಿಲ್ಲದ ನಾನು ಅಣುಭಕ್ತಿಯು ಸೇವೆಯ ನೀಡಲು ॥
ಫಣಿಭೂಷಣ ಸಿರಿಮಲ್ಲಯ್ಯನ ನೀ ।
ತಣಿದು ತಣಿದು ಕುಣಿದಾಡುವೆಯಯ್ಯಾ ॥

೨

ವಜ್ರ ಕುಸುಮವಾಗುವದು ।
ಆ ಬೆಂಕಿ ಮಂಜಾಗುವದು ।
ಸಾಗರ ನೆಲವಾಗುವದು ।
ಆ ಕಡುವೈರಿಯು ಸಖನಾಗುವನು ॥
ಗರಳವಮೃತವಾಗುವದು ಆಗಿರಿ ಮಲ್ಲೇಶನು ಕರುಣಿಸಿದೊಡನೆ ॥

೩

ಯೋಗಿ ಎಂಬೆನೆ ನಿನಗೆ, ಭೋಗಿ ಭೂಷಣನಾದೆ ।
ವಿಷವ ಕುಡಿದವನೆನ್ನೆ ಅಮೃತನಾದೆ ॥
ಶಸ್ತ್ರ ಧರನೆಂಬನೆ, ವೃದ್ಧ ತಾಪಸಿಯಾದೆ ।
ಶಾಂತನೆಂಬನೆ ನಿನಗೆ, ರುದ್ರನಾದೆ ॥
ಕಾಮಾರಿ ಎಂಬೆನೆ ಪಾರ್ವತೀಪತಿಯಾದೆ ।
ತಿರುಕನೆಂಬನೆ, ತ್ರಿಭುವನೇಶನಾದೆ ॥
ಶುದ್ಧ ನೀನೆಂಬೆನೆ, ರುಂಡಮಾಲೆಯಧರಿಸಿ ।

ನಿನ್ನ ರೂಪವದೆಂತೋ ನಾ ತಿಳಿಯದಾದೆ ||
ಎನ್ನಯ್ಯ ಶ್ರೀಗಿರಿಯ ಮಲ್ಲಿಕಾರ್ಜುನದೇವ |
ಹಗಲು ಕತ್ತಲೆಯ ಕೂಡಿ ಕೊಂಡಂತಿರೆ ||
ಭಕ್ತರಾಗು ಹಿಂಗಿ ಲಿಂಗರೂಪವತಾಳಿ |
ಕಂಗಳಿಗೆ ಕಾಣಲ್ಕೆ ಬಂದಂತಿರೆ ||

**ವರಕವಿ ವಾಗೀಶ.**

# ಹರಳಯ್ಯ

ಇಂದು ನಾನಿಮಗೊಂದು
ಅಳಿದು ಉಳಿದಿಹ ಶರಣ
ಆದಿಜನನೋರ್ವನ
ಕಥೆಯನ್ನು ಹೇಳುವೆನು
ಶಾಂತಿಯಿಂದಲಿ ನೀವು
ಮನಗೊಟ್ಟು ಕೇಳುವದು.

ಕಲ್ಯಾಣ ನಗರವನು
ಕೇಳಿ ಮರೆತವರಿಲ್ಲ
ಬಿಜ್ಜಳನ ಕಾಲದೊಳು
ಆ ನಗರ ಸಿರಿಯನ್ನು
ಬರೆದ್ಹೇಳಲಳವಲ್ಲ.

ಜೈನಪಂಡಿತರಿಂದ
ಶೈವ ಜಂಗಮರಿಂದ
ಶರಣ ಶರಣೆಯರಿಂದ
ತುಂಬಿರುವುದಾ ನಗರ
ವರ್ಣಭೇದವನಳಿದು
" ಹೊಲೆಯರೂರ್ಹೊರಗಿಲ್ಲ
ಹೊಲಸುತಿಂಬುವ ಹೊಲೆಯ "
ಎಂಬ ತತ್ವವ ಬೀರಿ
ಸಂಪ್ರದಾಯದ ಮೂಢ
ಕಲ್ಪನೆಯ ಹೊರದೂಡಿ
" ಮನುಜರಾದವರಲ್ಲಿ

ಉಚ್ಚ ನೀಚಗಳಿಲ್ಲ
ನೀಚರಾದವರೆಲ್ಲ
ಹುಟ್ಟಿ ಸಾಯುವ ತನಕ
ನೀಚರಾಗುಳಿಯದಯೆ
ಸತ್ಸಂಗದಿಂ ತಮ್ಮ
ಕೆಟ್ಟಮನವನು ತೊಳೆದು
ಶುದ್ಧ ಮನದವರಾಗಿ
ಉಚ್ಚರಾಗಲು ಬಹುದು"
ಎಂಬ ಸಮತೆಯ ಭಾವ
ವನು ಬೀರಿಜಗಕೆಲ್ಲ
ಪಾಠ ಕಲಿಸಿದ ನಗರ.

ಇಂಥ ಈ ನಗರದೊಳು
ಹರಳಯ್ಯ
ಆದಿಜನ ಶಿವಶರಣ
ತನ್ನ ಪತ್ನಿಯ ಕೂಡ
"ಕಾಯಕವೆ ಕೈಲಾಸ"
ಎಂಬ ಮಾರ್ಗವ ಹಿಡಿದು
ಹರನ ಭಕ್ತರಿಗಾಗಿ
ಮೊಚ್ಚೆ ಹೊಲಿಯುವ ಕೆಲಸ
ಉಚ್ಚವೆಂದರಿತಿಹನು
ಕಾಯವೆಲ್ಲವ ಸವೆಸಿ
ಕಾಯಕದಿ ಹಣಗಳಿಸಿ
ದುಃಖಿತರ ಸಲುವಾಗಿ
ವೆಚ್ಚಮಾಡುತಲಿದ್ದ.

ಒಂದು ದಿನ ಹರಳಯ್ಯ
ಬೀದಿಯಲಿ ಹೊರಟಾಗ

ಶರಣ ಸೇವಕನಾದ
    ಚನ್ನಬಸವಣ್ಣನಿಗೆ
ಧರ್ಮಗುರು ತಾನಾದ
    ಅಂದಿನಾ ಶರಣರಿಗೆ
ಮೆಚ್ಚುಗೆಯ ಮಗುವಾದ
    ಬಾಲಸತ್ಯಾಗ್ರಹಿಯು
ಬಸವೇಶ ದೇವನಿಗೆ
    ಎದುರಾಗಿ
ಶೈವ ಪದ್ಧತಿಯಂತೆ
    " ಶರಣು " ಎನ್ನಲು ಅವರು
ಆತನಿಗೆ
    ಆದಿಜನ ಶರಣನಿಗೆ
" ಶರಣು ಶರಣೆಂ " ದೆನಲು,
    ಹರಳಯ್ಯ
" ಓ ನನ್ನ ಗುರುದೇವ
    ನಾ ನಿಮ್ಮ ಅಡಿಯಾಳು
' ಒಂದು ಶರಣೆನೆ ' ನೀವು
    ' ಎರಡು ಸಲ ಶರಣೆಂದು '
ನನ್ನ ಪುಣ್ಯವನೆಲ್ಲ
    ಹಾಳುಮಾಡುವದೇಕೆ ?
ಕುಲದಲ್ಲಿ ಕೀಳಾದ
    ಹುಲುಮನುಜನಾದೆನಗೆ
ಇಷ್ಟು ಘನತೆಯದೇಕೆ ? "
    ಹೀಗೆಂದು
ಅಶ್ರುಗಳ ಸುರಿಸುತ್ತ
    ಗಡಗಡನೆ ನಡುಗುತ್ತ
" ಗುರುದೇವ ಮನ್ನಿಪುದು

ನನಗಾಗಿ ಮರುಗುವದು
ಹಾಳಾದ ಪುಣ್ಯವನು
ಮತ್ತೆ ತಂದೊಡ್ಡುವದು
ನನ್ನ ಪಾಪವನೆಲ್ಲ
ಕಳೆದು ಹೋಗಲು ಬೇಗ
ನನ್ನ ಮೊರೆ ಕೇಳುವದು."

" ಹರಳಯ್ಯ ಏನೆಂದೆ ?
ಕೀಳು ಮನುಜನೆ ನೀನು ?
ನೀನು ಕೀಳೆನಿಸಿದಡೆ
ಕಲ್ಯಾಣ ನಗರದೊಳು
ಮೇಲೆಂಬ ಜನರಾರು ?
ಉಳಿದ ಸಂಸ್ಕೃತಿಯಲ್ಲಿ
ಮೇಲು ಕೀಳುಗಳೆಂಬ
ದ್ವೈತವದು ಇರಬಹುದು,
ಈ ನಮ್ಮ ಜನರಲ್ಲಿ
ಆದಿ ಹಿಂದುಗಳಲ್ಲಿ
ಶಿವನ ಸಂಸ್ಕೃತಿಯಲ್ಲಿ
ಈ ಎರಡು ಶಬ್ದಗಳ
ಗೊಂದಲವ ಕಿತ್ತೊಗೆದು
ಶುದ್ಧಾತ್ಮನಾದವನೆ
ಭಾರತದ ಬಡತನವ
ಕಳೆಯಲೋಸುಗವೆಂದು
ಆಸಕ್ತಿ ಇಲ್ಲದಲೆ
ದುಡಿವವನೆ
ಮೇಲರಿಗೆ ಮೇಲಹನು "
ಎಂದ್ಹೇಳಿ ಮುಂದೆ ಸಾಗಲು;.

ಇತ್ತ ಆ ಹರಳಯ್ಯ
ತನ್ನ ಸದನಕೆ ಪೋಗಿ
ಪ್ರಿಯ ಪತ್ನಿಯನು ಕರೆದು
ಆದಸಂಗತಿಯೆಲ್ಲ
ವಿಶದವಾಗುಸಿರಿದನು.

ಇದ ಕೇಳಿ ಆ ಶರಣೆ
“ ಇದಕೇಕೆ ಮರುಗುವದು
ಇಷ್ಟು ಪೇಚಾಡುವದು
ಬಸವರಾಜನ ಶರಣು
ನಮ್ಮಮೇಲಿಹುದೆಂದೆ ?
ಅದರ ಬೆಲೆಯನು ನಾನು
ಇನಿತರಲೆ ಪೇಳುವೆನು ”
ಎಂದೆನಲು, ಹರಳಯ್ಯ
“ ಓ ನನ್ನ ಪ್ರಿಯ ಸತಿಯೆ
ಅದರ ಬೆಲೆಯನು ನಾವು
ಎಷ್ಟೆಂದು ಕಟ್ಟುವದು ?
ನಮ್ಮ ಶಿರವನೆ ಕೊಯ್ದು
ಅವರ ಪಾದದ ಮೇಲೆ
ಇಟ್ಟರೇಂ ಸರಿಯಹುದೆ ?
ಏನೆಂಬುದನು ನೀನು
ತೀವ್ರವಾಗುಸಿರಿದರೆ
ಅದನೊಯ್ದು ಬಸವನಿಗೆ
ಈಗಲೇ ಸಲ್ಲಿಸುವೆ ”
ಎಂದೆಂದು ಮೊರೆ ಇಡಲು,
“ ಓ ದೇವ ಶರಣಮಣಿ
ಬೆಂದಮನದಗ್ನಿಯನು

ಶಾಂತ ಮಾಡಲುಬೇಕು "
ಎಂದೆನುತ ಆ ದೇವಿ
ತನ್ನ ದೇವನ ದುಃಖ
ವನು ನೋಡಿ ಸಹಿಸದೆಯೆ
" ನಮ್ಮ ಚರ್ಮವ ಸುಲಿದು
ಬಸವದೇವನಿಗಾಗಿ
ಪಾದರಕ್ಷೆ ಯ ಮಾಡಿ
ಕಳೆದ್ಹೋದ ಪುಣ್ಯವನು
ಮತ್ತೆ ಗಳಿಸಲುಬೇಕು "
ಎಂದೆಂದ ಪತ್ನಿಯನು
ಸಂತೋಷದಿಂ ನೋಡಿ
ಹರಳಯ್ಯ ಆನಂದ ಬಾಷ್ಪಗಳ
ಧಾರೆಯನು ಸುರಿಸಿದನು.

ಮೇಣು
ತನ್ನ ಆ ಪತಿವ್ರತೆಯು
ಸಲಹೆಯಂತೆಯೆ ನಡೆದು
ಏಳೇಳು ಜನ್ಮಗಳ
ಪಾಪವೆಲ್ಲವ ತೊಳೆದು
ಶುದ್ಧನಾಗಲುಬೇಕು
ಎಂಬ ಭಾವನೆಯಿಂದ
ತನ್ನ ಬಲದೊಡೆಯಲ್ಲಿ
ಬಂದು ಪಾದದರಕ್ಷೆ
ಯಷ್ಟು ಚರ್ಮವ ಕೊಯ್ದು
ಉಳಿದ ಚರ್ಮಕ್ಕಾಗಿ
ಎಡದ ತೊಡೆಯನು ಹಿಡಿಯೆ
ಅಲ್ಲಿಯೆ ಕುಳಿತಿರುವ

ಶರಣ ಸತಿ ಶಿವಶರಣೆ
"ಹಾ, ದೇವ
ನಾ ನಿಮ್ಮ ಅರ್ಧಾಂಗಿ
ಸುಖದುಃಖದೊಳಗೆಲ್ಲ
ಸಮ ಭಾಗಿಯಾಗಿರಲು
ಈ ಕಾರ್ಯವೆಲ್ಲವನು
ನೀವು ವಹಿಸುವುದ್ಹೇಗೆ ?
ನನ್ನ ಕರ್ಮವನೆಲ್ಲ
ಹಾಗೆಯೇ ಕೂಡಿಟ್ಟು
ನೀವು ಪುಣ್ಯವಗಳಿಸಿ
ಮುಕ್ತಿ ಪಡೆಯುವದ್ಹೇಗೆ" ?
ಎಂದೆನಲು, ಹರಳಯ್ಯ
ಮರುಮಾತ ನುಡಿಯದೆಯೆ
ಉಳಿದ ಚರ್ಮಕ್ಕಾಗಿ
ಅವಳ ಎಡತೊಡೆಯಲ್ಲಿ
ಚರ್ಮವನು ತೆಗೆದಿಹನು
ಹೀಗೆ ಈರ್ವರು ಕೂಡಿ
ಪಾದರಕ್ಷೆಯ ಮಾಡಿ
ಶುಭ್ರ ಬಟ್ಟೆಯಲಿಟ್ಟು
ಬಸವೇಶದೇವನಿಗೆ
ಅರ್ಪಿಸಲು ಬೇಕೆಂದು
ಹರಳಯ್ಯ ಅವುಗಳನು
ತೆಗೆದು ಮಹಮನೆಗ್ಹೊರಟ.

ದಾರಿಯಲಿ ಮಧುವಯ್ಯ
ಕುಲದಲ್ಲಿ ಬ್ರಾಹ್ಮಣನು
ಬಿಜ್ಜಳನ ರಾಜ್ಯದಲಿ
ಅವನೊಬ್ಬ ಅಧಿಕಾರಿ

ತನ್ನ ಕುಲವೇ ಶ್ರೇಷ್ಠ
    ಉಳಿದವೆಲ್ಲವು ಕೀಳು
ಎಂದೆಂದು ತಿಳಿದಿರುವ
    ಜಾತ್ಯಂಧ ಅಧಿಕಾರಿ
ಯಜ್ಞದಿಂದಲೆ ಇಹವು
    ಯಜ್ಞದಿಂದಲೆ ಪರವು
ಎಂದೆಂದು ಅಂತರಗ್ನಿ
    ಹೋತ್ರವನು ಮರೆತು
ಬಾಹ್ಯದಾಡಂಬರದಿ
    ಸಿಲುಕಿ ಪೇಚಾಡುತಿಹ
ಯಜ್ಞಸೇವಾಧಾರಿ
    ಹರಳಯ್ಯಗೆದುರಾಗಿ
"ಯಾವೆಡೆಗೆ ಹೊರಟಿರುವೆ ?
    ಅದು ಏನು ?
ಶುಭ್ರಬಟ್ಟೆಯಲಿಟ್ಟು
    ಇನ್ನೆಲ್ಲಿಗೊಯ್ಯುತಿಹೆ" ?
ಎಂದೆನಲು, ಹರಳಯ್ಯ
    ನಮ್ರ ಭಾವನೆಯಿಂದ
"ಮಧುವಯ್ಯ
    ಅಣ್ಣ ಬಸವಣ್ಣನಿಗೆ
ಪಾದರಕ್ಷೆಯ ಮಾಡಿ
    ಅರ್ಪಿಸಲು
ಮಹಮನೆಗೆ ನಡೆದಿರುವೆ"
    ಇದಕೇಳಿ ಮಧುವಯ್ಯ
"ಬಿಸುಡು ಅವುಗಳ ನಿಲ್ಲಿ
    ಹೊಲೆಯ ಈ ತಮ್ಮನಿಗೆ
ಕುಲಭ್ರಷ್ಟ ಆ ಅಣ್ಣ

(ರಕ್ಷೆಗಳನ್ನು ನೋಡಿ)
ಎಂಥ ಬಂಧು ಪ್ರೇಮ
ತನ್ನ ಮೈದೊಗಲನ್ನೆ
ತೆಗೆದು ಮಾಡಿಹ ರಕ್ಷೆ
ಬಲು ಅಂದವಾಗಿಹವು
ಮೃದುತನವು ಮನೆಮಾಡಿ
ಇವುಗಳಲಿ ಕುಳಿತಿಹುದು,
"ಬೆಲೆ ಎಷ್ಟೊ ?
ಅವನೆಷ್ಟುಕೊಡುತಿಹನೊ
ಅದರ ಇಮ್ಮಡಿ ನಾನು
ನಿನಗಿಲ್ಲಿ ಕೊಡಲಿರುವೆ"
ಎಂದೆನಲು, ಹರಳಯ್ಯ
"ಮಧುವಯ್ಯ
ಚಾಲುಕ್ಯ ರಾಜ್ಯವನು
ಕೊಟ್ಟರುಂ ಇವುಗಳನು
ನಾನಿನಗೆ ಅರ್ಪಿಸೆನು
ನನ್ನ ಮೇಲಿನ ಭಾರ
ಕಡಿಮೆ ಮಾಡಲು ಮಾಡಿ
ದೀರಕ್ಷೆಗಳ ತಂದು
ನಿನಗೆ ಅರ್ಪಿಸೆ ನಾನು.

ಶುದ್ಧ ಮನದಿಂ ತನ್ನ
ಎಡ ತೊಡೆಯ ಚರ್ಮವನು
ಹರನ ಭಕ್ತನಿಗಾಗಿ
ಕೊಟ್ಟಿರುವ ಪತಿವ್ರತೆಯ
ಮೈದೊಗಲ ನಿನ್ನಿಂದ

ತುಳಿಸಿ ನಾನಿಲ್ಲಿ ಸಹ
ಪಾಪಿಯಾಗಲು ಆರೆ."

ಇದನೆಲ್ಲ ಕೇಳುತ್ತ
ನಿಂತಿರುವ ಮಧುವಯ್ಯ
ಸಿಟ್ಟಿನಿಂದುರಿಯುತ್ತ
ಹಲ್ಲುಗಳ ಕಡಿಯುತ್ತ
ಆವುದನು ಲೆಕ್ಕಿಸದೆ.

ರಕ್ಷೆ ಧಾರಣೆಮಾಡಿ
ತನ್ನ ಮನೆ ಕಡೆಗ್ಹೊರಟ.

ಇತ್ತ ಈ ಹರಳಯ್ಯ
ದುಃಖದಿಂದೊಡಗೂಡಿ
"ನನ್ನ ಪಾಪದ ಎಲ್ಲೆ
ಮತ್ತೆ ಹೆಚ್ಚುತ್ತಿಹುದು"
ಎಂದಂದುಕೊಳ್ಳುತ್ತ
ಮನೆಗ್ಹೋಗಿ ತಲುಪಿದನು.

ಆದರೇಂ
ಹರನ ಭಕ್ತರ ಕೆಣಕಿ
ಮನುಜರೇಂ ಉಳಿಯುವರೆ ?
ಅವರ ಮನದಗ್ನಿಯಿಂ
ಹೊರಟ ಕಿಡಿಗಳು ತಾವು
ಪಾಪಿಗಳ ತಂಡವನು
ಸುಡಲಾರ ದಿರುತಿಹವೆ ?
ಹಿಂದೆ ದ್ವಾಪರದಲ್ಲಿ
ಶ್ರೀ ಕೃಷ್ಣದೇವನನು
ನೋಯಿಸಿದ ಕೌರವರು

ಅಳಿಯರೇಂ ಲೋಕದೊಳು ?
ಭಕ್ತ ಮಾರ್ಕಂಡನನು
ಎಳೆಯಲ್ಯೆದಿದ ಯಮನು
ಜಯವನೇಂ ಪೊಂದಿಹನೆ ?
ಇಲ್ಲ, ಎಂದಿಗು ಇಲ್ಲ,
ಭಕ್ತ ಹೃದಯದ ಮುಂದೆ
ವಿಶ್ವಶಕ್ತಿಯು ಜೊಳ್ಳು.

ಮಧುವರಸ ಮನೆಗ್ಹೋದ
ಮೇಲಲ್ಲಿ ಆತನಿಗೆ
ಮೈಯೆಲ್ಲ ಉರುಪಿಟ್ಟು
ಕುದಿಯಲಾರಂಭಿಸಿತು.

ಅವನೇನು ಬಡವನೇಂ ?
ಉರುಪಿಟ್ಟ ಮೈಯಲ್ಲಿ
ಔಷದ್ಹಚ್ಚುವರ್ಹಲರು
ಹಾಲು ತುಪ್ಪವ ಹನಿಸಿ
ತಂಪು ಮಾಡುವರ್ಹಲರು
ಶ್ರೀಗಂಧವನು ತೇದು
ಮೈಗೆ ತೊಡಿಸುವರ್ಹಲರು
ಇಂತಿಪ್ಪ ಪರಿಯಲ್ಲಿ
ಅವನ ಉಪಚರಿಸಿದರು
ದಾಹ ಹೆಚ್ಚುತಹೋಯ್ತು.

ಕಡೆಗೆ ಎಲ್ಲರು ಸೋತು
ದಿಕ್ಕೆಟ್ಟು ಕುಳಿತಿರಲು

ಮನೆಯ ಬಡ ಆಳುಗಳು
ನೀರ ಕೊಡಗಳ ತಂದು
ಸುರುವಲುಪಕ್ರಮಿಸಿದರು.

ಮಧುವಯ್ಯ ಅವರನ್ನು
"ಪ್ರಿಯ ನನ್ನ ಮಕ್ಕಳಿರಾ !
ಯಾರ ಕೈಪುಣ್ಯದಿಂ
ನನ್ನ ದಾಹವು ಅಡಗಿ
ಕಾಯ ತಂಪಾಗುವುದೊ
ಅವರನ್ನು ಸಿಂಗರಿಸಿ
ಬಡತನವ ಕಳೆಯುವೆನು."

ಎಂದಂದು ದೈನ್ಯದಿಂ
ದವರ ಪುಣ್ಯದಭಿಕ್ಷೆ
ಬೇಡುತಿಹ ಒಡೆಯನನು
ಕಂಡು ಆ ಸೇವಕರು
ಶುದ್ಧ ಭಾವನೆಯಿಂದ
ದೇವನನು ನೆನೆಯುತ್ತ
ನಾ ಮುಂದೆ ತಾ ಮುಂದೆ
ನೀರು ಹನಿಸುತ್ತಿಹರು.

ಹೀಗಿರಲು ಮಧುವಯ್ಯ
ಒಬ್ಬ ಕನ್ಯೆಯ ಕೊಡದ
ಅಮೃತ ಧಾರೆಯ ಸುರಿಯೆ
ತನ್ನ ದೇಹದ ದಾಹ
ಕಡಿಮೆಯಾದುದ ಕಂಡು
"ಎಲೆ ತಾಯಿ
ನಿನ್ನ ಪುಣ್ಯವ ಕೊಟ್ಟು

ನನ್ನನುಳಿಸಿದೆಯವ್ವ
ಈ ತೀರ್ಥವನು ನೀನು
ಎಲ್ಲಿಂದ ತಂದಿರುವೆ.” ?

ಎಂದೆನುತ ಸಂತೈಸೆ
ಆ ಕನ್ಯೆ ನಡುಗುತ್ತ
ಅವನ ಪಾದದ ಮೇಲೆ
ತನ್ನ ಮಸ್ತಕವಿಟ್ಟು
“ಎನ್ನರಸ ಕೇಳುವುದು
ಎನ್ನ ತಪ್ಪನು ಕ್ಷಮಿಸಿ
ಎನ್ನ ಕಾಪಾಡುವದು.”

“ಎಲೆ ಮುಗುದೆ
ನೀನು ತಂದಿಹ ತೀರ್ಥ
ದಿಂದೆನ್ನ ಮೈ ಉರುವು
ಶಮಿಸಿ ಶಾಂತವಾಗಿಹುದು
ಅಭಯ ವೀಯುವೆ ನಿನಗೆ
ಇದ್ದ ಸಂಗತಿಯನ್ನು
ಮುಚ್ಚದೆಯೆ ಹೇಳುವದು.”

“ಮಧುವರಸ
ಲಿಂಗ ಪೂಜಕಳಾನು,
ನಿಮ್ಮ ಆಜ್ಞೆಯ ವಿಸಾರಿ
ಲಿಂಗ ಪೂಜೆಯೊಳಿಹೆನು.

ಶಿಕ್ಷೆಯಾಗುವದೆಂದು
ನಿತ್ಯದಲಿ ಆ ಪೂಜೆ
ಮುಚ್ಚಿ ಮಾಡುತಲಿದ್ದೆ.

ಆಗಾಗ ಮಂಟಪದಿ
ನಡೆವ ಗೋಷ್ಠಿಗಳಲ್ಲಿ
ಕೂಡಿ ನಲಿಯುತ್ತಿದ್ದೆ.

ಹೀಗಾಗಿ ನನಲ್ಲಿ
ಶಿವಶರಣರಲಿ ಶ್ರದ್ಧೆ
ದಿನ ದಿನವು ಹೆಚ್ಚುತಿದೆ,
ಇಂದು ನಾ ನಿಮಗಾಗಿ
ನೀರು ತರಲ್ಹೋದಾಗ
ದಾರಿಯಲಿ ಹರಳಯ್ಯ
ಆದಿಜನ ಶಿವಶರಣ
ನಿರುತಿರುವ ಮನೆಕಂಡು
ಹೆಚ್ಚು ಮುಂದಕೆಹೋಗಿ
ನೀರು ತರುವದರಲ್ಲಿ
ನನ್ನ ಒಡೆಯನ ದಾಹ
ಮತ್ತೆ ಹೆಚ್ಚುವದೆಂದು
ಶಿವಶರಣ ಮಾಡಿರುವ
ಚರ್ಮತೊಳೆಯುವ ಹೊಂಡ
ದಿಂ ನೀರು ತಂದಿಹೆನು.”

ಎಂದು ಮುಗಿಸುವ ಮುಂಚೆ
ಮಧುವಯ್ಯ
ಎದ್ದು ಲಗುಬಗೆಯಿಂದ
ಬಟ್ಟೆಯನು ಧರಿಸುತ್ತ
ಹರಳಯ್ಯ ನೆಡೆಗ್ಹೋಗಿ
“ಹರಳಯ್ಯ
ನನ್ನ ತಪ್ಪನು ಕ್ಷಮಿಸಿ
ಪಾವನನ ಮಾಡುವುದು

ಜಾತಿಮದದಿಂ ಕೊಬ್ಬಿ
ನೀತಿ ತಪ್ಪಿದ ನನ್ನ
ಶಿವಭಕ್ತರಾದವರು
ಎಲ್ಲರೊಂದೇ ಎಂಬ
ಪಾಠವನು ಕಲಿಸುವುದು
ಎಂದೆನುತ
ಕಣ್ಣೀರನಿಡುತಿರುವ
ಮಧುವಯ್ಯನನು ತಬ್ಬಿ
ಪ್ರೇಮ ಜಲವನು ನೀಡಿ
“ಮಧುವಯ್ಯ
ಹಿಂದಾದ ಮಾತನ್ನು
ನೆನಸಿ ಮರುಗುವುದೇಕೆ ?
ನಿನ್ನ ಮನದುಬ್ಬೆಗವು
ನಿನ್ನ ಕ್ಷಮಿಸಿಹುದಿಂದು
ನಾನು ಕ್ಷಮಿಸಲು ಬೇಕೆ ?
ಎಂದೆನುತ ಹರಳಯ್ಯ
ದೀಕ್ಷೆಕೊಡಿಸಲು ಅವನ
ಮಂಟಪಕೆ ಕರೆದೊಯ್ದು

ರುದ್ರಶೆಟ್ಟಿ

# ವಚನಗಳು

೧

ಬಲ್ಲಿದರ ಕಂಡು ಬಳಲುವದೆಷ್ಟು ದಿನ ?
ಸುಖಿಗಳ ಕಂಡು ಶೋಕಿಸುವದಿನ್ನೆಷ್ಟು ದಿನ ?
ಎಲ್ಲರಿಗು ಕೀಳಾದರೂ ಒಬ್ಬನಿಗೆ ಮೇಲಾಗಿರುವದು ಸಾಲದೇ ?
ವಿಶ್ವಕುಮಾರ, ಆತ್ಮವನ್ನೆತ್ತಿ ಹಿಡಿಯಲು.

೨

ತನ್ನರಿವು ತನಗಾಗದ ಮುನ್ನ ಅನ್ಯರ ಗೊಡವೆಗೆ
ಹೋಗುವದೆಂತಯ್ಯ !
ತನ್ನ ಭಾರ ತಾ ಹೊರದ ಮುನ್ನ ಹೆರವರ ಹಸಿಕೆ
ಬಯಸುವದೆಂತಯ್ಯ !
ತನ್ನಸ್ತಿತ್ವ ಅಸ್ಥಿರವಾಗದಂತೆ ಕಾಯುದ ಮುನ್ನ,
ಕಂಡವರ ಕೂಡಿ ಕಾತರಗೊಳ್ಳದೆ
ಕಷ್ಟದಜ್ಞಾತವ ಸಾಗಿಸಯ್ಯ ವಿಶ್ವಕುಮಾರ.

೩

ಕೂಡಿಸಿಟ್ಟ ಕಷ್ಟದ ಕನಕ ಕರಗುವದೆಂದು ಕಳವಳಪಟ್ಟು
ಕಪಟ್ಯ ಕೈಕೃಪ ಕಂಚುಕಯು, ಠಕ್ಕತನದ ಕಲ್ಪನೆ ಕಂಡು
ಬಂಧುಗಳಲ್ಲಿ ಭೇದವನೆಣಿಸದಿರು ಮರಣ ಮಾಡಿ
ಪಡೆದ ಹಣ ಹರಶರಣರಿತ್ತು ಸುಖಿಸುತಿರು ಕಂಡ್ಯಾ ವಿಶ್ವಕುಮಾರ.

೪

ಬಸವನ ಭಕ್ತಿಯು ಒಗೆ ಬಲಿವಿಲ್ಲೆಂದು ಬಳಲದಿರಾ ;
ಧರ್ಮದ ಮರ್ಮ ಗ್ರಹಿತವಾಗಿಲ್ಲೆಂದು ಮರುಗದಿರಾ ;

ಅಸಂಖ್ಯ ಅನುಯಾಯಿಗಳಿಲ್ಲೆಂದು ಅನುತಾಪಗೊಳ್ಳದಿರಾ ;
ವನೌಷಧಿ ವನದಲ್ಲೆ ಉಳಿದು ರೋಗಿಯನುಳಿಸದಿದ್ದರೆ
ಆ ಔಷಧದ ತಪ್ಪೆ ? ತೆಗೆದುಕೊಳ್ಳದ ರೋಗಿಯ ತಪ್ಪೆ
ಕೊಡವ ವೈದ್ಯನ ತಪ್ಪೆ ? ಅರಿಯದ ಅಜ್ಞಾನಿಯ ತಪ್ಪು ಕಾಣಾ
ವಿಶ್ವಕುಮಾರ.

೫

ವೇಳ್ಯ ಒಳಿತಿಲ್ಲೆಂದು ಒರಲಿ ಒರಲಿ ವಿವೇಕವಳಿಯಿತ್ತು,
ವಾತಾವರಣ ಅನುಕೂಲವಿಲ್ಲೆಂದು ಬುದ್ಧಿ ಭ್ರಮಿಸಿತ್ತು,
ಕಾಲಕಲಿಗೆ ಕೆರಳುವದೆ ? ಪುರುಷ ಪರಿಸ್ಥಿಯ ಮೀರನೆ ?
ಹೇಡಿಗೆ ಅನುಕೂಲವೆಲ್ಲಿಯದು ? ಅದು ಕಾರಣ
ವಿಶ್ವಕುಮಾರ, " ಸಂಧಿ, ಸಂಕಟದ ನೋಗು ಧರಿಸಿ
ಬರುತಿಹುದಯ್ಯ ಶೂರನಮುಂದೆ "

೬

ಹಾನಿಯಾದಡೆ ಹರನಕೃಪೆಯಾಯಿತೆಂಬೆ.
ಲಾಭವಾದಡೆ ಲೋಗರ ಸೇವೆಗೆಂದೆಂಬೆ
ಹಾನಿಲಾಭಗಳೆಲ್ಲ ಹರನವಶವೆಂಬೆ.
ಹರನನರಿಯುವ ಹರದ ನಾನಾಗಲೆಂಬೆ.
ವಿಶ್ವಕುಮಾರ, ಅಕ್ಕನಾಶೀರ್ವಾದ ಬಲದಿಂದ.

೭

ಲೋಗರಿಗೆ ಬೋಧಿಸುವ ಭ್ರಮೆ ನಿನಗೇಕೆಂದು
ಪ್ರಶ್ನಿಸದಿರಾ, ಆತೆ ಆಮಿಷಗಳೆಂಬ ಅನುಗಳ್ಳರು
ಸಮಯ ಸಾಧಿಸಿ ನಿನ್ನನೆಳೆವಾಗ ; ಅನುದೊರೆದು
ಅನ್ಯರವಸ್ತು ಅಪಹರಿಸುವಾಗ. ಇಂದಿನೀಬೋಧೆ
ರೂಪುಗೊಂಡು ನಿನ್ನ ತಡೆಗಟ್ಟಲೆಂದು ; ಬರುವ

ದುರ್ಬುದ್ಧಿ ಬರದೆ ಮಾಯಾಗಲೆಂದು ; ವಿಶ್ವಕುಮಾರರು
ನಿನಗೆ ಛೀ ಹಾಕಲೆಂದು ಕೇಳಾ ಮನವೆ.

೮

ಎಲ್ಲಾ ಎನ್ನವರಾಗಲೆಂಬ ಹಂಬಲ ಹಲವುಪರಿ ಕಾಡುತ್ತಿದೆ.
ಇಡಿಯ ವಿಶ್ವವೇ ನನ್ನದಾಗಲೆಂಬ ಬದ್ಧಿ ಬಲಗೊಂಡು ಭ್ರಮಿಸುತ್ತಿದೆ.
ಈ ತೆರ, ಹಲವುಪರಿ ಭ್ರಮಿಸಿ ಬುದ್ಧಿಗೆಡಲೇಕೆ ?
ನಾನೊಬ್ಬನೆಲ್ಲರವನಾಗಿ ಜೀವಿಸುವ ಒಂದೇ ಒಂದು
ಭಾವ ಬಲಗೊಂಡರೆ ಸಾಲದೆ ? ವಿಶ್ವಕುಮಾರ.

೯

ನಾನೆಂಬ ಅಹಂಕಾರವೆನ್ನ ಕೆಡಿಸಿತ್ತೆಂಬರು ನೋಡಾ.
ಸುಖದುಃಖ, ಹೇಯಶ್ರೇಯ, ಸೋಲುಜಯ, ಮಾನಾಪಮಾನ
ಗಳಲ್ಲಿ ನಾನು ನಾನಾಗಿರ್ದಡೆ ನೀನೆಂಬುದೆನಗೆ ಬೇಡ,
ನಾನು ನೀನೆಂಬ ಶಬ್ದ ಭೇದವಡಗಿಸಿ ಸಾಗುವ ಶಕ್ತಿ
ಸಾಧಿಸುವವಯ್ಯ ವಿಶ್ವಕುಮಾರ.

೧೦

ಕೋಕಿಲೆಗೆ ಕಿವಿಗಿಂಪಾದ ಕಂಠವಾದರೆ
ನವಿಲಿಗೆ ನಯನ ಮನೋಹರ ರೂಪ ಕೊಟ್ಟವರಾರಯ್ಯ ?
ಇಂತಹ ಹಲವಿಧದಲಿ ಹಲವೇಂದ್ರಿಯಗಳಿಗೆ
ನಿನ್ನಿರವ ತೋರಿಯು, ತೋರಿಸದಂತೆ ಇರಿಸಿ
ಮರುಳನ ಮಾಡದೆ ಪೊರೆಯಯ್ಯ ತಂದೆ ವಿಶ್ವಕುಮಾರನ.

೧೧

ಶಿವಶಿವನೆಂದು ಸಂನ್ಯಾಸಿಯ ಸೋಗು ಹಾಕದಿರಾ,
ಸದಾ ಸನ್ನಿಹಿತನಾಗಿಪ್ಪನಾ ಶಿವ, ನಿನ್ನ

ಹಿಡಿದ ಕಾರ್ಯ ಬಿಡದೆ ಪೂರ್ಣಗೈವಲ್ಲಿ
ಸಾಧ್ಯ ಸಾಧನೆಗಳೆರಡು ಒಂದಾದಲ್ಲಿ
ಸುಖಕ್ಕೆ ಸೆರೆಗಟ್ಟಿ ಜೀವದ ಹಂಗು ದೊರೆದು
ವಿಶ್ವಕುಮಾರರ ಸೇವೆ ಮಾಡುವಲ್ಲಿ.

೧೨

ದೇವರ ಬೇಡಿ ದೈವ ಒಲಿಯುವನೆಂಬ
ಕರ್ಮಗೇಡಿಯ ಮಾತು ಕೇಳಲಾಗದು ನೋಡಾ !
ಕೊಡುವದನೆಲ್ಲ ಕೊಟ್ಟಿರುವಾಗ,
ಮತ್ತೆ ಮತ್ತೆ ಅತ್ತು ಕಾಡಿ ಬೇಡಿ.
ತಿರಿದುಣ್ಣಲು ಕಪಾಲ, ಕುಡಿಯಲು ಕಾಳಕೂಟವಲ್ಲದೆ
ಇನ್ನದೇನ ನೀಯುವನಯ್ಯ ವಿಶ್ವಕುಮಾರ.
ಆ ವೈರಾಗ್ಯಶೀಲ ಸ್ಮಶಾನರುದ್ರ.

ರುದ್ರಶೆಟ್ಟಿ ಪಾಟೀಲ

# ಬಸವನ ಆದರ್ಶ ಮಾರ್ಗ

ಬಸವನ ಪೂರ್ವದಲ್ಲಿ ಭಾರತೀಯ ಮತವು ನಡುಗಡಲಿನಲ್ಲಿ ಬಿರುಗಾಳಿಗೆ ಸಿಲುಕಿದ ನಾವೆಯಂತೆ ಸುತ್ತಿ ಸುತ್ತಿ ತತ್ತರಿಸುತ್ತಿತ್ತು. ಜನಾಂಗವು ಕುಂಭಕರ್ಣನ ನಿದ್ರೆಹೋಗಿತ್ತು. ಈ ಜನಾಂಗವನ್ನು ಹೊಡೆದೆಬ್ಬಿಸುವದಕ್ಕಾಗಿ ವಿಶ್ವಗರ್ಭದಲ್ಲಿ ಸುಪ್ತನಾದ, ಚಿರಜಾಗ್ರತನಾದ, ಮಹಾಚೈತನ್ಯ ಶಕ್ತಿಯು ಮಂಗಳಮಯ ಕರ್ನಾಟಕದ ಪವಿತ್ರಭೂಮಿಯಲ್ಲಿ ಅವತರಿಸಿತು. ಆ ತೇಜೋಮಯ ಚೈತನ್ಯ ಶಕ್ತಿಯ ಮಹಾಮೂರ್ತಿಯೇ ವಿಶ್ವಬಂಧು ಬಸವಣ್ಣನು.

ಬಸವನ ಕಾರ್ಯರಂಗವು ಬಹುಮುಖವಾಗಿದ್ದಿತು. ಇದೇ ಆತನ ಘನತೆಯ ವೈಶಿಷ್ಟ್ಯ. ಜಗತ್ತಿನ ಯಾವ ಮಹಾಪುರುಷರೂ ಬಸವಣ್ಣನಂತೆ ಬಹುಮುಖವಾದ ಕಾರ್ಯರಂಗದಲ್ಲಿ ಪ್ರವೇಶಿಸಿ ಯಶಸ್ವಿಯನ್ನು ಪಡೆದಂತೆ ಕಾಣುವದಿಲ್ಲ. ಧಾರ್ಮಿಕ ಸುಧಾರಣೆಯೇ ತಮ್ಮ ಧ್ಯೇಯವಾಗಿಟ್ಟುಕೊಂಡವರು ಬೇರೊಂದು ಕಾರ್ಯರಂಗದಲ್ಲಿ ಪ್ರವೇಶಿಸಲು ಮನಸು ಮಾಡಿದಂತೆ ತೋರುವದಿಲ್ಲ. ಆದರೆ ಬಸವಣ್ಣನು ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಹಿತ್ಯಿಕ, ಆಧ್ಯಾತ್ಮಿಕ, ರಾಜಕೀಯ ಮೊದಲಾದ ಎಲ್ಲ ರಂಗಗಳಲ್ಲಿ ಸಮನಾಗಿ ಯಶಸ್ಸನ್ನು ಪಡೆದಿದ್ದಾನೆ

ಧರ್ಮವು ರೂಢಿ ಸಂಪ್ರದಾಯಗಳ ಸಂಕೋಲೆಗಳಿಂದ ಬಂಧಿಸಲ್ಪಟ್ಟು ಸಮಾಜವು ಹುಡಿಗೂಡುವದರಲ್ಲಿತ್ತು. ತತ್ವಗಳ ಗಲಭೆ, ವಿಚಾರಗಳ ತಿಕ್ಕಾಟ, ವ್ಯಕ್ತಿಗಳ ಹೋರಾಟಗಳು ಎಲ್ಲೆಲ್ಲಿಯೂ ಕಂಡುಬರುತ್ತಿದ್ದವು. ಧರ್ಮದ ನಿಜವಾದ ಅರ್ಥವನ್ನು ತಿಳಿಸಿಕೊಡುವ ಮಹತ್ಪುರುಷರ ಅವಶ್ಯಕತೆ ಇತ್ತು. ಆಗ ಬಸವನು ಉದಯಿಸಿ. ಧರ್ಮವು ಆತ್ಮೋನ್ನತಿಗೆ ಸಾಧನವೆಂಬುದನ್ನು ಮನವರಿಕೆ ಮಾಡಿಕೊಟ್ಟು, ಧರ್ಮಕ್ಕೆ ಭಕ್ತಿಯೇ ಮೂಲವೆಂದು ಬೋಧಿಸಿ ಭಕ್ತಿಮಾರ್ಗವನ್ನು ತೋರಿಸಿದನು. ಧರ್ಮದ ನಿಜವಾದ ಜ್ಞಾನವು ಸಮಾಜದ ಏಳಿಗೆಗೆ ಕಾರಣವಾಯಿತು. ಸಮಾಜದಲ್ಲಿ ಮೇಲು ಕೀಳುಗಳೆಂಬ ಭಾವನೆಯುಂಟಾಗಿ, ಸುವಿಚಾರ ಸಂಪನ್ನರಾದರೂ ಕೀಳು

ಕುಲದಲ್ಲಿ ಹುಟ್ಟಿದವರೆಂಬ ನೆವದಿಂದ ಅವರನ್ನು ಕಡೆಗಾಣುತ್ತಿದ್ದರು. ವರ್ಣಭೇದದಿಂದ ಹಿಂದೂ ಜನಾಂಗವು ಸಂಘಟನೆಯ ಮಹತ್ವವನ್ನು ಮರೆತು ಮಣ್ಣು ಪಾಲಾಗುವುದರಲ್ಲಿತ್ತು. ಆ ಸಮಯದಲ್ಲಿ ಅಸ್ತವ್ಯಸ್ತವಾಗಿ ರಚಿಸಲ್ಪಟ್ಟ ಸಾಮಾಜಿಕ ಅಂತಸ್ತುಗಳನ್ನು ಬಸವನು ಕಿತ್ತೊಗೆದು ಸಂಘಟನೆಯ ಹಾದಿಯನ್ನು ತೋರಿಸಿದನು. ಈ ಸಂಘಟನೆಯು ಸದಾಚಾರ ಸಂಪನ್ನರಾದ ಹೊಲೆಯ ಮಾದಿಗ ಮುಂತಾದ ಹದಿನೆಂಟು ಜಾತಿಯವರನ್ನು ಭಕ್ತಿ ಎಂಬ ಪಾಶದಿಂದ ಒಂದೆಡೆಗೆ ಬಂಧಿಸಿತು.

ಬಸವನ ಪೂರ್ವದಲ್ಲಿ ಸ್ತ್ರೀಯರಿಗೆ ಎಳ್ಳಷ್ಟಾದರೂ ಸ್ವಾತಂತ್ರ್ಯವಿರಲಿಲ್ಲ. ಮನು ಮಹಾಶಯನಂತೂ "ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" ಎಂದು ಘಂಟಾಘೋಷವಾಗಿ ಸಾರಿಬಿಟ್ಟನು. ಈ ನೀತಿ ಶಾಸ್ತ್ರದ ಆಧಾರ, ರೂಢಿಯ ಬೆಂಬಲ ಸಿಕ್ಕಮೇಲೆ ಕೇಳುವದೇನು? ಸ್ತ್ರೀಯು ಶೂದ್ರಳಾಗಿ ಉಳಿದು ಪುರುಷನ ಸುಖಭೋಗದ ವಸ್ತುವಾದಳು. ಬಸವನು ಈ ಮೂಢನಂಬಿಕೆಯನ್ನು ಕಿತ್ತೊಗೆದು ಸ್ತ್ರೀ ಸ್ವಾತಂತ್ರ್ಯದ ಕಹಳೆಯನ್ನು ಊದಿದನು. ಈ ಧ್ವನಿಯನ್ನು ಕೇಳಿದ ಅಸಂಖ್ಯಾತ ಶಿವಶರಣೆಯರು ಕನ್ನಡನಾಡಿನಲ್ಲಿ ಉದಯಿಸಿ ವಚನದ ಹೊನಲನ್ನು ಹರಿಯಿಸಿ ಸ್ತ್ರೀ ಸಮಾಜವನ್ನು ಉದ್ಧರಿಸಿದರು. ವ್ಯವಹಾರದಲ್ಲಷ್ಟೇ ಅಲ್ಲದೆ ಆಧ್ಯಾತ್ಮಿಕ ಕಾರ್ಯದಲ್ಲಿಯೂ ಕೂಡ ಸ್ತ್ರೀಯು ಪುರುಷನ ಅರ್ಧಾಂಗಿ ಎಂದು ಸಾರಿದನು. "ಸತಿಪತಿಗಳೊಂದಾದ ಭಕ್ತಿ ಹಿತವಕ್ಕು ಶಿವಂಗೆ, ಸತಿಪತಿಗಳೊಂದಾಗದ ಭಕ್ತಿ ಅಮೃತದೊಳಗೆ ವಿಷವ ಬೆರಯಿಸಿದಂತೆ" ಎನ್ನುವದರಲ್ಲಿ ಇದೇ ಅರ್ಥವಿದೆ. ಸರ್ವರೀತಿಯಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯವನ್ನು ದೊರಕಿಸಿ ಕೊಟ್ಟ ಸನ್ಮಾನವು ಮೊಟ್ಟ ಮೊದಲಿಗೆ ಸಲ್ಲತಕ್ಕದ್ದು ಬಸವನಿಗೆ ಮಾತ್ರ.

ವ್ಯವಸಾಯದಿಂದ ಮೇಲು ಕೀಳೆಂದು ತಿಳಿಯುವ ಭಾವನೆಯು ಸಮಾಜದಲ್ಲಿ ನೆಲೆಗೊಂಡಿತ್ತು. ಬಸವಣ್ಣನು **ಕಾಯಕವೇ ಕೈಲಾಸ** ಎಂದು ಸಾರಿ ಈ ಕಟ್ಟನ್ನು ಕತ್ತರಿಸಿದನು. ಕಾಯಕವು ಐಹಿಕ, ಪಾರಮಾರ್ಥಗಳೆರಡಕ್ಕೂ ಸಾಧನವಾಗಬಹುದೆಂಬ ಹೊಸಮಾತನ್ನು ಹೇಳಿ ಕಾಯಕತತ್ವವನ್ನು ಕಾರ್ಯದಲ್ಲಿ ತಂದನು. ಬಸವನ ಕಾಲದಲ್ಲಿ ಈ

ಕಾಯಕ ತತ್ವದ ಆಧ್ಯಾತ್ಮಿಕ ಅರ್ಥವು ಏನೇ ಇರಲಿ ಲೌಕಿಕ ದೃಷ್ಟಿಯಿಂದಲೂ ಅತ್ಯುಪಯುಕ್ತವಾಗಿದೆ. ಕಾಯಕವು ಸಮಾಜದಲ್ಲಿ ಸುಪರಿಣಾಮವನ್ನುಂಟುಮಾಡಿತು, ಕಾಯಕದಲ್ಲಿ ಕುಲಭೇದವಿರಬಾರದೆಂಬುದು ಸಮಾಜಕ್ಕೆ ಮನದಟ್ಟಾಯಿತು.

ಬಸವನ ಕಾಲದಲ್ಲಿ ಸರ್ವರಿಗೂ ಸಮಾನವಾದ ಸ್ವಾತಂತ್ರ್ಯವಿತ್ತೆನ್ನುವದಕ್ಕೆ **ಶಿವಾನುಭವ ಮಂಟಪವೇ** ಸಾಕ್ಷಿ. ಅಲ್ಲಿ ಎಲ್ಲರೂ ಲಿಂಗಭೇದವಿಲ್ಲದೆ ಕೂಡಿ ತಮ್ಮ ವಿಚಾರಗಳನ್ನು ಮಂಡಿಸುತ್ತಿದ್ದರು. ವಿಚಾರ ಸ್ವಾತಂತ್ರ್ಯವಿದ್ದುದರಿಂದ ಸಮಾಜದಲ್ಲಿ ಸಮತೆಯು ನೆಲೆಗೊಳ್ಳಲು ಅವಕಾಶವಾಯಿತು. ಸಾಹಿತ್ಯ ಸೇವೆಯು ಬಸವನ ಮುಖ್ಯೋದ್ದೇಶವಾಗಿರದಿದ್ದರೂ ಧಾರ್ಮಿಕ ಕ್ರಾಂತಿಯ ಜೊತೆಗೆ ಸಹಜವಾಗಿಯೇ ಕನ್ನಡ ಸಾಹಿತ್ಯಕ್ಕೆ ಅಪಾರವಾದ ಮೆರಗು ಬಂದಿತು.

ಬಸವನು ಈ ಸಂಸಾರಕ್ಕೆ ಗಾಳಿಯ ಸೊಡರು, ಶ್ವಾನನ ಕನಸು, ಸುಳಿಗಾಳಿ, ಇಂದ್ರಜಾಲ ಎಂತಲೂ, ಈದೇಹಕ್ಕೆ ಕರುಳಿನ ರಾಸಿ,ಮೂಳೆಗಳ ಪಂಜರ, ನರಗಳ ಬಲೆ ಎಂದು ಮುಂತಾಗಿಯೂ ಹೇಳಿ ಸಂಸಾರದಲ್ಲಿ ಹೇಸಿಕೆಯನ್ನು ಹುಟ್ಟಿಸಿ ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳಲು ಹೇಳಲಿಲ್ಲ. "ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟವಯ್ಯ" "ದೇಹವೇ ದೇವಾಲಯ" "ಮಾಡುವ ಕೆಲಸವೆಲ್ಲವೂ ಗುರುಲಿಂಗ ಜಂಗಮ ದಾಸೋಹಕ್ಕೆ" ಎಂದು ಹೇಳಿ ಸಂಸಾರದ ಬಗ್ಗೆ ಅಭಿರುಚಿಯನ್ನು ಹುಟ್ಟಿಸಿದರೂ, ಸತ್ಯ, ಅಹಿಂಸೆಗಳಲ್ಲಿ ಶ್ರದ್ಧೆಯನ್ನಿಡಲು ಉಪದೇಶಿಸಿದನು. "ಸತ್ಯವ ನುಡಿವುದೇ ಸ್ವರ್ಗಲೋಕ" ಎಂದು ಸ್ವರ್ಗದ ಸತ್ಯತೆಯನ್ನ ತೋರಿಸಿದನು.

ನುಡಿದಂತೆ ನಡೆಯುವದು, ಬೋಧಿಸಿದಂತೆ ಸಾಧಿಸುವದು ಕಷ್ಟವಾದ ಕೆಲಸ. ಅಂತೆಯೇ ವಿಚಾರಕ್ಕೂ ಆಚಾರಕ್ಕೂ ತಳಕು ಹಾಕುವದನ್ನು ಕಂಡರೆ ಮನ್ನಿಸುತ್ತೇವೆ; ಮಹಾತ್ಮರೆಂದು ಪೂಜಿಸುತ್ತೇವೆ. ತತ್ಫಲವಾಗಿ ಬಸವನೆಂಬ ವಿಶ್ವ ಜೀವಜ್ಯೋತಿಯು ಸುಪ್ರಕಾಶವಾಗಿ ಬೆಳಗುತ್ತಲಿದೆ.

**ಅಮರಾನಂದ**

# ನವರಾತ್ರಿ

ಅತ್ಯಂತ ಪ್ರಾಚೀನ ಕಾಲದಿಂದಲೂ ಹಿಂದುಸ್ಥಾನದಲ್ಲಿ ಜ್ಞಾನಿಗಳು ರಾಷ್ಟ್ರಧರ್ಮದ ಉಪದೇಶ ಮಾಡುತ್ತ ಬಂದಿರುವರು. 'ಮಾತೃದೇವೋ ಭವ, ಪಿತೃದೇವೋ ಭವ, ಆಚಾರ್ಯದೇವೋ ಭವ ಎಂದು ಹೇಳುವದಲ್ಲದೆ ಇದೆಲ್ಲಕ್ಕೂ ಹೆಚ್ಚಿನದಾದ ಮಂತ್ರವು ರಾಷ್ಟ್ರದೇವೋ ಭವ' ಎಂಬುದನ್ನು ಉಪದೇಶಿಸಿದರು. ಈ ಉಪದೇಶದಂತೆ ನಡೆದಂತೆಲ್ಲ ನಮ್ಮ ರಾಷ್ಟ್ರವು ಊರ್ಜಿತಾವಸ್ಥೆಗೆ ಬಂದಿತು. ಹಾಗೂ ಈ ಉಪದೇಶವನ್ನು ಧಿಕ್ಕರಿಸಿದಾಗೆಲ್ಲ ನಮ್ಮ ರಾಷ್ಟ್ರವು ಅಧಃಪತನಹೊಂದುತ್ತ ನಡೆಯಿತು. ಇಡೀ ರಾಷ್ಟ್ರದ ಹಿತಕ್ಕಾಗಿ ಹೋರಾಡುವ ಜನಾಂಗವೇ ಮುಂದೆ ಬರುವದು. ಸ್ವಾರ್ಥ, ವ್ಯಕ್ತಿಹಿತ, ಇವುಗಳನ್ನೇ ನೋಡುವ ಕೌಟುಂಬಿಕ ಇಲ್ಲವೆ ಬೇರೆ ಬೇರೆ ಜಾತಿ ಮತ ಪಂಥಗಳ ದೃಷ್ಟಿಯಿಂದ ಕೆಲಸ ಮಾಡುವ ಅಥವಾ ಕೇವಲ ಪ್ರಾಂತಿಕ ದೃಷ್ಟಿಯಿಂದ ನಡೆಯುವ ಜನಾಂಗವು ರಾಷ್ಟ್ರವನ್ನು ಎಂದೂ ಸಂರಕ್ಷಿಸಲಾರದು. ರಾಷ್ಟ್ರವು ಉಳಿದರೆ ಪ್ರಾಂತಗಳು ಉಳಿಯಬಲ್ಲವು; ವ್ಯಕ್ತಿಗಳು ಉಳಿಯಬಲ್ಲವು. ಆದುದರಿಂದ ದೂರದೃಷ್ಟಿಯುಳ್ಳವರು ರಾಷ್ಟ್ರದ ಹಿತದ ಕಡೆಗೆ ಹೆಚ್ಚು ಲಕ್ಷ್ಯಕೊಡುವದು ಅವಶ್ಯವಿರುತ್ತದೆ.

ಭರತಖಂಡವು ಅತ್ಯಂತ ವಿಶಾಲವಾದದ್ದು; ಕೀರ್ತಿಶಾಲಿಯಾದದ್ದು; ಉಜ್ವಲ ಇತಿಹಾಸವುಳ್ಳದ್ದು; ಒಳ್ಳೇ ಸಂಸ್ಕೃತಿ ಶಿಖರಕ್ಕೆ ಮುಟ್ಟಿದ್ದು; ಬುದ್ಧಿಶಾಲಿ ಜನರಿಂದಲೂ, ಫಲವತ್ತಾದ ಭೂಮಿಯಿಂದಲೂ, ಉತ್ತಮ ಖನಿಜಗಳಿಂದಲೂ ಕೂಡಿದ್ದು 'ಸುಜಲಾಂ ಸುಫಲಾಂ' ಎಂದೆನಿಸಿಕೊಳ್ಳಲಿಕ್ಕೂ, ಕೋಟ್ಯನುಕೋಟಿ ಜನರಿಗೆ ಅನ್ನವಸ್ತ್ರಗಳನ್ನು ಪೂರೈಸಿ ಸುಖದಲ್ಲಿಡಲಿಕ್ಕೂ, ಸಮರ್ಥವಿರುವದು. ಆದರೆ ನಮ್ಮ ಸ್ಥಿತಿ ಪರಾಧೀನವಾಗಿ ದಾಸ್ಯದಲ್ಲಿ ತೊಳಲಿ ಬಳಲಿ ಈಗತಾನೇ ಸ್ವತಂತ್ರ್ಯದ ಬೆಳಕನ್ನು ಕಂಡಿರುವದು. ನಾವು ನಮ್ಮ ರಾಷ್ಟ್ರ ಧರ್ಮವನ್ನು ಬಿಟ್ಟದ್ದೇ ಇದಕ್ಕೆ ಕಾರಣ. ಈ ರಾಷ್ಟ್ರದವರೆಲ್ಲರೂ ಒಂದೇ ಕುಟುಂಬದವರು ಎಂಬ ಒಕ್ಕಟ್ಟಿಲ್ಲ; ನಮ್ಮ ಹಿತ

ಸಂಬಂಧಗಳಿಲ್ಲ ಒಂದೇ ಎಂಬ ಭಾವನೆ ಇಲ್ಲ; ಮಹತ್ವಾಕಾಂಕ್ಷೆಯಿಲ್ಲ, ಆ ಭಾವನೆಯನ್ನು ಜಾಗ್ರತಗೊಳಿಸಿ ಅದನ್ನು ಹೃದೀವ ಮಾಡಿಕೊಂಡು ನಡೆದರೆ ಅದೇ ರಾಷ್ಟ್ರಧರ್ಮವೆನಿಸುವದು. ಅದರಿಂದಲೇ ನಮ್ಮ ಉದ್ಧಾರವಾಗ ಬಲ್ಲದು; ರಾಷ್ಟ್ರವು ಸ್ವತಂತ್ರವಾಗಬಲ್ಲದು. ನಮ್ಮಲ್ಲಿ ಸ್ವರಾಜ್ಯವು, ಸರ್ವಾಧಿಕಾರವು ನೆಲೆಗೊಂಡು ಸುಖ, ಶಾಂತಿ, ಸಮೃದ್ಧಿಯು ಚಿರಕಾಲ ಉಳಿದು ನಾವು ಜೀವಿಸಬಲ್ಲೆವು.

ಹಿಂದುಸ್ಥಾನವು ಒಂದೇ ರಾಷ್ಟ್ರವಾದರೂ, ಭಾಷೆ, ಸಂಸ್ಕೃತಿ ಇವುಗಳಿಗನುಗುಣವಾಗಿ ಬೇರೆ ಬೇರೆ ಪ್ರಾಂತಗಳನ್ನು ಮಾಡಲ್ಪಡುವದು ಅಪರಿಹಾರ್ಯವಾಗಿದೆ. ಕರ್ನಾಟಕವೂ ಹಿಂದುಸ್ಥಾನದಲ್ಲಿಯ ಒಂದು ಪ್ರಾಂತ. ಈ ಪ್ರಾಂತದಲ್ಲಿರುವವರೆಲ್ಲರೂ, ಕನ್ನಡ ಭಾಷೆ, ಕರ್ನಾಟಕ ಸಂಸ್ಕೃತಿ, ಕರ್ನಾಟಕದ ಆರ್ಥಿಕ, ನೈತಿಕ ಹಿತಗಳಿಗಾಗಿ ಹೋರಾಡತಕ್ಕದ್ದು. ಆದರೆ ಹೀಗೆ ಪ್ರಯತ್ನ ಮಾಡುವಾಗ್ಗ ಹಿಂದುಸ್ಥಾನದ ಹಿತವೇ ಕರ್ನಾಟಕದ ಧ್ಯೇಯವಾಗಿರಬೇಕು. ಈ ಪ್ರಕಾರದ ಜಾಗ್ರತೆಯೂ, ನವಚೈತನ್ಯವೂ, ಸರ್ವಶಕ್ತಿಯೂ ಬೆಳೆಯಬೇಕೆಂದೇ ನಾವು ನಾಡಹಬ್ಬವನ್ನು ಆಚರಿಸುತ್ತಿರುವದು. ಯಾಕಂದರೆ, ಶಕ್ತಿಯೇ ನಮ್ಮ ಕರ್ನಾಟಕದ ದೈವತವು. ಸಾರ್ವಭೌಮ ಚಾಲುಕ್ಯರ ಕುಲದೈವತವು ಬನಶಂಕರಿ. ರಟ್ಟರ ಕುಲ ದೈವತವು ಎಲ್ಲಮ್ಮ. ವಿಜಯನಗರದ ಅರಸರ ಕುಲದೈವತವು ಭುವನೇಶ್ವರಿ. ಸಧ್ಯಕ್ಕೆ ಮೈಸೂರು ಮಹಾರಾಜರವರ ಕುಲದೈವತವು ಚಾಮುಂಡೇಶ್ವರಿ. ಶ್ರೀ ಶಂಕರಾಚಾರ್ಯರ ಧರ್ಮಪೀಠದಲ್ಲಿಯೂ ಶಕ್ತಿಯ ಸ್ಥಾನವಿದೆ. ಲಿಂಗವಂತರ ತತ್ವಜ್ಞಾನವು ಶಕ್ತಿ ವಿಶಿಷ್ಟಾದ್ವೈತವೆಂಬದು ಪ್ರಸಿದ್ಧವಿರುವದು. ಹೀಗೆ ಕರ್ನಾಟಕದಲ್ಲಿ ದೇವಿಯ 'ಶಕ್ತಿಯ' ಉಪಾಸಕರು ಮತ್ತು ಪೂಜಕರು ಹೆಚ್ಚು ಇರುವರು. ಶಕ್ತಿಯ ಉತ್ಸವವು ಅಂದರೆ ನವರಾತ್ರಿಯು ಕರ್ನಾಟದಲ್ಲಿ ಒಳ್ಳೇ ಉತ್ಸಾಹದಿಂದ ನೆರವೇರಿಸಲ್ಪಡುತ್ತದೆ. ರಾಷ್ಟ್ರೀಯ ಶಕ್ತಿಗಳೂ, ದೈವತಗಳೂ ಆದ ಶಕ್ತಿ ಅಂದರೆ ಪಾರ್ವತಿ, ಸರಸ್ವತಿ, ಲಕ್ಷ್ಮಿ ಈ ಮೂವರ ಉಪಾಸನೆಯು ಇದೇ ಕಾಲಕ್ಕೆ ಮಾಡಲ್ಪಡುತ್ತದೆ. ಈ ಉತ್ಸವವು ಒಂಬತ್ತು ದಿನಗಳವರೆಗೆ ನಡೆಯುವದರಿಂದ ಅನೇಕ ಸಾಮೂಹಿಕ ಕಾರ್ಯಗಳನ್ನು ನೆರವೇರಿಸಲು ಅನು

ಕೂಲವಿರುತ್ತದೆ. ಪೂರ್ವದ ಅರಸರು ಈ ಉತ್ಸವವನ್ನು ರಾಷ್ಟ್ರೀಯ ಉತ್ಸವ ವನ್ನಾಗಿ ಆಚರಿಸುತ್ತಿದ್ದರೆಂಬುದಕ್ಕೆ 'ಭರತೇಶ ವೈಭವ' ಮುಂತಾದ ಗ್ರಂಥ ಗಳಲ್ಲಿ ಆಧಾರ ಸಿಕ್ಕುತ್ತದೆ. ವಿಜಯನಗರದಲ್ಲಿ ಈ ಉತ್ಸವವು ಬಹಳ ವಿಜೃಂಭಣೆಯಿಂದ ಜರುಗುತ್ತಿತ್ತು. ಅದೇ ಪರಂಪರೆಯೇ ಮೈಸೂರಲ್ಲಿಯೂ ವೈಭವದಿಂದ ನಡೆದು ಬಂದಿದೆ. ಇಲ್ಲಿಯ ನಾಡಹಬ್ಬವನ್ನು ನೋಡಿದರೆ ರಾಷ್ಟ್ರೀಯ ಉತ್ಸವವೆಂದು ಒಡೆದು ಕಾಣುತ್ತದೆ.

ಒಂದು ಕಾಲದಲ್ಲಿ ಜನರ ಪಾಲನದ ಪೋಷಣದ ಭಾರವನ್ನು ಹೊತ್ತ ಕ್ಷತ್ರಿಯ ರಾಜರ ಹಬ್ಬವು ಇಂದು ಸರ್ವಜನರ ಹಬ್ಬವಾಗಿ ಪರಿಣಮಿಸಿದೆ. ಅಂದು ರಾಜರು ಹೊತ್ತ ಭಾರವನ್ನು ಇಂದು ಪ್ರಜಾಪಾಲಕರು, ಪ್ರಜಾ ಸಂಘಗಳು ಹೊರಬೇಕಾಗಿದೆ. ಈ ಹಬ್ಬವು ಯಾವುದೊಂದು ವಿಶಿಷ್ಟ ದರ್ಮದವರಿಗೆ ಸೇರಿದ್ದಲ್ಲ. ಇಂದು ನಮ್ಮ ನಾಡ ಸಂಸ್ಕೃತಿಗೆ ಹಿಂದುಗಳು, ಲಿಂಗಾಯತರು, ಜೈನರ, ಬೌದ್ಧರು, ಸ್ಮಿಸ್ತನರು, ಕ್ರಿಶ್ಚನರು ಮೊದಲಾ ದವರೆಲ್ಲರೂ ಆಧಾರಸ್ಥಂಭರಾಗಿರುವರು. ನಾಡಹಬ್ಬವು ಏಕಧರ್ಮೀಯ ವಲ್ಲ. ಎಲ್ಲಾ ಮತಸಂಥದವರಿಗೂ ಸಮನಾಗಿಯೇ ಸಂಬಂಧಿಸಿದ್ದು. ಅದಕ್ಕಾಗಿಯೇ ನವರಾತ್ರಿಯು ರಾಷ್ಟ್ರೀಯ ಹಬ್ಬವಾಗಲು ಅನುವಿದ್ದಷ್ಟು ಉಳಿದ ಹಬ್ಬಗಳಿಗಿಲ್ಲ. ಪ್ರಜೆಗಳ ಸರ್ವವಿಧದ ಹಿತಗಳ ವಿಚಾರವನ್ನೂ ಮಾಡಿ ಕೊಳ್ಳಲು ಈ ನವರಾತ್ರಿಯಲ್ಲಿ ಅವಕಾಶವಿದೆ. ಸಮಾಜಿಕ ಪುನರ್ಘಟನೆ ಯನ್ನು ಮಾಡಿಕೊಳ್ಳಲು ಇಂಬಿದೆ ಶರೀರಬಲ ಸಂವರ್ದನದ, ಆರೋಗ್ಯದ ವಿಚಾರವನ್ನೂ, ಸಾಹಿತ್ಯದ ವಿದ್ಯಾಪ್ರಚಾರದ ವಿಚಾರವನ್ನೂ, ಆರ್ಥಿಕ ಔದ್ಯೋಗಿಕ ಹಿತಾಹಿತ ವಿಚಾರಗಳನ್ನೂ ಮಾಡಿಕೊಳ್ಳಲಿಕ್ಕೆ ತುಂಬಾ ಅನು ಕೂಲವಿದೆ. ಒಕ್ಕಲುತನ, ಪ್ರದರ್ಶನ, ಎತ್ತು ಕುದುರೆಗಳ ಪಂದ್ಯಾಟ, ಕೈಗಾರಿಕೆಯ ಪ್ರದರ್ಶನ, ಸಾಹಿತ್ಯ ಮತ್ತು ಕಲಾಪ್ರದರ್ಶನ ವೆಂದಿವಾದವು ಗಳ ಕಡೆಗೆ ಲಕ್ಷ್ಯಕೊಡಬೇಕಾಗಿದೆ. ಹೀಗೆ ಜನತೆಯ ಹಿತ ಸಂಬಂಧವನ್ನು ಸಾಂಗೋಪಾಂಗವಾಗಿ ವಿಚಾರಿಸಲು ಅನುಕೂಲವಿದ್ದ ಹಬ್ಬವೆಂದರೆ ಈ ನವರಾತ್ರಿ ಒಂದೇ ಒಂದು.

ಈ ಕಾಲವು ಆನಂದತರವಾದ ಶರತ್ ಋತುವಿನ ಆರಂಭಕಾಲ; ಉಪಾಸನೆಯು ಚರಾಚರದ ಮಾತೆಯಾದ ಆದಿಶಕ್ತಿಯ ಪ್ರಧಾನದ ರೂಪಗಳದು; ವಿಚಾರವು ಮಾನವ ಸಂಸಾರದ ವಿವಿಧಾಂಗಗಳದು; ಕಾರ್ಯಕ್ಕೆ ಅವಕಾಶವು ಎಲ್ಲ ಮತಪಂಥದವರದು; ಪರಂಪರೆಯು ಸಹಸ್ರಾರು ವರ್ಷಗಳದು. ಇಷ್ಟುಲಕ್ಷಣಗಳಿಂದ ಯುಕ್ತನಾದ ಹಬ್ಬವು. ನಾಡಹಬ್ಬವಲ್ಲದಿದ್ದರೆ ಮತ್ತಾವುದಕ್ಕೆ ಈ ಹೆಸರು ಒಪ್ಪೀತು? ಪ್ರಜೆಗಳ ಇಚ್ಛಿತಾರ್ಥಗಳನ್ನೀಯುವ ಕಾಮಧೇನುವಿನಂತೆ ಇರುವ ಈ ಹಬ್ಬವು, ರಾಷ್ಟ್ರೀಯ ಜಾಗ್ರತೆಗೆ ಸಾಧನವಾಗದಿದ್ದರೆ ಮತ್ತು ಬೇರೆ ಯಾವುದು ಆದೀತು?

ಚನ್ನಮ್ಮ ಮಹಾಗಾಂವ.

# ಅನುಭವ ಮಂಟಪ

## ಅಥವಾ

# ವೀರಶೈವ ವಿಶ್ವವಿದ್ಯಾನಿಲಯ

ಜಗತ್ತಿನ ಧಾರ್ಮಿಕ ಮತ್ತು ಸಾಮಾಜಿಕ ಇತಿಹಾಸದಲ್ಲಿ ಕರ್ನಾಟಕದ ಹನ್ನೆರಡನೆಯ ಶತಮಾನದ ಇತಿಹಾಸವು ಸುವರ್ಣಾಕ್ಷರಗಳಿಂದ ಬರೆಯಿಡುವಷ್ಟು ಯೋಗ್ಯವಾಗಿದೆ. ಆ ಕಾಲಕ್ಕೆ ಕರ್ನಾಟಕದಲ್ಲಿ ಒಂದು ಮಹತ್ಕ್ರಾಂತಿಯಾಯಿತು.

ಆ ಕ್ರಾಂತಿಯ ಮೂಲಪುರುಷರು ಮಹಾನುಭಾವಿಗಳಾದ ಶ್ರೀ ಬಸವಣ್ಣನವರು. ಪ್ರಭುದೇವರು. ಸಿದ್ಧರಾಮದೇವರು, ಚನ್ನಬಸವಣ್ಣನವರು ಮತ್ತು ಇನ್ನೂ ಅನೇಕ ಶಿವಶರಣ ಶರಣೆಯರು ಈ ಕ್ರಾಂತಿಗೆ ಬೆಂಬಲವನ್ನಿತ್ತರು. ಈ ಕ್ರಾಂತಿಯು ಯಾವ ಸಂಸ್ಥೆಯಿಂದಾಯಿತು ಎಂಬ ಪ್ರಶ್ನೆಗೆ "ಬಸವಣ್ಣನವರಿಂದ ಸ್ಥಾಪಿತವಾದ, ವೀರಶೈವ ವಿಶ್ವವಿದ್ಯಾನಿಲಯವೆನಿಸಿದ ಅನುಭವ ಮಂಟಪದಿಂದ" ಎಂದು ಉತ್ತರ ಹೇಳಬಹುದು. ಇನ್ನು ಈ ಸಂಸ್ಥೆಯ ಉಗಮದ ಬಗ್ಗೆ ಸ್ವಲ್ಪ ವಿಚಾರಿಸೋಣ.

ಕಾರಣ ಪುರುಷರಾದ ಶ್ರೀ ಬಸವಣ್ಣನವರು ಕಲ್ಯಾಣ ಪಟ್ಟಣದಲ್ಲಿ ಬಿಜ್ಜಳರಾಯನಿಗೆ ಮಂತ್ರಿಯಾಗಿ ಕಾರ್ಯ ಗೈಯುತ್ತಿರುವಾಗ ಇವರ ಕೀರ್ತಿಯು ಚತುರ್ದೆಸೆಗೂ ಹಬ್ಬಿತು. ಇವರ ಸರಳ ಹೃದಯ, ಮಾನವೋದ್ಧಾರದ ಬಗ್ಗೆ ಇವರಿಗಿರುವ ಕಳಕಳಿ, ವರ್ಣಾಶ್ರಮಗಳನ್ನು ಹೊಡೆದೋಡಿಸಿ ಸಮಾಜದಲ್ಲಿ ಸರ್ವರಿಗೂ ಸಮಾನವಾದ ಹಕ್ಕು ಬಾಧ್ಯತೆಗಳನ್ನು ಕಲ್ಪಿಸಿಕೊಡಬೇಕೆಂಬ ಇವರ ಹಂಬಲ ಇವೇ ಮುಂತಾದ ವಿಷಯಗಳು, ಭಾರತದಲ್ಲಿ ಅಲ್ಲಲ್ಲಿ ವಾಸಮಾಡಿದ್ದ ಶರಣರ ಮನಸ್ಸನ್ನು ಸೆಳೆದವು. ಅವರಿಗೆ ಮಿತಿಮೀರಿದ ಆನಂದವಾಯಿತು. ಕಲ್ಯಾಣಪಟ್ಟಣಕ್ಕೆ ದೇಶದ ಮೂಲೆ

ಮೂಲೆಗಳಿಂದಲೂ ಶರಣರ ತಂಡನ್ವು ಬರಲು ಪ್ರಾರಂಭಿಸಿತು. ಕಲ್ಯಾಣವು ಶರಣರಿಂದ ತುಂಬಿತು. ಶ್ರೀ ಬಸವಣ್ಣನವರು ಯೋಚಿಸಿದ್ದ ಕಾರ್ಯವು ಕೈಗೂಡುವ ಸುಸಂಧಿ ಬಂದೊದಗಿತು. ಆ ಮಹಾತ್ಕಾರ್ಯ ಸಾಧನೆಗಾಗಿ ಸಂಸ್ಥೆಯೊಂದು ಸ್ಥಾಪಿತವಾಯಿತು. ತಮ್ಮ ಜೀವನದಲ್ಲಿ ಕಂಡುಹಿಡಿದ ಅನುಭವಾಮೃತವನ್ನು ಸರ್ವರಿಗೂ ಉಣಬಡಿಸಬೇಕೆಂಬುದು ಅವರ ಮುಖ್ಯ ಉದ್ದೇಶವಾದ್ದರಿಂದ ಸಂಸ್ಥೆಗೆ ಅನುಭವಮಂಟಪವೆಂದು ಹೆಸರಿಡಲಾಯಿತು.

ಅನುಭವ ಮಂಟಪವು ಸ್ಥಾಪಿತವಾದಂದಿನಿಂದ ನಾಡಿನ ವಾತಾವರಣ ದಲ್ಲಿ ಪ ಹತ್ತರವಾದ ಬದಲಾವಣೆ ಮೂಡಿತಾಯಿತು. ದಿನಾಲು ಮಂಟಪದಲ್ಲಿ ಅನೇಕ ವಿಷಯಗಳ ಬಗ್ಗೆ ಚರ್ಚೆಗಳು ನಡೆಯಲಾರಂಭಿಸಿದವು. ಬರುಬರುತ್ತ ಇದರ ಕೀರ್ತಿ ದೇಶದಲ್ಲೆಲ್ಲಾ ಹರಡಿತು. ಇದರ ಕೂಗು ದೇಶದ ಮೂಲೆ ಮೂಲೆಗೂ ಮುಟ್ಟಿ ಮೇಧಾವಿಗಳನ್ನೂ, ತತ್ವಜ್ಞಾನಿಗಳನ್ನೂ, ವೈರಾಗ್ಯ ಮೂರ್ತಿಗಳನ್ನೂ ಕರೆಯುತ್ತಿತ್ತು. ಈ ಕೂಗು ಕಾಶ್ಮೀರದವರೆಗೂ ಮುಟ್ಟಿ ಮೋಳಿಗೆಯ ಮಾರಯ್ಯನಂಥ ಶರಣನನ್ನೂ, ಆತನ ಪತ್ನಿಯಾದ ಮಹಾದೇವಿ ಯಂಥ ಶರಣೆಯನ್ನು ತನ್ನೆಡೆಗೆ ಬರಮಾಡಿಕೊಂಡಿತು. ಬಳ್ಳಿಗಾವಿಯಿಂದ ಪರಮ ವೈರಾಗ್ಯ ಮೂರ್ತಿ ಜ್ಞಾನಸಿದ್ಧಿ ಅಲ್ಲಮ ಪ್ರಭುದೇವರು ಕಲ್ಯಾಣಕ್ಕೈ ತಂದು ಬಸವಣ್ಣನವರಿಂದ ನಿರ್ಮಿಸಲ್ಪಟ್ಟ ಶೂನ್ಯ ಸಿಂಹಾಸನವನ್ನಲಂಕರಿಸಿ ದರು. ಸೊನ್ನಲಾಪುರದಿಂದ ಮಹಾಶಿವಯೋಗಿ ಸಿದ್ಧರಾಮನ ಆಗಮನ ವಾಯಿತು. ಕೆಲವು ದಿವಸಗಳ ನಂತರ ಉಡುತಡಿಯಿಂದ ಮಹಾವಿರಾಗಿಣಿ ಅಕ್ಕಮಹಾದೇವಿಯು ಅನುಭವ ಮಂಟಪವನ್ನು ಬಂದು ಸೇರಿದಳು. ಆಗ ಮಂಟಪಕ್ಕೆ ಹೊಸದೊಂದು ಕಳೆಯು ಬಂದಾಯಿತು. ಮಂಟಪವು ಸ್ತ್ರೀ ಪುರುಷ ರಿಬ್ಬರಿಂದಲೂ ಶೋಭಿಸತೊಡಗಿತು. ಆಗ ಅದು ನಿಜವಾಗಿಯೂ ವಿಶ್ವವಿದ್ಯಾ ನಿಲಯವಾಯಿತು. ಪ್ರಭುದೇವರೇ ಆಚಾರ್ಯರಾದರು. ಶ್ರೀ ಬಸವಣ್ಣ ಮತ್ತು ಉಳಿದ ಶರಣವೃಂದವೇ ಅಧ್ಯಾಪಕ ವೃಂದವಾಯಿತು. ಇಡೀ ಮಾನವ ಜನಾಂಗವೇ ವಿದ್ಯಾರ್ಥಿಸಮೂಹವಾಯಿತು. ಅಜ್ಞಾನವೆಂಬ ಅಂಧಕಾರದಲ್ಲಿ ದಾರಿ ಕಾಣದಾದ ಜನತೆಗೆ ಉಚ್ಚ ಶಿಕ್ಷಣಕೊಟ್ಟು ಅವರನ್ನು ಸನ್ಮಾರ್ಗಕ್ಕೆ ಹಚ್ಚುವ ಮಹತ್ಕಾರ್ಯವನ್ನು ಶರಣರು ಪ್ರಾರಂಭಿಸಿದರು.

ನಿತ್ಯ ಜೀವನದಲ್ಲಿ ತಾವು ಕಂಡುಹಿಡಿದ ಅನುಭವಸಾರವನ್ನು ಶರಣರು ವಚನ ರೂಪವಾಗಿ ಅನುಭವ ಮಂಟಪದಲ್ಲಿ ಚರ್ಚಿಸಿ ಬಳಿಕ ಅದನ್ನು ಪ್ರಚಾರ ಮಾಡುವ ಕಾರ್ಯವನ್ನು ಕೈಕೊಂಡರು.

ಮನುಷ್ಯನು ಕೀಳಾಗುವದು ಅವನ ಹುಟ್ಟಿನಿಂದಲ್ಲ. ಅವನ ಗುಣಗಳಿಂದ "ಕೊಲ್ಲುವವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ ಕುಲವೇನೋ? ಆವಂದಿರ ಕುಲವೇನೋ ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಶರಣರೇ ಕುಲಜರು. ಉಂಬಲ್ಲಿ ಉಡುವಲ್ಲಿ ಕುಲವಳಿಯಿತೆಂಬರು; ಕೊಂಬಲ್ಲಿ ಕೊಡುವಲ್ಲಿ ಕುಲವಳಿಯಿತೆಂಬರು ಇವರು ಭಕ್ತರೆಂತೆಂಬೆನಯ್ಯಾ? ಇವರು ಯುಕ್ತರೆಂತೆಂಬೆನಯ್ಯಾ?..... ಕುಲವ ನೋಡದೇ ಆಚಾರವ ನೋಡಿ ತಮಗೆ ಬೇಕಾದ ಹೆಣ್ಣು ಕೊಟ್ಟು ಬೇಕಾದಲ್ಲಿ ತೆಗೆದು ಕೊಂಬುದು ಈ ಕ್ರಮವನರಿಯುವವರ ಭಕ್ತಿ ಹೊಲೆಯು ಶುವನೀರಮಿಂದಂತಾಯಿತಯ್ಯಾ!" ಎಂಬ ಶರಣರ ಅಮೃತವಾಣಿಯು ಜನರನ್ನು ಬಡಿದೆಬ್ಬಿಸಿತು. ಸ್ತ್ರೀವರ್ಗಗೂ ಸುಜ್ಞಾನಕ್ಕೂ ಅಷ್ಟೇ ಮಹತ್ವವನ್ನು ಕೊಟ್ಟ ಶರಣರು ಈ ತಮ್ಮ ಉದಾತ್ತವಾದ ವಿಚಾರಗಳನ್ನು ಕಾರ್ಯರೂಪದಲ್ಲಿ ತರದೇಬಿಡಲಿಲ್ಲ. ಸನ ತೆಸಗಳು ಕಿಡಿಕಿಡಿಯಾದರು. ಆದರೇನು? "ಸತ್ಯಕ್ಕಾಗಿ ಬಲಿಕೊಡಲು ಹೆದರುವರು ವೀರರೆ? ಅಂಜಲೇಕೋ? ಅಳುಕಲೇಕೊ? ಲೋಕನಿಗರ್ಭಣೆಗೆ, ನಾಳೆ ಬಪ್ಪುದು ನಮಗಿಂದೇ ಬರಲಿ; ಇಂದು ಬಪ್ಪುದು ನಮಗೀಗೇ ಬರಲಿ ಇಂತೆಂದಾರೆಂಬುವರು, ಇದಕಾರಳುವರು "ಜಾತಸ್ಯ ಮರಣಂ ಧೃವಂ" ಎಂಬ ವೀರನುಡಿಗಳಿಂದ ಜನರನ್ನು ಹುರುಪುಗೊಳಿಸಿದರು. ತಾವು ಹಿಮಾಚಲದಂತೆ ಅಚಲವಾಗಿ ನಿಂತರು. ಕ್ರಾಂತಿಯು ತನ್ನ ಅಂತಿಮಾವಸ್ಥೆಯನ್ನು ಮುಟ್ಟಿತು. ಹರಳಯ್ಯನೆಂಬ ಶ್ವಪಚನು ಮಧುವಯ್ಯನೆಂಬ ಬ್ರಾಹ್ಮಣನೊಡನೆ ಶರೀರ ಸಂಬಂಧವನ್ನು ಬೆಳಸಿದನು. ಶರಣರು ನುಡಿದಂತೆ ನಡೆದು ತೋರಿಸಿದರು.

"ಕಳಬೇಡ, ಕೊಲಬೇಡ, ಹುಸಿಯನುಡಿಯಲುಬೇಡ ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ–ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗಶುದ್ಧಿ ಇದೇ ನಮ್ಮ ಕೂಡಲಸಂಗಮ

ನೋಲಿಸುವ ಪರಿ. ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ. ಇಲ್ಲಿ ಸಲ್ಲದವರು, ಅಲ್ಲಿಯೂ ಸಲ್ಲರಯ್ಯಾ" ಎಂಬ ಮುಂತಾದ ಬೋಧಪರವಾಕ್ಯಗಳಿಂದ ಜನರು ಇಲ್ಲಿ ಬದುಕುವ ನಿಜದಾರಿಯನ್ನು ತೋರಿಸಿಕೊಟ್ಟರು. 'ಕಾಯಕವೇ ಕೈಲಾಸ' ಎಂದು ಹೇಳಿ ಜನರನ್ನು ಸ್ವಾವಲಂಬಿಗಳನ್ನಾಗಿ ಮಾಡಿದರು. ಕಾಯಕ ದಲ್ಲಿ ಮೇಲು ಕೀಳುಗಳಿಲ್ಲ; ಜೋಡು ಹೊಲೆಯುವ ಕಾಯಕ ಕೀಳಲ್ಲ; ದರ ಬಾರದಲ್ಲಿ ಮಂತ್ರಿಯಾಗುವ ಕಾಯಕ ಮೇಲಲ್ಲ. ಕಾಯಕದಿಂದ ಮನು ಷ್ಯನ ಮೇಲು ಕೀಳುಗಳನ್ನು ಅಳೆಯಬಾರದು, ಇವೇ ಮುಂತಾದ ತತ್ವಗ ಳನ್ನು ಬೋಧಿಸಿ ಜನರು ಸರ್ವ ಕಾಯಕಗಳನ್ನಂಗೀಕರಿಸುವಂತೆ ಮಾಡಿದರು. ತಾವೇ ಸ್ವತಃ ಒಂದೊಂದು ಕಾಯಕವನ್ನು ಅನುಸರಿಸಿ ಜನರಲ್ಲಿ ಮತ್ತಿಷ್ಟು ದೃಢವಿಶ್ವಾಸಗಳನ್ನು ಹುಟ್ಟಿಸಿದರು. ಅನುಭವ ಮಂಟಪದಲ್ಲಿ ನಾನಾ ಕಾಯ ಕದ ಜನರು ಕೂಡಿ ವ್ಯವಹಾರ ಮಾಡುವದನ್ನು ಕಂಡು ಜನತೆಯೂ ಅದರಂತೆ ಆಚರಿಸತೊಡಗಿತು.

ಶರಣರ ಕೃಪಾದೃಷ್ಟಿ ಮಾನವಜನಾಂಗದ ಅರ್ಧ ಭಾಗವಾದ ಸ್ತ್ರೀ ಸಮಾಜದ ಹಿತದ ಕಡೆಗೆ ತಿರುಗದೇ ಇರಲಿಲ್ಲ. ವೇದಾಗಮಗಳ ಕಾಲದಲ್ಲಿ ಸ್ತ್ರೀಯರಿಗೆ ತಕ್ಕಮಟ್ಟಿಗೆ ಸ್ಥಾನಮಾನವಿದ್ದಿತಾದರೂ, ಅದು ಕಾಲಕ್ರಮಿಸಿ ದಂತೆ ಅಳಿಯುತ್ತ ಬಂದಿತು ಸ್ತ್ರೀಯು ಪುರುಷನ ಉಪಭೋಗ ವಸ್ತು ವಾದಳು. ಆದರೆ ಪುನಃ ಅವರ ಸ್ವಾತಂತ್ರ್ಯದ ಅಸ್ತಂಗತ ಸೂರ್ಯನು ಉದಯವಾದನು. ಸ್ತ್ರೀಯು ಕೇವಲ ಮಾಯೆ ಆಕೆಯನ್ನು ನಂಬಬಾರದು ಎಂಬ ತಿರಸ್ಕೃತವಾಣಿಯನ್ನು ಖಂಡಿಸಿ 'ಹೆಣ್ಣು ಮಾಯೆಯಲ್ಲ ಮನದ ಮುಂದಣಾಶೆಯೇ ಮಾಯೆ,' 'ಹೆಂಣು ಕೆಂಣಲ್ಲ, ಹೆಂಣು ರಕ್ಕಸಿಯಲ್ಲ ಹೆಂಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ' ಎಂಬ ತಮ್ಮ ದಿವ್ಯ ಸಂದೇಶ ದಿಂದ ಜನರನ್ನೆಬ್ಬಿಸಿದರು. ಪುರುಷನಿಗಿರುವ ಎಲ್ಲ ಧಾರ್ಮಿಕ ಸಾಮಾಜಿಕ ಹಕ್ಕುಗಳನ್ನೂ ಸ್ತ್ರೀಯರಿಗೆ ದೊರಕಿಸಿಕೊಟ್ಟರು. ಸ್ತ್ರೀಜಾತಿಯ ದುರ್ದೆಶೆ ಅಳಿ ಯಿತು. "ಮನುಮಹಾರಾಜನ ಶಾಪದಿಂದ ಕಲ್ಲಾಗಿದ್ದ ನಮ್ಮ ಸ್ತ್ರೀ ಸಮಾ ಜವು ಅನುಭವ ಮಂಟಪದ ಶರಣರ ಪಾದಧೂಳಿಯಿಂದ, ಮತ್ತೊಮ್ಮೆ ಸ್ತ್ರೀ

ರೂಪ ತಾಳಿತು." ಮಹಾದೇವಿ ಅಕ್ಕನು ಅನುಭವ ಮಂಟಪದಲ್ಲಿ ಅಲ್ಲಮ ಪ್ರಭುವಿನೊಡನೆ ಅತಿಗಹನವಾದ ವಿಷಯವನ್ನು ಚರ್ಚಿಸುವದನ್ನು ನೆನಸಿ ಕೊಂಡರೆ, ಅಥವಾ ಶ್ರೀ ಬಸವಣ್ಣನವರು ನಾನು ಕೂಡಲಸಂಗಮಕ್ಕೆ ಹೊರಟಿ ರುವೆನೆಂದು ತಮ್ಮ ಧರ್ಮ ಪತ್ನಿಯರಾದ ನೀಲಾಂಬಿಕೆಯವರಿಗೆ ಹೇಳಿ ಕಳಿಸಿ ದಾಗ ಅವರು ಅದನ್ನು ಖಂಡಿಸಿ ಅಲ್ಲಿರುವ ಲಿಂಗವು ಇಲ್ಲಿಲ್ಲವೇ, ಎಂದು ತಮ್ಮ ಇಷ್ಟಲಿಂಗದಲ್ಲಿಯೇ ಐಕ್ಯವಾದದ್ದನ್ನು ಜ್ಞಾಪಿಸಿ ಕೊಂಡರೆ ಯಾರಿಗೆ ತಾನೇ ಈ ಮೂರ್ತಿ ಸತ್ಯತೆ ಹೊಳೆಯಲಾರದು ?

ವಿಶ್ವವಿದ್ಯಾನಿಲಯದ ಶರಣರು ಧಾರ್ಮಿಕ ಮತ್ತು ಸಾಮಾಜಿಕ ಕ್ರಾಂತಿ ಗಳ ಜೊತೆಗೆ ಸಾಹಿತ್ಯ ಕ್ರಾಂತಿಯನ್ನೂ ಮಾಡಿದರು ಅತಿಗಹನವಾದ ವಿಷ ಯಗಳನ್ನು ಸರಳವಾದ ಭಾಷೆಯಲ್ಲಿ ಸರಸೋಪಮೆಗಳಿಂದ ಜನರ ಮನಸ್ಸಿಗೆ ಮುಟ್ಟುವಂತೆ ತಿಳಿಸುವ ಹೊಸದಾದ ಮಾರ್ಗವನ್ನು ಕನ್ನಡಸಾಹಿತ್ಯಕ್ಕೆ ಹಾಕಿ ಕೊಟ್ಟರು. ತನ್ನದೇ ಆದ ವೈಶಿಷ್ಟ್ಯವನ್ನೊಳಗೊಂಡ ಗದ್ಯ ಶೈಲಿಯೊಂದು ಪ್ರಾರಂಭವಾಯಿತು. ಸಾಹಿತ್ಯಾಮೃತದ ರುಚಿಯನ್ನು ಪಾಮರರೂ ಕೂಡಾ ಸವಿಯಲಿಕ್ಕೆ ಬರುವಂತಾಯಿತು. ಕನ್ನಡದಲ್ಲಿ ಆಗಮ ವೇದಗಳಿಗೆ ಸಿಲುಕ ಲಾರದಂಥ ಜ್ಞಾನಭಾಂಡಾರವು ತುಂಬಿಕೊಂಡಿತು. ಕನ್ನಡಮ್ಮನ ಕೀರ್ತಿ ಹೆಚ್ಚಿತು. ಕನ್ನಡಮ್ಮನು ನಲಿದು ಕುಣಿದಾಡಿದಳು.

ಇದುವೇ ವೀರಶೈವ ವಿಶ್ವವಿದ್ಯಾನಿಲಯವಾದ ಅನುಭವ ಮಂಟಪವು ಮಾಡಿರುವ ಕ್ರಾಂತಿ. ಇದಕ್ಕಾಗಿಯೇ ವೀರಶೈವರೂ ಕನ್ನಡಿಗರೂ—ಅದೇಕೆ ? ಭಾರತೀಯರೂ ಕೂಡ ಹೆಮ್ಮೆ ಪಡಬೇಕಾಗಿರುವದು.

ಬಿ. ವಿರೂಪಾಕ್ಷಪ್ಪ

# ಬಸವಣ್ಣನವರ ಕ್ರಾಂತಿ ಮತ್ತು ಕಾಯಕ

ಭಾರತ ವರ್ಷದಲ್ಲಿ ಶ್ರೀ ಶಂಕರಾಚಾರ್ಯರು ಮತ್ತು ಶ್ರೀ ರಾಮಾನುಜಾಚಾರ್ಯರು ಶೈವ ಮತ್ತು ವೈಷ್ಣವ ಸಂಸ್ಕೃತಿಗಳನ್ನು ಪ್ರಚಾರಗೊಳಿಸಿದರು. ಪರಂತು ವರ್ಣಾಶ್ರಮ ಧರ್ಮವು ತನ್ನತನವನ್ನು ಕಾಯ್ದುಕೊಂಡು ಬಂದಿತು. ನಾನಾ ದೇವತೆಗಳ ಮತ್ತು ವೇದಗಳ ಹೆಸರಿನಲ್ಲಿ ಅನೇಕ ಅನಾಹುತಗಳು ನಡೆಯಹತ್ತಿದವು. ಜ್ಞಾನವು ಅಳಿದು ಕರ್ಮಟತನವೇ ಹೆಚ್ಚಾಯಿತು. ಶಾಸ್ತ್ರವು ಒಂದು ಗುಂಪಿನ ಸ್ವತ್ತಾಯಿತು. ರಾಜ್ಯವು ಅವರ ಉಸಿರಿನ ಮೇಲೆ ನಡೆಯಲಾಯಿತು. ಉಚ್ಚ ನೀಚ ಭಾವನೆಗಳು ಬೆಳೆದು ನಿಜಧರ್ಮವು ಕುಂದಹತ್ತಿತು. ಸಮಾಜವು ಮುಂಗಾಣದಾಯಿತು.

ಆ ಸಮಯಕ್ಕೆ ಕರ್ನಾಟಕದಲ್ಲಿ ಶ್ರೀ ಭಗವಾನ್–ಬಸವೇಶ್ವರನು ಜನ್ಮವೆತ್ತಿದನು. ಪೂರ್ವಜ್ಞಾನ ಮಾರ್ಗವನ್ನು ಭಕ್ತಿಯಿಂದ ಅಳವಡಿಸಿ ಸರ್ವರಿಗೂ ಈ ದೇಹದಲ್ಲಿ ಮತ್ತು ಈ ಜಗತ್ತಿನಲ್ಲಿಯೇ ಮುಕ್ತಿಯುಂಟೆಂದು ಅರುಹಿದನು. ಶೈವಧರ್ಮದಲ್ಲಿಯ ವೀರಶೈವ ಸಮಾಜದ ಜ್ಞಾನ ಮತ್ತು ಭಕ್ತಿಯನ್ನೆತ್ತಿ ವಿಶ್ವತತ್ವವನ್ನು ಹೋಲುವ ಧರ್ಮದರ್ಪಣದಲ್ಲಿ ತುಂಬಿ ಸರ್ವರನ್ನೂ ಸಂಕರಿಸಿದನು. ಉಚ್ಚ ನೀಚಭಾವನೆಯ ಉಗಮವಾದ ವರ್ಣಾಶ್ರಮ ಸಂಪ್ರದಾಯಗಳನೆಲ್ಲ ನಾಶಗೊಳಿಸಿದನು. 'ಕಾಯಕವೇ ಕೈಲಾಸ' ಎಂದು, 'ವಿಪ್ರಮೊದಲು ಅಂತ್ಯಜಕಡೆಯಾಗಿ ಸರ್ವರನೂ ಒಂದೇ ಎಂಬೆ' ಎಂದು ನುಡಿದು ನಡೆದನು. 'ನಾನು ಹಾರುವನೆಂದೆಡೆ ಕೂಡಲಸಂಗಮದೇವ ನಗುವನಯ್ಯ' ಎಂದು ಹೇಳಿ ತನ್ನ ಜನ್ಮದಿಂದಲೇ ವರ್ಣವನ್ನು ಹಳಿದು ಖಂಡಿಸಿದನು. ಆತನ ದೃಷ್ಟಿಯಲ್ಲಿ ಸರ್ವರೂ ಸಮಾನರು. ಆದರೆ 'ಅಂಗದ ಮೇಲೆ ಲಿಂಗವಿದ್ದವರನೆಲ್ಲ ಸಂಗಮನಾಥನೆಂಬೆ' ಎಂದು ಲಿಂಗ ಭಕ್ತಿಗೆ ಮಹತ್ವವನಿತ್ತು ಭಕ್ತ ಮತ್ತು ಭವಿ ಎಂಬ ಎರಡು ಭಾಗಗಳನ್ನು ಮಾಡಿದಂತೆ ತೋರುತ್ತದೆ. ದೇವರಲ್ಲಿ ಭಕ್ತಿ ಇಲ್ಲದವನು ಭವಿ; ಭಕ್ತಿಯುಳ್ಳವನು ಭಕ್ತ ಎಂದು ವಿಭಾಗಿಸಿದ್ದಲ್ಲದೆ ಭಕ್ತಿನಿಷ್ಠೆಗಳ ಪ್ರಗತಿಗನುಗುಣವಾಗಿ ಆರು ಸ್ಥಲ

ಗಳನ್ನು ಕಲ್ಪಿಸಿ, ಅವುಗಳನ್ನು ಅನುಕರಿಸುವ ಮಾರ್ಗವನ್ನೂ ತೋರಿದ್ದಾನೆ. ಇವೇ ಷಟ್ಸ್ಥಲಗಳು. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ—ಈ ಭಾಗಗಳು ಅವರವರ ಆತ್ಮೋನ್ನತಿಯ ಅಂತಸ್ಥುಗಳು.

ಯಜ್ಞ ಹೋಮ ಮೊದಲಾದ ಕರ್ಮಗಳನ್ನು ಬಸವನು ಉಗ್ರವಾಗಿ ಖಂಡಿಸಿದ್ದಾನೆ. ವೇದದ ಹೆಸರಿನಿಂದ ನಡೆಯಿಸುವ ಅನಾಹುತಗಳನ್ನು ತಿಳಿ ಹೇಳಿ-'ವೇದವನೋದಿದವರ ಮುಂದೆ ಅಳುಕಂಡೆಯಾ ಹೊತೇ' ಶಾಸ್ತ್ರವ ಹೇಳುವವರ ಮುಂದೆ ಅಳುಕಂಡೆಯಾ ಹೊತೇ........ನೀ ಅತ್ತುದಕ್ಕೆ ತಕ್ಕುದ ಮಾಡುವ ನಮ್ಮ ಕೂಡಲ ಸಂಗಮದೇವ' ಎಂಬ ಮುಂತಾದ ವಚನಗಳು ವೇದದಾಧಾರದ ಸೋಗಿನಲ್ಲಿ ಜನರನ್ನು ಮೋಸ ಮಾಡುವವರಿಗೆ ಉತ್ತರಗಳಾಗಿವೆ. ವೇದಗಳಲ್ಲಿಯ ಜ್ಞಾನ ಮಾರ್ಗಕ್ಕೆ ತಿರಸ್ಕಾರವಿಲ್ಲ, ಆದರೆ ಅವುಗಳ ವಿಚಿತ್ರ ಕಲ್ಪನೆಗಳು ಮಾತ್ರ ಹಳಿಯಲ್ಪಟ್ಟವೆ.

ಬಸವನು ಅನೇಕ ದೇವತೆಗಳಾರಾಧನೆಯನ್ನು ಖಂಡಿಸಿ ನಂಬಬಲ್ಲ ಭಕ್ತರಿಗೆ 'ದೇವನೊಬ್ಬನೇ ಕಾಣಿರೋ' ಎಂದು ಘೋಷಿಸಿದ್ದಾನೆ. ಪುಣ್ಯ ತೀರ್ಥಂಗಳಿಗೆ ಹೋಗುವದು ಅವಶ್ಯವಿಲ್ಲೆಂದು ಹೇಳಿ 'ದೇಹವೇ ದೇಗುಲ' 'ಇಷ್ಟಲಿಂಗವೇ ಸಕಲ' ಎಂದು ಸಾರಿದನು. ಈ ಪ್ರಕಾರ ಜನರಲ್ಲಿ ಹಬ್ಬಿದ ಮೂಢಭಕ್ತಿ ಮತ್ತು ಅಂಧಶ್ರದ್ಧೆಯನ್ನು ನಾಶಮಾಡಲೆತ್ನಿಸಿದನು. ಸರ್ವರನ್ನೂ ಸ್ವಾವಲಂಬಿಗಳನ್ನಾಗಿ ಮಾಡಲಿಕ್ಕೆ 'ಕಾಯಕವೇ ಕೈಲಾಸ' ಎಂದು ಉಸುರಿದನು. 'ಕಾಯಕದಲ್ಲಿ ನಿರತನಾದಡೆ ಗುರು, ಲಿಂಗ, ಜಂಗಮವನ್ನಾದರೂ ಮರೆಯಬೇಕು,' ಎಂದು ಹೇಳಿದನು. ಕಾಯಕಕ್ಕೆ ನಿತ್ಯ ನೇಮ ಮತ್ತು ಆಚಾರಗಳು ಅಡ್ಡಬಾರವು; ಯಾಕಂದರೆ ಕಾಯಕವು, ಗುರುಲಿಂಗ ಜಂಗಮ ಸೇವೆಗಾಗಿಯೇ ಮಾಡುವದಾಗಿದ್ದು ಅದು ಸ್ವಾರ್ಥಕ್ಕಲ್ಲವೆಂದು ಅರುಹಿದನು. ಬಂದ ಕಾಯಕದಿಂದ ಗುರು, ಲಿಂಗ, ಜಂಗಮಕ್ಕರ್ಪಿಸಿ ತದನಂತರ ತಾನು ಭುಂಜಿಸಬೇಕೆಂಬ ಬಸವನ ತತ್ವಕ್ಕೂ ಒಂದು ಕಟ್ಟು ಉಂಟು. ಒಂದೇ ದಿನದಲ್ಲಿ ಬಹುವಾಗಿ ದುಡಿದು ವರ್ಷಾನು ಗಟ್ಟಲೆ ಗುರುಲಿಂಗ ಜಂಗಮಕ್ಕೆ ಅರ್ಪಿಸಿ ಕಾಲ ಕಳೆಯಬಹುದು. ಆದರೆ 'ಇಂದು ಗಳಿಸಿದ ಹಣವು

ನಾಳಿಗೆ ಎಂಜಲವಾಗುವದಯ್ಯಾ ಅದು ಕೂಡಲಸಂಗಮಂಗೆ ಸಲ್ಲದು ' ಎಂಬ ಬಸವಂಣನ ವಚನವು ಧನಸಂಚಯುವನ್ನು ಮಾಡುತ್ತ ನಿತ್ಯ ನಿತ್ಯ ಕಾಯಕ ವನ್ನು ಮಾಡಲು ಉಪದೇಶಿಸುತ್ತದೆ. ಅನಂತರ ಉಳಿದ ಹಣವನ್ನು ನಿತ್ಯ ಲೂ ಶೇಖರಿಸತಕ್ಕದ್ದು. ಈ ಸರಿಯಲ್ಲಿ ಕೂಡಿಸಿದ ಹಣಕ್ಕೆ ಗಳಿಸಿದವನು ಬಾಧ್ಯಸ್ಥನಲ್ಲ. ಹೀಗೆ ಶೇಖರಿಸಿದ ಹಣವು ಸಮಾಜದ ಉಪಯೋಗಕ್ಕಾಗಿ ಆಗಿನ ಶರಣರು ವಿನಿಯೋಗ ಮಾಡುತ್ತಿದ್ದರು. ಇಲ್ಲಿ ರಷ್ಯಾದ ಸಾಮ್ಯ ವಾದವು ಮತ್ತು ವೀರಶೈವರ ಕಾಯಕ ತತ್ವವು ತುಲನಾತ್ಮಕವಾಗಿವೆ. ರಷ್ಯದಲ್ಲಿ ಸರ್ವರೂ ಉದ್ಯೋಗ ಶೀಲರಾಗಬೇಕು, ಮತ್ತು ಸರ್ವರೂ ಸಮಾನರು ಎಂದಿದೆ. ಈ ವಿಚಾರಗಳೆಲ್ಲ ಕಾಯಕ ಯೋಗದಲ್ಲಿ ಉಂಟು. ಆದರೆ ಕಾಯಕ ಯೋಗದಲ್ಲಿಯ ವಿಚಾರಗಳೆಲ್ಲ ರಷ್ಯಾದಲ್ಲಿಲ್ಲ. ಸರ್ವರಿಗೂ ಕಾಯಕದ ಫಲಿತಾಂಶವು ಅವರವರ ಕಾರ್ಯದ ಲೆಕ್ಕಂತೆ ಸಿಗುವದು. ಅದ ರಿಂದ ಅವನು ತನ್ನ ನಿತ್ಯ ಉಪಜೀವನವನ್ನು ನಡೆಯಿಸುವನು. ಅದರಲ್ಲಿ ಉಳಿದ ಹಣವನ್ನು ಅವನು ಪುನಃ ರಷ್ಯಾದ ಸರಕಾರಕ್ಕೆ ಕೊಡತಕ್ಕದ್ದು ಅಥವಾ ತನ್ನಲ್ಲಿ ಇಟ್ಟುಕೊಳ್ಳತಕ್ಕದ್ದು. ಆದರೆ ಅವನಿಗೆ ಖಾಸಗಿ ಆಸ್ತಿ ಮಾಡಲು ಬರುವಂತಿಲ್ಲ. ಇದರಿಂದ ಅವನು ಬಂದ ಹಣವೆಲ್ಲ ದುರುಪಯೋಗದಲ್ಲಿ ಖರ್ಚು ಮಾಡಬಹುದು, ಅಥವಾ ನಿತ್ಯ ನಿತ್ಯ ಕಾಯಕಕ್ಕೆ ಹೋಗುವದನ್ನು ಬಿಡಬಹುದು.

ಆದರೆ ವೀರಶೈವರ ಕಾಯಕ ಯೋಗದಲ್ಲಿ ಖಾಸಗಿ ಆಸ್ತಿಯನ್ನು ಮಾಡಬಹುದು. ಅದು ತನ್ನ ಸ್ವಂತಕ್ಕಲ್ಲ, ಸಮಾಜದ ಸಲುವಾಗಿ. ನಿತ್ಯ ಕಾಯಕದಿಂದ ಬಂದದ್ದರಲ್ಲಷ್ಟೇ ಗುರು, ಲಿಂಗ, ಜಂಗಮಕ್ಕೆ ಅರ್ಪಿಸಲು ಅರ್ಹವಾದ, ಮೂಲಕ ನಿತ್ಯ ತ್ರಿಮೂರ್ತಿಗಳಿಗೆ ಸಲ್ಲಿಸುವಷ್ಟಾದರೂ ದುಡಿ ಯಲೇಬೇಕಾಗುತ್ತದೆ. ಇದರಿಂದ ಆಲಸ್ಯವು ದೂರಾಗಿ ಉದ್ಯೋಗವು ಬರಿ ಉದರ ನಿರ್ವಹಣೆಗಾಗಿ ಅಲ್ಲದೆ ಆತ್ಮೋನ್ನತಿಯ ಸಾಧನವಾಗುವದು ಈ ಉಜ್ವಲತೆಯು ರಷ್ಯದ ಸಾಮ್ಯವಾದದಲ್ಲಿ ಕಂಡುಬರುವುದಿಲ್ಲ. ಆದರಲ್ಲಿ ಭೌತಿಕ ವಾದವೇ ಹೆಚ್ಚಿದ್ದು ಆತ್ಮೋನ್ನತಿಯ ಅಂಶವೇ ಇರುವದಿಲ್ಲ. ಈ ತತ್ವದಿಂದ ಕುರುಡರು, ಕುಂಟರು, ಮತ್ತು ಅಶಕ್ತರು ಯಾವ ತೆರದ ಲಾಭ

ಹೊಂದುವರೆಂಬ ಪ್ರಶ್ನೆ ಬರಬಹುದು. ರಷ್ಯಾ ದೇಶದಲ್ಲಿ ಈ ಜನರಿಗೆ ಸರಕಾರದಿಂದಲೇ ವ್ಯವಸ್ಥೆಯಾಗುತ್ತದೆ. ಈ ಜವಾಬ್ದಾರಿಯನ್ನು ಸರಕಾರವು ಒಪ್ಪಿದಂತೆ ಕಾಯಕ ಯೋಗದಲ್ಲಿಯೂ ಕೂಡ ಆ ಜವಾಬ್ದಾರಿಯನ್ನು ಮರೆಯಲಾಗಿಲ್ಲ. ಅದಕ್ಕಾಗಿ ಪ್ರತಿಯೊಬ್ಬ ವ್ಯಕ್ತಿಯನ್ನೂ, ಸಮಾಜವನ್ನೂ ಹೊಣೆಯಾಗಿರಿಸಲಾಗಿದೆ. "ಕಾಯಕ ಮಾಡುವೆನಯ್ಯ ಗುರು, ಲಿಂಗ, ಜಂಗಮ ಸೇವೆಗಾಗಿ........ ... . ...." ಅಂದಮೇಲೆ ಪ್ರತಿಯೊಬ್ಬನ ಸೇವೆಯನ್ನು ಮಾಡುವದು ಕಾಯಕ ಯೋಗಿಯ ಧರ್ಮವಾಗಿದೆ. ಇದರಿಂದ ಪ್ರತಿಯೊಬ್ಬನಲ್ಲಿಯೂ ಸೇವಾಭಾವನಾ ಹುಟ್ಟಿ ದಯಾ, ಪ್ರೇಮ, ಮತ್ತು ಸಹಾನುಭೂತಿಗಳು ಉತ್ಪನ್ನವಾಗಿ ಆತ್ಮಕ್ಕೆ ನಿತ್ಯವೂ ಆನಂದ ಸಿಗುತ್ತದೆ. ಅಂತೆಯೇ ಶರಣರ ಕಾಯಕವು ಸತ್ ಚಿತ್ ಸಂಪಾದನೆಗಾಗಿ; ಸದ್ಭಾವನೆ ಬೆಳಗಿಗಾಗಿ. ಅಂದಮೇಲೆ ವೀರಶೈವರ ಕಾಯಕ ಯೋಗವೆತ್ತ! ರಷ್ಯಾದ ಭೌತಿಕ ಸಾಮ್ಯವಾದ ವೆತ್ತ! ಅಲ್ಲಿಯ ಜೀವನವು ಪ್ರಾಕೃತಿಕ ಆನಂದದಲ್ಲಿ ಕಳೆದರೆ; ಇಲ್ಲಿಯ ಜೀವನವು ಪರಾತ್ಮ ಭೋಗದಲ್ಲಿ ಕಳೆಯುತ್ತದೆ. ಅಲ್ಲಿ ನಾಸ್ತಿಕವಾದ ಮೊಳೆಯಹತ್ತಿದರೆ, ಇಲ್ಲಿ ಆಸ್ತಿಕವಾದ ಬೆಳೆಯುತ್ತದೆ. ಇದುವೇ ಶಿವ ಶರಣರ ಕಾಯಕವಾದದಲ್ಲಿ ರಷ್ಯಾದ ಸಾಮ್ಯವಾದದಲ್ಲಿ ಕಂಡುಬರುವ ಆಕಾಶ....ಭೂಮಿಯಷ್ಟು ಅಂತರ.

ಜಿ. ಎಸ್. **ಹಿರೇಮಠ**, ಬಿ. ಎ., ಎಲ್. ಎಲ್. ಬಿ.,

# ನನ್ನದಾವ ಧರ್ಮ ?

ಜಗತ್ತಿನಲ್ಲಿ ಧರ್ಮದ್ದೊಂದು ದೊಡ್ಡ ಚಳುವಳಿ ನಡೆದಿದೆ. ಒಂದು ಧರ್ಮವು ಮತ್ತೊಂದನ್ನು ಬಗ್ಗುಬಡಿದು ಪ್ರಬಲವಾಗಹತ್ತಿದೆ. ಧರ್ಮದ ಹೆಸರಿನಲ್ಲಿ ಅನ್ಯಾಯ ಅತ್ಯಾಚಾರಗಳು ನಡೆಯುತ್ತಿವೆ. ಇಂಥ ಚಿತ್ರ ವಿಚಿತ್ರ ಧರ್ಮಕಾಲದಲ್ಲಿ ತನ್ನ ಧರ್ಮದ ಮೇಲೆ ಅಚಲವಾಗಿ ನಿಲ್ಲುವದೂ ಕಠಿಣ. ಪ್ರತಿಯೊಬ್ಬನೂ ಪರಧರ್ಮದ ಅವಹೇಳನ ಮಾಡತಕ್ಕವನೇ, ಸ್ವಧರ್ಮವನ್ನು ಮಿತಿಮೀರಿ ಹೊಗಳತಕ್ಕವನೇ. ಇಂದು ಜಗತ್ತಿನಲ್ಲಿ ಯಾವ ಧರ್ಮವೂ ಅವಹೇಳನೆಗೆ ಒಳಗಾಗದೇ ಇಲ್ಲ. ಇಂಥ ವಿಷಮಕಾಲದಲ್ಲಿ ನಾನು ಯಾವ ಧರ್ಮಕ್ಕೆ ಮರೆಹೊಗಬೇಕೆಂಬುದೇ ವಿಚಾರಪರನ ಪ್ರಶ್ನೆ ?

ವಿಶಾಲವಾದ ಈ ಜಗತ್ತು ಒಂದು ರಂಗಸ್ಥಳ. ಅದರಲ್ಲಿಯೂ ಆಯಾ ಧರ್ಮದ ಕಾರ್ಯಗಳು ನಾಟಕದ ಒಂದೊಂದು ಅಂಕಿನ ವಿವಿಧ ದೃಶ್ಯಗಳೆಂದು ಭಾವಿಸಿದರೆ ನಮಗೆ ಸ್ಪಷ್ಟವಾಗಿ ನಿಜಧರ್ಮದ ಅರಿವಾಗುವದು. ಈ ಭಾವನಾ ನಾಟಕದ ಮೊದಲನೇ ಅಂಕಿನಲ್ಲಿ ಯುದ್ಧವೇ ಯುದ್ಧ. ಎಲ್ಲ ದೇಶಗಳನ್ನೂ ಗೆದ್ದೆವೆಂಬ ಧ್ವನಿಯೇ ಧ್ವನಿಯು ಕೇಳಿಬರುತ್ತಿದೆ. ಯುದ್ಧವೇ ಧರ್ಮ ಪ್ರಚಾರದ ಆಧಾರವೆಂದು ಇಲ್ಲಿಯ ಜನರ ನಂಬಿಕೆ. ಈ ದೃಶ್ಯಗಳನ್ನು ನೋಡಿ ನನಗೂ ಒಂದು ತರದ ವೀರಾವೇಶ ಬಂದಿತು.

ನಾಟಕದ ಎರಡನೆಯ ಅಂಕ ಪ್ರಾರಂಭವಾಯಿತು. ಇದರಲ್ಲಿ ನಾನೆಂದೂ ಕಾಣದ ಚಿತ್ರ ವಿಚಿತ್ರ ದೃಶ್ಯಗಳು ಆಶ್ಚರ್ಯವನ್ನುಂಟುಮಾಡಿದವು. ಇಲ್ಲಿ ಯುದ್ಧವು ಧರ್ಮ ಪ್ರಚಾರದ ಸಾಧನವಲ್ಲ. ಅದು ಕೇವಲ ಪ್ರಭುತ್ವ ಪ್ರಸಾರದ ಸಾಧನವಾಗಿತ್ತು. ಮತ್ತೊಂದು ದೃಶ್ಯದಲ್ಲಿ ಸಾಹಿತ್ಯದ ಚರ್ಚೆಯೇ ಚರ್ಚೆ. ಇನ್ನೊಂದು ದೃಶ್ಯದಲ್ಲಿ ಎಂದೂ ಕೇಳಿ ಅರಿಯದ ವಿಚಿತ್ರ ವಿಜ್ಞಾನದ ಕೂಗೇ ಕೂಗು. ವಿಜ್ಞಾನಿಗಳೆಂಬುವರು ಮೋಡಿಕಾರರಂತೆ ಚಿತ್ರ ವಿಚಿತ್ರವಾದ ಪ್ರಯೋಗಗಳನ್ನು ಮಾಡಿ ತೋರಿಸಿ ಆಶ್ಚರ್ಯವನ್ನು ಹೆಚ್ಚಿಸುತ್ತಿದ್ದರು. ಇದನ್ನು ಕಂಡು ನಾನೂ ಏಕೆ ಇದರಲ್ಲಿ ಭಾಗವಹಿಸಬಾರದು ಎಂದುಕೊಂಡೆ.

ಕೊನೆಯ ಅಂಕಿನಲ್ಲಿ ಇವೆರಡಕ್ಕಿಂತಲೂ ಭಿನ್ನವಾದ ದೃಶ್ಯಗಳಿದ್ದವು. ಮೊದಲನೆಯ ದೃಶ್ಯ, ಜ್ಞಾನಮಂಟಪದ್ದು. ಇಲ್ಲಿ ಯುದ್ಧದ ಹೆಸರೇ ಇಲ್ಲ. ವಿಜ್ಞಾನದ ಸುಳಿವೂ ಇಲ್ಲ. ಅಲ್ಲಿದ್ದವರೆಲ್ಲರೂ ಮೌನವೇ ಮೈವೆತ್ತಂತೆ ಕುಳಿತಿದ್ದರು. ಒಬ್ಬ ಜ್ಞಾನಿಯು ತನ್ನ ಜ್ಞಾನ ಭಂಡಾರದ ಅಮೌಲ್ಯ ಗ್ರಂಥಗಳಾದ 'ಅನುಭವಸಾರ,' 'ವಿವೇಕ ಚಿಂತಾಮಣಿ,' 'ಕೈವಲ್ಯಪದ್ಧತಿ,' 'ಪಾರಮಾರ್ಥಗೀತೆ,' 'ಅನುಭವ ಬೋಧೆ,' ಎಂಬ ಈ ಪಂಚರತ್ನಗಳ ತಿರುಳನ್ನು ಜನತೆಗೆ ಬೀರುವದರಲ್ಲಿ ಮಗ್ನನಾಗಿದ್ದನು. 'ಆತ್ಮಶಕ್ತಿಯೇ ಮಹಾಶಕ್ತಿ' ಎಂಬುದೇ ಇದರ ಇತ್ಯರ್ಥ. 'ಜನ ಸೇವೆಯೇ ಈಶಸೇವೆ' ಎಂಬುದೇ ಇದರ ಮೂಲ. ಸಮಾನತೆಯೇ ಇದರ ಕೆಚ್ಚು. 'ಆಚಾರವೇ ಸ್ವರ್ಗ ಅನಾಚಾರವೇ ನರಕ' ಎಂಬುವುದಿದಕ್ಕೆ ಆಧಾರ. ಶಿವರೂಪವನ್ನು ಸತ್ಯರೂಪದಲ್ಲಿ ಕಂಡ ಅನುಭವ. ಈ ಎಲ್ಲ ಸತ್ಯ ವಚನಗಳು ಉಜ್ವಲ ಜ್ಯೋತಿಯಿಂದ ರಂಗಮಂಟಪವನ್ನೇ ಬೆಳಗುತ್ತಿದ್ದವು. ಒಬ್ಬ ಅಕ್ಕನು ಸಮಾನತೆಯ ದೀಪವನ್ನು ಹಿಡಿದು ಸಾಗಿದ್ದಳು. ಆಕೆಯ ಧೀರತನವನ್ನು ಕಂಡು ಬೆರಗಾಗದವರೇ ಇದ್ದಿಲ್ಲ. ಅಷ್ಟರಲ್ಲಿ ಭಾವನಾ ನಾಟಕದ ಕಡೆಯ ಪರದೆ ಬಿತ್ತು.

ಇದೆಲ್ಲ ನೋಡಿ ನಾನು ನನ್ನನ್ನು ಮರೆತುಬಿಟ್ಟೆ. ಮೊದಲನೇ ಎರಡು ಅಂಕುಗಳನ್ನು ನೋಡಿದಾಗ್ಗೆ ನನಗುಂಟಾಗಿದ್ದ ಸ್ವಾರಸ್ಯವು ಈಗ ಉಳಿದಿರಲಿಲ್ಲ. ಯಾಕಂದರೆ ಅವುಗಳಲ್ಲಿ ಅನುಕ್ರಮವಾಗಿ ದೇಹ ಮತ್ತು ಬುದ್ಧಿಗನುಸಾರವಾದ ಆನಂದವಿತ್ತು. ಆದರೆ ಕೊನೆಯದರಲ್ಲಿ ಎರಡಕ್ಕೂ ಮೀರಿದ ಆತ್ಮಜ್ಞಾನದ ಬೆಳಕು ನನ್ನ ಹೃದಯವನ್ನು ಬೆಳಗಿತು. ಈ ಬೆಳಕೇ ಆತ್ಮಾನಂದವನ್ನು ಹೊಂದುವ ಮೂಲಾಧಾರವೆಂದು ತಿಳಿದುಬಂತು. ಈ ನನ್ನ ಆನಂದಕ್ಕೆ ಆತ್ಮಜ್ಞಾನವೇ ಆಧಾರ. ಇದೇ ನನ್ನ ಪ್ರೀತಿಯ ಧರ್ಮ.

ಶಂಕರಲಿಂಗ

# ಸರ್ವಜ್ಞ ಮೂರ್ತಿ

ಶ್ರೀ ವಿಶ್ವನಾಥನ ಕೃಪೆಯಿಂದ ಸರ್ವಜ್ಞ ಮೂರ್ತಿಯು ಕನ್ನಡಿತಿ ಮಾಳವ್ವನ ಉದರದಿಂದ ಜನಿಸಿದನು. ಕುಂಬಾರ ಶಾಲೆಯಲ್ಲಿ ಬೆಳೆದನು. ಅಲ್ಲಿ ತೇರ್ಗಡೆ ಹೊಂದಿದಮೇಲೆ ವಿಶ್ವವೆಂಬ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶ ಮಾಡಲು ಬಯಸಿದನು. ಆ ಕಾಲದಲ್ಲಿ ಈಗಿನಂತೆ ವಿಶ್ವವಿದ್ಯಾಲಯಗಳು ಅಸ್ತಿತ್ವದಲ್ಲಿರಲಿಲ್ಲ. ಆದರೂ ನಿಜವಾದ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಬೇಕೆಂಬುವ ಹಂಬಲವಿವನಿಗೆ. ಆ ಹಂಬಲಕ್ಕೆ ಅವನಾತ್ಮದ ಬೆಂಬಲ. ಆ ಬೆಂಬಲವು ಅವನ ಸದುದ್ದೇಶವನ್ನೀಡೇರಿಸಿಯೇಬಿಟ್ಟಿತು. ವಿಶ್ವವನ್ನೇ ತನ್ನ ವಿಶ್ವವಿದ್ಯಾನಿಲಯವನ್ನಾಗಿ, ಪ್ರಕೃತಿಯನ್ನೇ ತನ್ನ ಪಠ್ಯ ಪುಸ್ತಕವನ್ನಾಗಿ ತನ್ನ ದೇಹವನ್ನೇ ಆ ವಿದ್ಯಾಲಯದ ದೇವಾಲಯವನ್ನಾಗಿ ಮಾಡಿ ಅನುಭವ ಮಾರ್ಗವನ್ನು ಅನುಸರಿಸಿ ಪಾಠಗಳನ್ನು ಕಲಿತನು. ಕುಂಬಾರ ಶಾಲೆಯನ್ನು ಬಿಟ್ಟು 'ಕರವೆ ಕಪ್ಪರ ಹಿಡಿದು, ಮಂಡೆ ಬೋಳಿಸಿಕೊಂಡು, ತುಂಡುಗಂಬಳಿ ಹೊದೆದು' ವಿಶ್ವವಿದ್ಯಾನಿಲಯವನ್ನು ಸೇರಿದನು. ವಿಶ್ವದಲ್ಲಿ, ವೀರ ಅಂದರೆ ಶ್ರೇಷ್ಠ, ಶೈವ ಅಂದರೆ ಶಿವಭಕ್ತನಾಗಿ ಧೀರ ನಡೆನಡೆದು ವೀರ ನುಡಿ ನುಡಿದನು.

ಸರ್ವಜ್ಞನ ಜೀವನ ಸಾಮಾಜಿಕ ಜೀವನ. ಸರ್ವರೊಳು ಬೆರೆತಾಡುವ ಜೀವನ. 'ಸರ್ವರೊಳೊಂದೊಂದು ನುಡಿಗಲಿತು ವಿದ್ಯದ ಪರ್ವತವೇ ಆಗಿ' ಸರ್ವಜ್ಞನಾದನು, ಗರ್ವದಿಂದ ಸರ್ವಜ್ಞನಾಗಲಿಲ್ಲ. ಕನ್ನಡ ಕುಲವೇ ಅವನ ಕುಲ, ಹಿಂದೂ ಧರ್ಮವೇ ಅವನ ಧರ್ಮ, ಮಾನವ ಜಾತಿಯೇ ಅವನ ಜಾತಿ. ಊರೆಲ್ಲಾ ಅವನ ನೆಂಟರು ; ಕೇರಿಯಲ್ಲಾ ಅವನ ಬಳಗವು. ತಿರುಕನಾಗಿ ದೇಶವನ್ನೆಲ್ಲಾ ತಿರುಗಿದನು. ಮನೆ ಮನೆಗೆ ಹೋಗಿ ಮಾನವ ಕುಲವನ್ನು ಉದ್ಧರಿಸಿದನು. ಕನ್ನಡ ಸಂಸ್ಕೃತಿಯ ಉಚ್ಚಭಾವನೆಗಳನ್ನು ಹಳ್ಳಿ ಹಳ್ಳಿಗೆ ಹಬ್ಬಿಸಿದನು. ಗುಡ್ಡ ಗಂಹರಗಳಲ್ಲಿ ತಾ ಕಂಡ ಸಂನ್ಯಾಸಿಗಳಿಗೆ

" ಜನಸೇವೆಯೇ ಈಶಸೇವೆ " ಎಂದು ಪಾಠಗಲಿಸಿದನು. ಮುಮುಕ್ಷುಗಳಿಗೆ ಮುಕ್ತಿಮಾರ್ಗವನ್ನೂ ತೋರಿದನು.

ಸರ್ವಜ್ಞ ಸ್ವಾತಂತ್ರ್ಯಪ್ರಿಯ; ಸತ್ಯಪ್ರಿಯ; ಕಂಡದ್ದನ್ನು ಕಂಡಂತೆ ಆಡುವ ಗಂಡುಗಲಿ. ಪುಂಡರು ಇವನ ತಿರುಕುತನವನ್ನು ತಿರಸ್ಕಾರ ದೃಷ್ಟಿಯಿಂದ ನೋಡಿರಬಹುದು. ಬುದ್ಧಿಹೀನರು ಇವನ ಭಿಕ್ಷಾಯಾತ್ರೆಯನ್ನು ಬಿರುನುಡಿಗಳಿಂದ ಹಾಸ್ಯ ಮಾಡಿರಬಹುದು. ಇಂಥವರ ಮನೋವೃತ್ತಿಯನ್ನು ಕುರಿತು ಈರೀತಿಯಾಗಿ ಖಂಡಿಸಿದ್ದಾನೆ:

ಆನೆ ನೀರಾಟದಲಿ ಮೀನಕಂಡಂಜುವದೆ? ।
ಹೀನಮಾನವರ–ಬಿರುನುಡಿಗೆ ತತ್ವದಾ ।
ಜ್ಞಾನಿಯಂಜುವನೆ? ಸರ್ವಜ್ಞ

ಈ ಪ್ರಕಾರ ತನ್ನ ಉದಾತ್ತ ಧ್ಯೇಯ ಸಾಧನೆಯಲ್ಲಿ ಉಚ್ಚ ನೀಚ ಭಾವನೆಯನ್ನು ಲಕ್ಷಿಸದೆ ಕುಲಗೋತ್ರಕ್ಕೆ ಮಾನ್ಯತೆ ಕೊಡದೆ ಜಾತಿ ಮತಗಳನ್ನು ಮನ್ನಿಸದೆ ವಿಶ್ವ ಬಂಧುತ್ವವನ್ನು ಬೀರಿದನು:

ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು ।
ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ ।
ನಡುವೆ ಎತ್ತಣದು? ಸರ್ವಜ್ಞ

ನಾರಿಯನ್ನು ಅನೇಕ ತತ್ವಜ್ಞಾನಿಗಳು ಮಾಯೆಯೆಂದು ತಿರಸ್ಕರಿಸಿದರು. ಮತ್ತೆ ಕೆಲವರು ಮಿತಿಯಿಲ್ಲದೆ ಹೊಗಳಿ ಸಾಕ್ಷಾತ್ ದೇವಿಯ ಸ್ಥಾನವನ್ನೇ ಕೊಟ್ಟರು. ಆದರೆ ಸರ್ವಜ್ಞನು ಮಾತ್ರ ಆಕೆಯ ನಿಜಸ್ವರೂಪದಲ್ಲಿ ಹೀಗೆ ಕಾಣುವನು:

ನಾರಿ ಪರರುಪಕಾರಿ। ನಾರಿ ಸ್ವರ್ಗಕೆ ದಾರಿ ।
ನಾರಿ ಸಕಲರಿಗೆ–ಹಿತಕಾರಿ, ಮುನಿದರಾ ।
ನಾರಿಯೇ ಮಾರಿ! ಸರ್ವಜ್ಞ

ನಮ್ಮ ದೇಶ ಸಾವಿರಾರು ವರುಷಗಳಿಂದ ಒಕ್ಕಲುತನದ ವೇಶವಾಗಿ ಬಂದಿದೆ. ಇಲ್ಲಿಯ ಜನತೆಯ ಆಗುಹೋಗುಗಳು ಒಕ್ಕಲುತನದ ಮೇಲೆಯೇ ಅವಲಂಬಿಸಿವೆ. ಬೇಸಾಯದ ಬಗ್ಗೆ ಸರ್ವಜ್ಞನ ಹೆಮ್ಮೆ ಬಹಳ. ಅವನು 'ಕೋಟಿ ವಿದ್ಯೆಗಳಿಗಿಂತ ಮೇಟಿ ವಿದ್ಯೆಯೆ ಲೇಸು' ಎಂದು ಕೊಂಡಾಡು ವನ್ನು ಮುಂದುವರಿದಿದ್ದನು. ಮನೆಮನೆಗೂ ಹಾಲುಹಯನುಗಳ ಮಹತ್ವ ವನ್ನು ಹೇಳುತ್ತಾ ಆರೋಗ್ಯ ಸಂಪತ್ತನ್ನು ಗಳಿಸುವ ಮಾರ್ಗವನ್ನು ತೋರಿ ದನು. ಆತನು ತನ್ನ ಭಾವಚಿತ್ರದಲ್ಲಿ ಆರೋಗ್ಯದ ಲಕ್ಷಣಗಳಿಂದ ತುಂಬಿ ತುಳುಕುವನು. ಕಚ್ಚೆ ಕೈ ಬಾಯಿಗಳ ಇಚ್ಛೆಯಲಿರಿಸಿ, ಕಣ್ಣು ನಾಲಗೆ ಮನವ ತನ್ನದಾಗಿ ಮಾಡಿ ತನ್ನ ಮಿತ್ರನೇ ತಾನಾದನು. ಈ ಪ್ರಕಾರ ಮನವ ಗೆದ್ದು ಮಹಾದೇವನ ಪಡೆದನು.

ತತ್ವಗಳ ತರ್ಕದಿಂದ ಒಬ್ಬನೇ ಜಗತ್ಕರ್ತನೆಂದು ತಿಳಿದು ಆ ಒಬ್ಬ ದೇವನನ್ನೇ ನಂಬಿ ಹಲವು ದೈವಂಗಳಿಗೆ ಬಾಯ್ಬಿಡದೆ, ತೀರ್ಥಯಾತ್ರೆಗಳನ್ನು ಮಾಡದೆ ತನ್ನ ದೇಹದಲ್ಲಿಯೇ ದೇವರನ್ನು ಕಂಡನು. ಪೂಜಿಸಲು ಗುಡಿ ಗುಂಡಾರಗಳಿಗೆ ಹೋಗದೆ ಮನದಲ್ಲಿಯೇ ಆತ್ಮಲಿಂಗ ಪೂಜೆಗೈದು ಅಂಗವನ್ನೇ ಲಿಂಗಸ್ವರೂಪವನ್ನಾಗಿ ಮಾಡಿದನು.

ಸರ್ವಜ್ಞನ ಜೀವನವು ಶಾಂತಿ ಸುಖ ಆನಂದಮಯವಾದುದು, ಜನ ಪ್ರಿಯವಾದುದು, ಸತ್ಯಸುಂದರವಾದುದು, ಸ್ವಾತಂತ್ರ್ಯಪೂರ್ಣವಾದುದು. ಅಂದು ಶೂರನಾಗಿ ನಡೆದು, ಇಂದು ವೀರನಾಗಿ ಕಾಣುವನು ಆ ಕನ್ನಡಜಾಣ. ಸರ್ವಜ್ಞಮೂರ್ತಿಯು ತ್ರಿನೇತ್ರಧಾರಿ. ಒಂದು ನೇತ್ರದಿಂದ ಭೂತಕಾಲ ವನ್ನೂ, ಮತ್ತೊಂದು ನೇತ್ರದಿಂದ ವರ್ತಮಾನಕಾಲವನ್ನೂ, ಮಗುದೊಂದು ನೇತ್ರದಿಂದ ಭವಿಷ್ಯತ್ಕಾಲವನ್ನೂ ಕಂಡನು. ಅದು ಕಾರಣವೇ ಸರ್ವಜ್ಞ ಮೂರ್ತಿಯು ಕನ್ನಡ ಕುಲದ ಮುಕ್ಕಣ್ಣನು. ಕನ್ನಡ ಜನತೆಯ ಉದ್ಧಾರ ಕನಾದನು. ಅವನ ಅನುಭವದ ವಚನಗಳು ಕನ್ನಡಿಗರ ಕೈ ದೀವಿಗೆಗಳು.

ಶಿವಸಂಗಮ

# ಪೂಜೆ

ತನ್ನ ಶತ್ರುವಾದ ಕಾಳರಾತ್ರಿಯನ್ನು ಯುದ್ಧದಲ್ಲಿ ಸೋಲಿಸಿ ಗಂಭೀರ ಪ್ರಭಾವವನ್ನು ಬೀರುತ್ತ, ಅದೇ ತಾನೆ ಪ್ರಭಾಕರನು ಕೆಂಪೇರಿದ ಮುಖ ದೊಂದಿಗೆ ಜಗತ್ತನ್ನು ಬೆಳಗಲು ಮೂಡಿಹನು. ಅವನ ರಕ್ತಮಯವಾದ ಕಿರಣಗಳು ಆಕಾಶದಲ್ಲೆಲ್ಲಾ ಪಸರಿಸಿ ಥಳಥಳನೆ ಹೊಳೆದವು. ಮುಂಜಾವಿನ ತಂಗಾಳಿಯಿಂದ ಜಗತ್ತಿನ ಯಾವತ್ತೂ ಪ್ರಾಣಿಗಳ ನವಚೈತನ್ಯವು ಬಲಪಡು ತ್ತಿರುವಾಗ ಅನತಿದೂರದಲ್ಲಿ ಬಂದು ನಿಂತಿತು ರಥವೊಂದು. ಜೋಡು ಕುದುರೆಗಳ ಸುಂದರ ರಥವೊಂದು. ನಾನು ಆಕಡೆ ನೋಡುತ್ತಿರಲು ಒಬ್ಬ ಸುಂದರ ತರುಣಿಯು ಬರುವುದನ್ನು ಕಂಡೆನು. ನನ್ನ ದಣಿದ ಕಣ್ಣುಗಳಲ್ಲಿ ನವಶಕ್ತಿಯೊಂದು ಹುಟ್ಟಿ, ನನ್ನ ಆತುರತೆಯನ್ನು ಇಮ್ಮಡಿಸಿತು. ಅವಳು ನನ್ನ ಕಡೆಗೆ ಬರುತ್ತಿದ್ದಳು. ಅವಳು ಬೆಲೆಯುಳ್ಳ ವಸ್ತ್ರಾಭರಣಗಳಿಂದ ಶೃಂಗಾರವಾದುದರಿಂದ ಶ್ರೀಮಂತ ಮನೆತನದವಳೆಂದು ತಿಳಿಯಿತು. ಮುಂದೆ ಇಬ್ಬರು ಚಾರರು, ಹಿಂದೆ ಇಬ್ಬರು ದಾಸಿಯರು, ದಾಸಿಯೊಬ್ಬಳ ಕೈಯಲ್ಲಿ ಹಣ್ಣು ಹಂಪಲುಗಳಿದ್ದರೆ, ಇನ್ನೊಬ್ಬಳು ಕೈಯಲ್ಲಿ ಪೂಜಾಸಾಮಗ್ರಿಗಳನ್ನು ತೆಗೆದುಕೊಂಡು ಬರುತ್ತಿದ್ದಳು. ತರುಣಿಯ ಮುಖವು ಕುಂಕುಮ ವಿಭೂತಿ ಯಿಂದ ಶೋಭಿಸುತ್ತಿರುವುದರಿಂದ, ಅವಳೊಬ್ಬ ವೀರಶೈವ ತರುಣಿಯೆಂದೂ, ಈಶ್ವರ ಪೂಜೆಗೆ ಬರುತ್ತಿರಬಹುದೆಂದೂ ತಿಳಿಯಿತು. ನನ್ನ ನೊಂದ ಮನ ಸ್ಸಿಗೆ ಮಾತ್ರ ಎಣೆಯಿಲ್ಲದ ಸಂತೋಷವೆನಿಸಿತು. ಆದರೆ ನನ್ನ ದಣಿದ ದೇಹವು ಬಿದ್ದ ಸ್ಥಳದಿಂದ ಚಲಿಸಲಿಲ್ಲ.

ಚಾರನೊಬ್ಬನು "ಎಲೋ, ಏ ಪಾಪಿ, ಕಣ್ಣುಕಾಣುವುದಿಲ್ಲವೋ ನಿನಗೆ; ದೇವಿಯು ಪೂಜೆಗೆ ಬರುತ್ತಿರುವಾಗ ದಾರಿಯಲ್ಲಿ ಯಾಕೆ ಬಿದ್ದಿರುವೆ, ಏಳು" ಎನ್ನುವಷ್ಟರಲ್ಲಿ ಇನ್ನೊಬ್ಬ ಚಾಕರನು ತನ್ನ ಕೈಯಲ್ಲಿದ್ದ ಬಡಿಗೆಯಿಂದ ಒಂದು ಏಟು ಹಾಕಿಯೇ ಬಿಟ್ಟನು.

ಕೂಡಲೇ ದೇವಿಯು—" ಮೂರ್ಖನೇ ನಿನಗಾರು ಹೊಡೆಯಲಿಕ್ಕೆ ಹೇಳಿದರು. ಕಣ್ಣು ಕಾಣುವದಿಲ್ಲವೋ ನಿನಗೆ. ನೋಡಲ್ಲಿ! ಅವನ ಹಣೆಯಿಂದ ಹೇಗೆ ರಕ್ತ ಚಿಮ್ಮುತ್ತಿರುವುದು." ಎಂದವಳೇ ನನ್ನ ತಲೆಯನ್ನು ತನ್ನ ತೊಡೆಯ ಮೇಲೆ ಇರಿಸಿಕೊಂಡು ಉಪಚರಿಸ ಹತ್ತಿದಳು. ನಾನು ಅವಳ ನುಣ್ದೊಡೆಗಳ ಮೇಲೆ ಬಿದ್ದಿರುವೆ. ನನ್ನ ಹಣೆಗಾದ ಘಾಯವನ್ನು ತೊಳೆದು, ಹಣೆಗೆ ವಿಭೂತಿಯನ್ನು ಹಚ್ಚಿ, ತಾನು ಉಟ್ಟಿರುವ ಬೆಲೆಯುಳ್ಳ ಸೀರೆಯ ಜರದ ಅಂಚನ್ನು ಹರಿದು ನನ್ನ ಹಣೆಗೆ ಕಟ್ಟಿದಳು. ದಾಸಿಯರು ಒಂದೇ ಸಮನೆ ಗಾಳಿಯನ್ನು ಹಾಕುತ್ತಲಿದ್ದರು. ನನಗೆ ಸ್ವಲ್ಪ ಎಚ್ಚರ ಬಂದ ಕೂಡಲೇ, ದೇವರಿಗೆಂದು ತೆಗೆದುಕೊಂಡು ಬಂದ ಹಣ್ಣು ಹಂಪಲುಗಳನ್ನು ನನ್ನ ಮುಂದಿರಿಸಿದಳು. ನಾನು ಎರಡು ದಿವಸಗಳಿಂದ ಊಟವಿಲ್ಲದ ಕಾರಣ ಹಸಿವೆಯಿಂದ ಕಂಗೆಟ್ಟಿದ್ದೆನು. ಪ್ರಾಣ ಉಳಿಯಿತು.

ಆಗ ನಾನು—" ದೇವಿ, ನೀನು ಪೂಜೆಗಾಗಿ ಇಲ್ಲಿಗೆ ಬಂದಿರುವುದಿಲ್ಲವೇ ? "

ದೇವಿ :—" ಹೌದು. "

ನಾನು :—" ದೇವಿ, ನೀನು ಆ ಪರಮಾತ್ಮನ ಸಲುವಾಗಿ ವಿಭೂತಿ ಗಂಧ ಪುಷ್ಪಾದಿಗಳನ್ನು ತಂದಿರುವುದಿಲ್ಲವೇ ? "

ದೇವಿ :—" ಹೌದು. "

ನಾನು :—" ದೇವಿ ನೀನು ಈಶ್ವರನಿಗೆ ನೈವೇದ್ಯವೆಂದು ಹಣ್ಣು ಹಂಪಲುಗಳನ್ನು ತಂದಿರುವದಿಲ್ಲವೇ ? "

ದೇವಿ :—" ಹೌದು. "

ನಾನು :—" ಆದರೆ ಈಗ ? "

ಆಗ ತರುಣ ಪೂಜಾರಿಣಿಯು ನಗುಮೊಗದವಳಾಗಿ ನುಡಿದಳು. " ವೀರಶೈವರ ದೇವನು ಅತಿಥಿಗಳ ಸೇವೆ, ಬಳಲಿದವರ ಸತ್ಕಾರ ಮಾಡುವ

ದರಲ್ಲಿ, ಮತ್ತು ಅವರನ್ನು ತುಷ್ಟಿಗೊಳಿಸುವದರಲ್ಲಿ ಸಂತುಷ್ಟನಾಗುವನು" ಅಣ್ಣನವರು ಹೇಳಿದ ಜಂಗಮ ಪೂಜೆಯ ಗುಟ್ಟು ಇದುವೇ ಆಗಿದೆಯಲ್ಲವೇ? ಎಂದಳು.

ಹೀಗೆ ಯುವತಿ ಪೂಜಾರಿಣಿಯು ಪೂಜೆ ತೀರಿಸಿ ಹಿಂತಿರುಗಿದಳು. ನಾನು, "ಜನಸೇವೆಯೇ ಈಶಸೇವೆ." ಎಂದು ಧರ್ಮದ ಮರ್ಮವನ್ನರಿತ ವೀರಶೈವರ ಭಕ್ತಿಯನ್ನು ಮನದಲ್ಲಿಯೇ ಕೊಂಡಾಡಿ ಕೃತಾರ್ಥನಾದೆನು. ಆ ಅನುಭವಿ ಪೂಜಾರಿಣಿಯ ಮಾತನ್ನು ನನಗೆ ಗುರೂಪದೇಶವಾಗಿ ಭಾವಿಸಿದೆನು.

# ದೇವಾ ನೀನೇಕೆ ಜನ್ಮ ಕೊಟ್ಟೆ ?

" ಆಗತಾನೆ ತಾಯಿಯ ಉದರದಿಂದ ಹೊರಬಿದ್ದ ಕೂಸಿನ ಅಳು ವಿಕೆಯನ್ನು ಕಂಡು ನನ್ನಮನದಲ್ಲಿ ಮೂಡಿದ ಕಲ್ಪನೆಯಿದು:—

" ಬಂದೆ ಕೈಜೋಡಿಸುತಲೀ ಜಗಕೆ,
ಬಂದೆ ಬರುವಾಗ ನಿಂದಿಸುತಲೀ ಜಗಕೆ,
ಒಂದೆ ಮನದಿಂದಲ್ಲ, ದಬ್ಬಿದನು ಪ್ರಭುದೇವ ಮೂಜಗಕೆ "

ಪೂರ್ವದ ಪಾಪ ಕರ್ಮಗಳನ್ನು ತೊಳೆದುಕೊಳ್ಳಲು ಬಂದೆ. ಜಗದ ಅಂಧ ಕಾರವನ್ನು ನೋಡಿದೆ; ಚೀರಿದೆ; ಅತ್ತೆ; ಕರೆದೆ. ಆದರೆ ನನ್ನ ಅಳುವು ನೆರೆದ ಜನರಿಗೆ ಸಂತೋಷ ಕೂಟವಾಯಿತು. ನನ್ನ ದುಃಖವು ಉಕ್ಕುತ್ತಿರಲು ಸುತ್ತಿರಿದ ಜನರು ಆನಂದ ಲೋಲರಾಗಿದ್ದರು. ಇದು ನನಗೆ ಸಹನವಾಗಲಿಲ್ಲ. ಇದೇನು ? ನನ್ನನ್ನು ಇವರು ಮಂಗನಂತೆ ಹಲ್ಲು ಕಿರಿದು ಸ್ವಾಗತಿಸುತ್ತಿರುವರಲ್ಲಾ ಎಂದೆನಿಸಿತು. ನಾನು ಶೋಕಿಸು ತ್ತಿರುವಾಗ ಈ ಜನರು ನಗುತ್ತಿರಬೇಕೆ ? ಒಬ್ಬರೂ ಕೂಡ ನನ್ನನ್ನು ಸಂ ತೈಸದೆ ನನ್ನ ದುಃಖದಲ್ಲಿ ಭಾಗಿಯಾಗದೆ ಅಣಕಿಸುತ್ತಿರಬೇಕೆ ? ಎಂದು ಮನದಲ್ಲೇ ಸಂತಪ್ತನಾದೆ. ಆದರೆ ಕೇಳುವವರಾರು ? ನನ್ನ ಮನದ ಗೋಳು ಆ ನರರಿಗೆ ತಿಳಿಯುವುದೆಂತು ?

ಕಟ್ಟ ಕಡೆಗೆ ಸೃಷ್ಟಿಕರ್ತನಾದ ಪರಮಾತ್ಮನಿಗೆ ಮೊರೆ ಇಟ್ಟೆ. ಕಲಿ ಯುಗದಲ್ಲಿ ನನಗೆ ಜನ್ಮವೇಕಿತ್ತೆ ದೇವಾ ! ಎಂದು ತೆಗೆದ ಉದ್ಗಾರ ಕೇಳಿ ಸಿತೋ ಏನೋ, ಅನಂದಮೂರ್ತಿಯಾದ ಜಗದೊಡೆಯ, ನನ್ನ ಜೀವಾಳ, ನನ್ನ ಕಡೆಗೆ ನೋಡಿದ ಜಗಕೆಲ್ಲ ಶಾಂತಿಗೊಳಿಸುವ ಆ ನೋಟ ನನ್ನ ತಳಮಳಿಸುವ ಜೀವಕ್ಕೆ ಶಾಂತಿಗೊಳಿಸದೆ ಇದ್ದೀತೆ ? ಆತನು ಕೊಟ್ಟ ಬೋಧಾಮೃತವು ನನಗೆ ಮೃದುವಾಗಿ ಕೇಳಿಸಿತು. " ಮಗು ನಡೆದಂತೆ,

ನುಡಿದಂತೆ ಫಲವುಂಟು ಈ ಜಗದಲ್ಲಿ. ನೀ ಬಗೆದರೆ ಈ ಲೋಕ ಸ್ವರ್ಗ ವಾಗಿ ಪರಿಣಮಿಸುವುದು. ಪಾಪ ಕರ್ಮಗಳಿಲ್ಲದೆ ಮುಕ್ತಿ ಯಿಲ್ಲ. ಮುಕ್ತಿ ಯಿಲ್ಲದೆ ನಾ ಇಲ್ಲ ನಿನಗೆ. ವಿಧಿಯು ಯಾರಿಗೂ ಬಿಟ್ಟಿದ್ದಲ್ಲ. ನನಗೆ ಕೂಡ ಮರ್ತ್ಯಲೋಕದಲ್ಲಿ ಜನ್ಮ ತೊಡುವುದು ತಪ್ಪಲಿಲ್ಲ. ಆದಕಾರಣ ನಡೆದಂತೆ ನುಡಿ, ನುಡಿದಂತೆ ನಡಿ. ಇದರಲ್ಲಿಯೇ ನಿನ್ನ ಕಲ್ಯಾಣವಿದೆ. ಇದೇ ನಿನ್ನ ನೀಗುವ ಮಾರ್ಗ. ”

ದೇವಾ ನಾನು ಧನ್ಯನು, ಧನ್ಯನು, ಎಂದುಕೊಂಡೆ. ಕೈ ಮುಗಿದೆ, ಹಿಡಿಸಲಾರದಷ್ಟು ಆನಂದವಾಯಿತು. ಹಸನ್ಮುಖನಾದೆ.

ವೀರೇಂದ್ರ ಪಾಟೀಲ

# ಮತ್ತೆ ಮರಳಿ ಬಂದಾವೆ ?

ಇದು ಇಪ್ಪತ್ತನೆಯ ಶತಮಾನ, ಎಲ್ಲರೂ ಸುಖ ಮತ್ತು ಸೊಬಗಿನ ಮೂಢದಾಸರು. ಈ ಸುಖದ ಬೆನ್ನುಹತ್ತಿ ಮೃಗಜಲ ಕುಡಿದವರೆ ಬಲು ಮಂದಿ. ಈಗ ಯುವಕರು ಯುವಕಿಯ ವೇಷಧರಿಸುವದು, ಯುವತಿಯರು ಯುವಕರ ಸೋಗು ಹಾಕುವದು ಇದೊಂದು ಸುಧಾರಿಸಿದವರ ಲಕ್ಷಣ. ನಾನು ಸಹ ಸುಧಾರಿಸಿದವನೆ—ಸುಧಾರಿಸುವದೆಂದರೆ ಕೆಟ್ಟ ಪದಾರ್ಥವನ್ನು ಸರಿ ಪಡಿಸೋಣ. ಆದರೆ ಕಾಲಗತಿಯು ಹೆಚ್ಚಿದಂತೆ ಈ ಅರ್ಥದಲ್ಲೂ ಬದಲಾವಣೆಯಾಗುತ್ತಿದೆ. ಈಗ ನಾವು ಇದರರ್ಥ ಸುಧಾರಿಸುವದೆಂದರೆ ಒಳ್ಳೆಯದನ್ನು ಒಂದು ಹೊಸ ಪದ್ಧತಿಯಿಂದ ತೋರದಂತೆ ಕೆಡಿಸುವದೆಂದೇ ಹೇಳಬಹುದು—' ನನ್ನ ಹೆಂಡತಿಯು ನನಗಿಂತಲೂ ಹೆಚ್ಚಿನವಳು. ನಾನೂ ಹೈದ್ರಾಬಾದಿನಲ್ಲಿ ಶಿಕ್ಷಣಪಡೆದವನಾದರೆ, ಅವಳು ಹೆಣ್ಣಿನ ಕೇಂದ್ರವಾದ ಪುಣೆ ಶಹರಿನಲ್ಲಿವಿದ್ಯಾವಂತಳಾದವಳು. ಅಂದಮೇಲೆ ಕೇಳುವದೇನು ? ನಾನು ದಿನದಲ್ಲಿ ಒಂದು ಡ್ರೆಸ್ಸು ಬದಲಾಯಿಸಿದರೆ ಅವಳು ನಾಲ್ಕು. ನಾನು ಎರಡು ಸಲ ಬೂದಿ ಬಳಿದುಕೊಂಡರೆ ಅವಳು ಐದುಸಲ. ಅಂತು ಅವಳು ನನಗಿಂತಲೂ ಯಾವ ಮಾತಿನಲ್ಲೂ ಎಳ್ಳಷ್ಟು ಕಡಿಮೆಯಲ್ಲ.

ನಾನೀಗ ವಿದ್ಯಾಖಾತೆಯಲ್ಲಿ ತಿಂಗಳೊಂದಕ್ಕೆ ನೂರು ರೂಪಾಯಿಗಳನ್ನು ಪಡೆಯುತ್ತಿರುವೆನು. ನನ್ನ ಏಳಿಗೆಗೂ ಒಂದು ಬಂದಿತ್ತು. ಆದರೆ ನಾನು ಅದಕ್ಕೆ ಒಪ್ಪದೆ ಕೀಳೆಂದು ತಿಳಿದು ಬಿಡಿಸಿ ಬಿಟ್ಟೆದ್ದು ನನ್ನ ತಪ್ಪೇ ಹೊರತು ಅವಳದಲ್ಲ. ಅವಳಿಗೆ ನೌಕರಿ ಮಾಡುವದೆಂದರೆ ಬಲು ಉಲ್ಹಾಸ. ಯಾಕೆಂದರೆ ಅವಳು ಸ್ತ್ರೀ ಸ್ವಾತಂತ್ರ್ಯ ಬೇಡತಕ್ಕವಳು. ಸ್ವಂತಗಳಿಸದೆ ಗಂಡನ ಆದಾಯದಲ್ಲಿ ತಿಂದು ಕೂಡ್ರುವದಕ್ಕೆ ಒಪ್ಪುತ್ತಿರಲಿಲ್ಲ. ಆದಾಗ್ಯೂ ನೌಕರಿ ಮಾಡಿ ಅವಳೆಷ್ಟು ಹುದ್ದೆದಾರರನ್ನು ಗುರ್ತಿಸಬಹುದಾಗಿತ್ತು. ಅದಕ್ಕಿಂತ ಹೆಚ್ಚು ಜನರನ್ನು ಗುರ್ತಿಸುತ್ತಿರುವಳು. ಮನೆಯೊಳಗೊಂದು

ಮುದಿತಾಯಿ ಪೂರ್ವಜರ ಸಹವಾಸ ಮತ್ತು ಸಂಸ್ಕಾರದಿಂದ ಹನ್ನೆರಡ ನೆಯ ಶತಮಾನದವಳಾದಾಗ್ಯೂ ನಮ್ಮನ್ನು ನೋಡಿ ಪೂರ್ಣ ಪರಿವರ್ತನೆ ಹೊಂದಿದ್ದಾಳೆ.

ಇಂದು ನನಗೆ ಸಂಜೆಯ ಕಡೆಗೆ ನನ್ನ ಮಿತ್ರರ ಸಂಗಡ ಕ್ರಿಕೇಟ ವಾಡಲು ಹೋಗಬೇಕಾಗಿದೆ. ಆಡುವದಕ್ಕೆ ಹೋಗುವಾಗ ನಮ್ಮವರೆಲ್ಲ ಒಂದೇ ತರದ ವಸನವನ್ನು ಉಡಬೇಕೆಂಬ ಪದ್ಧತಿಯನ್ನು ನಿಮಗೇನು ಹೇಳ ಬೇಕಾದುದಿಲ್ಲ. ಆದರೆ ಇಂದೊಂದು ಹೊಸ ಪಾಠವನ್ನು ಕಲಿಯ ಬೇಕಾಗಿದೆ ನಾನು. ಇಷ್ಟು ದಿನಗಳ ವರೆಗೆ ಅಲ್ಪಸ್ವಲ್ಪ ಮಿಸೆಗಳನ್ನು ಜೋಕೆ ಮಾಡು ತ್ತಿದ್ದೆ. ಇಂದುಮಾತ್ರ ಅವುಗಳನ್ನು ಸಂರಕ್ಷಿಸುವಂತಿಲ್ಲ. ಎಲ್ಲ ನನ್ನ ಮಿತ್ರರು ನನ್ನನ್ನು ಮಿಸೆ ತೆಗೆಯುವದಕ್ಕಾಗಿ ಬಲಾತ್ಕರಿಸಿದ್ದಾರೆ. ನಾನೂ ಸ್ವಲ್ಪ ನನ್ನ ಮಿಸೆ ಹೋದ ಮೇಲೆ ಆಗಬಹುದಾದ ಭಾವಿ ಮುಖ ಕಾಂತಿಗೆ ಮೆಚ್ಚಿದವನಾಗಿ ಅವುಗಳನ್ನು ಬುಡಮೇಲು ಮಾಡಲೊಪ್ಪಿದೆ.

ಸಾಲೆಯಿಂದ ಮನೆಗೆಬಂದು ಮೊದಲು ನನ್ನ ಕೋಣೆಯನ್ನು ಹೊಕ್ಕೆ, ಮತ್ತು ಕೋಣೆಯ ಒಂದು ಭಾಗವಾದ ಹೇರ್‌ಡ್ರೆಸ್ ಸಲೂನಿನ ಕಡೆಗೆ ಧಾವಿಸಿದೆ. ಬಹುದಿನಗಳಿಂದ ಜೋಕೆ ಮಾಡುತ್ತಿದ್ದ ನನ್ನ ವೀರಮಿಸೆಗಳಿಗೆ ಅಪ್ಪಣೆಯನ್ನಿತ್ತೆ, ಮತ್ತು ಮುಖತೊಳೆದು ಬೂದಿ ಬಳಿದು ಬಟ್ಟೆಗಳನ್ನುಟ್ಟು ಕೋಟನ್ನು ಮಾತ್ರ ಹೆಗಲಮೇಲೆ ಹಾಕಿ ಲಗುಬಗೆಯಿಂದ ನನ್ನವಳ ಕೋಣೆಗೆ ನಡೆದೆ. ಒಳಗೆ ಬರಬಹುದೇ? ಎನ್ನುವದಕ್ಕಾಗಿ ಸ್ವಲ್ಪ ತಡೆದೆ. ಹಿಂದಿಯಾದುದರಿಂದ ದಾಂಪತ್ಯಜೀವನದ ಸತ್ಯಕಲ್ಪನೆಯನ್ನು ಮಾಡಿ ಬಾಗಿಲ ಬಟ್ಟೆಯನ್ನು ಸ್ವಲ್ಪ ಓರೆಮಾಡಿದೆ, ನೋಡುವದೇನು! ನಮ್ಮವರೂ ಬಟ್ಟೆಗಳನ್ನು ಹಾಕಿ ಎಲ್ಲಿಗೋ ಹೋಗುವಸಿದ್ಧತೆಯಲ್ಲಿ ನಿಲುಗನ್ನಡಿಯ ಮುಂದೆ ಕುಳಿತು ಕೂದಲುಗಳನ್ನು ಬಾಚಿಕೊಳ್ಳುತ್ತಿರುವರು. ಮೊದಲೇ ಹೇಳಿದಂತೆ ಇವರಿಗೂ ಪುರುಷವೇಷ ಧಾರಣೆಯಲ್ಲಿ ಬಹು ಪ್ರೀತಿ. ಈಗಿನ ಇವರ ಉಡುಪೆಂದರೆ ಒಂದು ಬಿಳಿ ಹಾಫ್ ಶರ್ಟ, ಕಾಲರು ಮತ್ತು ತೋಳುಗಳು ಅಂಚಿಗೆ ಕರಿಯ ಗೀಟು, ಕೆಳಭಾಗದಲ್ಲಿ ಬ್ರಿಡ್ಜಸು, ಪಾದಗಳಲ್ಲಿ 'ಬಾಟಾ, ಇಂಥಾ ಬಟ್ಟೆಗಳನ್ನು ಧರಿಸಿದ ನನ್ನವಳ ಸೌಂದರ್ಯಕ್ಕೆ ಮರುಳಾಗಿ ಇಣಿಕಿಯೆ

ನೋಡುತ್ತ ನಿಂತ. ಹ್ಯಾಗೂ ಕನ್ನಡಿಯೊಳಗಿಂದಲೆ ಅವಳದೃಷ್ಟಿ ನನ್ನ ಮೇಲೆ ಬಿದ್ದೊಡನೆಯೆ, "ಬರಬೇಕು ಶಾಂತಾ ಒಳಗೆ" ಎಂದು ಕೂಗಿದಳು. ಹೊರಳೀನೂ ನೋಡಲಿಲ್ಲ. ನಾನು, ಹೊರಗೆ ಯಾರೂ ಇಲ್ಲದಿರುವಾಗ ಇವಳು ಶಾಂತೆಯಂದು ಕರೆದದ್ದಾರಿಗೆ? ಎಂದು ಸ್ವಲ್ಪ ಗಾಬರಿಗೊಂಡು ಅಲ್ಲಿಯೇ ತಡೆದೆ. "ಬಾರಮ್ಮ ಬಾಗಿಲಲ್ಲೇಕೆ ನಿಂತೆ" ಎಂದು ನಗುತ್ತ ಕನ್ನಡಿಯೊಳ ಗಿಂದಲೇ ಮತ್ತೆ ಸನ್ನೆ ಮಾಡಿದಳು. ನಾನು ಒಳಗಾದೆ, ಅವಳ ಹೆಗಲಮೇಲೆ ಕೈಗಳನ್ನಿಟ್ಟು "ಯಾವಶಾಂತೆ" ಎಂದಂದೆ. ಅದಕ್ಕವಳು ಗಿರ್ರನೆ ತಿರುಗಿ ಮುಖ ವನ್ನು ನೋಡಿ "ನನ್ನ ಮಿತ್ರಳೆಂದೆ ತಿಳಿದಿದ್ದೆ ತಾವೇನು? ನಾವೀರ್ವರೂ ಕೂಡಿ ಹೊರಗ್ಹೋಗಬೇಕಾದ್ದರಿಂದ ಅವಳನ್ನು ಇಂದು ನೀವು ತೊಟ್ಟಿ ಬಟ್ಟಿ ಯಲ್ಲೇ ಬರಹೇಳಿದ್ದೆ" ಎಂದಳು. ನಾನಾಗ ಮನದೊಳಗೆ "ಪುರುಷರಾದ ನಾವೇ ಹೊಸ ಸೋಗು ಹಾಕಿದರೆ ನೀವೇಕೆ ಬೇಡ" ಎಂದೆ. ಇಷ್ಟಕ್ಕೆ ಸರಿ ಯಾಗಿ ಹೊರಗಿನಿಂದ ನನ್ನ ಮಗಳು ಅಳುತ್ತ ಬಂದು ಅವ್ವ ಅವ್ವ ಎಂದು ನನ್ನವಳ ಬಳಿಯಲ್ಲಿ ಕುಳಿತು ನನ್ನನ್ನು ಹಿಡಿದು ಅಳಲಾರಂಭಿಸಿದಳು. ಮತ್ತು ನಾನವಳಲ್ಲೆಂದು ತಿಳಿದು ಆಕಡೆ ಹೊರಳಿತು. ಹೀಗೆ ನನ್ನನ್ನು ಹಿಡಿದತ್ತುದು ಈಗಿನ ಪದ್ಧತಿಯಂತೆ ಮಕ್ಕಳ ಯೋಗಕ್ಷೇಮವನ್ನು ತಾವು ತಾಯಂದಿರು ತೆಗೆದುಕೊಳ್ಳದೆ ಹೀನ ದಾಸಿಯರ ಕೈಯಲ್ಲಿ ಕೂಡುತ್ತಿರುವದೆ ಕಾರಣವೊ? ಅಥವಾ ಈ ದಿನದ ನನ್ನ ಹೊಸ ಮುಖದ ಮಲವೆ ಕಾರಣವೊ? ವಾಚಕರೇ ತರ್ಕಿಸತಕ್ಕದ್ದು.

ಇಲ್ಲಿಂದ ನಾನು ತಾಯಿಯ ಬಳಿ ಹೋದೆ, ಅಲ್ಲಿ "ಬರಬೇಕು ಮನು" ಎಂದು ನನ್ನನ್ನು ಬರಮಾಡಿಕೊಂಡದ್ದಾಯಿತು. ನನ್ನ ಹೆಂಡತಿಯ ಹೆಸರು ಮನೋಹರಿ. ನನ್ನ ತಾಯಿಯು ಅವಳಿಗೆ ಪ್ರೀತಿಯಿಂದ ಕೂಗುವದು "ಮನು" ಎಂದು. ಮತ್ತೆ "ಇದೇನು ಮಗು, ನೀನೆ? ನಾನು ಮನು ಎಂದೇ ತಿಳಿದಿದ್ದೆ" ಎಂದು ನುಡಿದಳು. ಇದಕ್ಕೆ ನಾನು ಮತ್ತಷ್ಟು ಭ್ರಾಂತಿ ಯುತನಾಗಿ ಕೋಣೆಯಿಂದ ಹೊರಹೊರಟೆ. ಹೊರಗೆ ಸಾಲೆಯೊಳು ನನ ಗಾಗಿ ಕಾದಿದ್ದ. "ಸ್ವರ್, ಇಂದು ಪ್ರತಿಪಕ್ಷದವರು ಬರದ್ದಕ್ಕಾಗಿ ಆಟ ನಿಂತಿತು" ಎಂದ.

ಇನ್ನೆಲ್ಲಿ ಹೋಗುವದು ಆಟವಾಡುವದಕ್ಕೆ ಹೋಗಿ ಮಿತ್ರರಲ್ಲಾದರೂ ವೇಳೆ ಕಳೆಯಬಹುದಾಗಿತ್ತು ಅದೂ ನಿಂತಿತು. ಹಾಗೇಯೆ ಪ್ಯಾಲೇಸ ಟಾಕೀಜಿಗೆ ಹೊರಟೆ, ಒಂದನೆಯ ತರಗತಿಯಲ್ಲಿ ಕುಳಿತೆ, ಇನ್ನೀರ್ವ ಪಾರ್ಸೀ ದಂಪತಿಗಳು ಬಂದರು. ಪುರುಷನಾಕಡೆ ಕುಳಿತ, ಅವನ ಹೆಂಡತಿ ನನ್ನ ಹತ್ತರವೆ. ಚಿತ್ರ ಮೊದಲಾಯಿತು, ಅದರಲ್ಲಿಯ ಮುಖ್ಯ ನಟಿ ಸಬಿತಾ ದೇವಿಯು–ಮೊದಲು ಸೀತಾದೇವಿ, ಅಹಲ್ಯಾದೇವಿ, ಮಾಯಾದೇವಿ ಮುಂತಾದವರ ಹೆಸರನ್ನು ನೆನೆಯುವ ಭಾರತೀಯರು ಈಗ ಸಬಿತಾದೇವಿ, ಸುಲೋಚನಾದೇವಿ, ಕನನ್, ನೀನಾ, ಮೀನಾ, ಗೀತಾದೇವಿ, ನಿಜಾಮಿಯರ ಪ್ರತಿಮೆಯನ್ನು ಪೂಜಿಸುತ್ತಿರುವರು. ಅಂದಮೇಲೆ ಬರೇ ಹೆಸರು ಪಠಿಸುತ್ತಿರುವ ಭಾರತೀಯರಿಗಿಂತ ಚಿತ್ರ ಪೂಜೆ ಮಾಡುವ ನಾವೇ ಮೇಲಲ್ಲವೆ ದೇವಭಕ್ತರಲ್ಲಿ? ತನ್ನ ತಂದೆಯನ್ನು ಹುಡುಕುವದಕ್ಕಾಗಿ ತೊಟ್ಟ ಪುರುಷವೇಷವನ್ನು ನೋಡಿ ನನ್ನ ಬಳಿ ಕುಳಿತಿರುವ ರಮಣಿಯು ನನ್ನ ಕೈಗಳನ್ನು ಹಿಡಿದು "ಅದೋ ನೀನು ತೊಟ್ಟಿರುವ ಈ ವೇಷಕ್ಕಿಂತ ಅವಳು ತೊಟ್ಟ ಆ ವೇಷವೇ ಹೆಚ್ಚು ಒಪ್ಪುತ್ತಿದೆ" ಎಂದು ಕುಲುಕಿದಳು. ನಾನು ಪುರುಷನೆಂಬ ಕಲ್ಪನೆಯು ಕೂಡಾ ಆಕೆಗೆ ಉಳಿಯಲಿಲ್ಲವೆಂಬಂತೆ ಕಾಣುತ್ತದೆ. ಮೊದಲು ಸಹ ಆಕೆಯ ಪತಿಯು ತಾನು ಆ ಕಡೆ ಕುಳಿತು ಪತ್ನಿಗೆ ನನ್ನ ಹತ್ತಿರ ಕೂಡ್ರಿಸಿದ ಕಾರಣವು ಇದೇಯಂತೆ. !

ಈ ಎಲ್ಲ ಪರಿಸ್ಥಿತಿಗಳ ವಿಚಾರಮಾಡಿ ಮನೆಯಲ್ಲಿ ಮತ್ತು ಇಲ್ಲಿ ನಡೆದ ಸಂಗತಿಗಳ ನೆನಪಾಗಿ ಹೋದ ನನ್ನ ಮೀಸೆಗಳು ಮತ್ತೆ ಮರಳಿ ಬಂದಾವೆ ? ಎಂದು ಕಣ್ಣೀರಿಟ್ಟೆ.

ರುದ್ರಶೆಟ್ಟಿ.

# ನಾ ಕಂಡ ಕನಸು

ಜೀವನದ ಜಂಜಡದಿಂದ ಬೇಸತ್ತು, ಸೃಷ್ಟಿ ಸೌಂದರ್ಯದ ಸೊಬಗನ್ನು ಸವಿಯಬೇಕೆಂಬ ಕುತೂಹಲದಿಂದ ವಿಹಾರಾರ್ಥವಾಗಿ ಮಿತ್ರನೊಂದಿಗೆ ಸಾಗಿದೆ—ಕುದುರೆಯ ರಥವನ್ನೇರಿ. ವರ್ಷಾಕಾಲವಾದುದರಿಂದ ಗುಡುಗು ಸಹಜವಾಗಿದೆ. ಗುಡುಗಿನ ಗದರಿಕೆಯಿಂದಲೋ ಅಥವಾ ಮಿಂಚಿನ ಹೊಳಪಿನಿಂದಲೋ ಅಂಜ ಕುದುರೆ ಹಾರಿ ಹಾರಿ ಓಡತೊಡಗಿದೆ. ಹಳ್ಳದ ದಂಡೆ: ಹಚ್ಚಗೆ ಹಸಿರು ಮುರಿಯುವ ಹುಲ್ಲಿನ ಹಾಸಿಗೆ, ಕೆಂಪಾಗಿ ಕಾಣುವ ಪಶ್ಚಿಮ ಮೋಡಗಳು; ಇವೆಲ್ಲ ವಿವಿಧ ದೇಶಗಳಲ್ಲಿ ಕಾಣಬರುವ ವಿವಿಧ ದೃಶ್ಯಗಳಂತೆ ತೋರುತ್ತಿವೆ. ನಮ್ಮ ರಥವು ಈ ಎಲ್ಲ ದೇಶಗಳನ್ನು ಜಯಿಸಲೋಸುಗ ಬಿಟ್ಟ ಯಜ್ಞತುರಗವನ್ನು ಬಂಧಿಸಿದವರನ್ನು ದಂಡಿಸಲು ಅತಿವೇಗದಿಂದ ಗಾಳಿಯೋಪಾದಿಯಲ್ಲಿ ಓಡುತ್ತಿದೆ ಎಂಬಂತೆ ಕಾಣುತ್ತಿದೆ. ಮನಸ್ಸು ಭಯದಿಂದ ತಳಮಳಿಸಹತ್ತಿದೆ. ಆಗಾಗ ರಥವು ಯಾವುದಾದರೊಂದು ಬಂಡೆಗೆ ಅಪ್ಪಳಿಸಿ ಮುರಿದುಬೀಳಬಹುದೆಂಬ ಭಯವು ಹೃದಯವನ್ನೆಲ್ಲ ತುಂಬಿದೆ. ಈ ದೇಶಗಳ ಗೆದೆಯುವ ಹವ್ಯಾಸ ಎಮಗೇಕೆ—ಈ ಪರಿ ಓಡುವದೂ ಬೇಡ, ಒಣಪರಿಹಾಸ ಸಾಕು; ಎಂದು ಮನಸ್ಸು ತನ್ನನ್ನು ತಾನು ಹಳಿಯುತ್ತಿದೆ. ಜೊತೆಗೆ ಗಾಳಿಯು ಭೋರುಗುಟ್ಟಿ ಬೀಸುತ್ತಿದೆ. ಬರಬರುತ್ತ ಆಕಾಶದ ಮೋಡಗಳೆಲ್ಲ ಮರೆಯಾಗುತ್ತಿವೆ. ಆದರೆ ಭಯದ ಮೋಡಗಳು ಮನದಲ್ಲಿ ಕೋಲಾಹಲವನ್ನೆಬ್ಬಿಸಿವೆ. "ಯಾರಾದರೂ ಕುದುರೆಯನ್ನು ತಡೆಯಿರಿ, ತಡೆಯಿರಿ" ಎಂಬ ಚೀತ್ಕಾರವು ಬಾಯಿಂದ ಹೊರಬೀಳುತ್ತಿರುವಷ್ಟರಲ್ಲಿಯೇ ರಥವು ಒಂದು ದೊಡ್ಡ ಬಂಡೆಗೆ ಅಪ್ಪಳಿಸಿತು. ಮಿತ್ರನು ಸಿಡಿದುಬಿದ್ದ ಮಳಳಲ್ಲಿ. ನಾನು ರಥದ ಗಾಲಿಗಳ ಬುಡಕ್ಕೆ ಸಿಕ್ಕಿ ಬಳಲಹತ್ತಿದೆ. ಅಷ್ಟರಲ್ಲಿ ಮಿತ್ರನು ಬಂದು ನನ್ನನ್ನು ಕೈಹಿಡಿದೆತ್ತಿದನು. ನೋಡುತ್ತೇನೆ, ಕೈಯಿಂದ ರಕ್ತವು ಹರಿಯಲಾರಂಭಿಸಿದೆ. ಬಟ್ಟೆಯ ಮೇಲೆಲ್ಲ ಕೆಂಪುಬಣ್ಣ ಚಲ್ಲಿದಂತಾಗಿದೆ. ಆಕಾಶದತ್ತ ನೋಡಿದೆ ಪಶ್ಚಿಮದಲ್ಲಿ ಸೂರ್ಯ ಅರೆಮರೆಯಾಗಿದ್ದಾನೆ.

ಪೂರ್ವದಲ್ಲಿ ಚಂದ್ರನು ಸಣ್ಣಾಗಿ ಮೋಡಗಳೊಳಗಿಂದ ಮಸುಮಸುಗಾಗಿ ಮೈದೋರುತ್ತಿದ್ದಾನೆ. ತಲೆಯಮೇಲೆ ಮೂರು ನಾಲ್ಕು ತಾರೆಗಳು ಕಾಂತಿ ಹೀನವಾಗಿ ಕಾಣುತ್ತಿವೆ. ವಿಚಾರಿಸ ಹತ್ತಿದೆ, ನನ್ನ ಮನಾಗಸದಲ್ಲಿಯೂ ಪ್ರೇಮ ಹೃದಯವನ್ನು ಹೊತ್ತು ಹಸನ್ಮುಖಿಯಾದ ಮೂರುನಾಲ್ಕು ತಾರೆಗಳು ಕಿಲಿಕಿಲಿ ನಗುವಂತೆ ಭಾಸವಾಯಿತು. 'ಅವರಲ್ಲಿ ಯಾರಾದರೊಬ್ಬರು ನನ್ನ ಆರೈಕೆಗಾಗಿ ಇದ್ದುದಾದರೆ' ಎಂದಾಲೋಚಿಸುತ್ತ, ಪೂರ್ವದ ಕಡೆಗೆ ಕಣ್ಣುಗಳನ್ನು ಹೊರಳಿಸಿದೆನು. ಮಸುಮಸುಕಾಗಿದ್ದ ಚಂದ್ರ ಅದೇ ಎರಡು ಮೋಡಗಳ ನಡುವಿನ ಬಯಲಿನಲ್ಲಿ ಬಂದಿದ್ದಾನೆ. ನಿಚ್ಚಳವಾಗಿ ಹೊಳೆಯುತ್ತಿದ್ದಾನೆ. ಆಗ ಒಮ್ಮಿಂದೊಮ್ಮೆ ನನ್ನ ಪ್ರೀತಿಯ ಹೆಂಡತಿ 'ತಾರೆ' ನೆನೆಪಿಗೆ ಬಂದಳು. 'ಹಾಯ್' ಎಂದು ಉಸಿರ್ಗರೆದ ಹಾಗೆಯೇ ಕಣ್ಣುಗಳು ಮುಚ್ಚಿದವು..................... .......ಊರಿಂದ ಬಂದಿದ್ದೇನೆ. ಹತ್ತಿದ್ದ ಎತ್ತರವಾದ ಕುದುರೆಯನ್ನಿಳಿಮ. ಮನೆಯ ಕಾಂಪೌಂಡಿನ ಹೆಬ್ಬಾಗಿಲಿನಲ್ಲಿ ಕಾಲಿಟ್ಟಿದ್ದೇನೆ. ಕಾಲುಗಳು ತಾನಾಗಿಯೇ ಮನೆಯ ಹೂದೋಟದತ್ತ ಸಾಗುತ್ತಲಿವೆ. ಕುಸುಮಲತೆಗಳು ಹಾದಿಯಲ್ಲೆಲ್ಲ ಹಬ್ಬಿವೆ. ಗುಬ್ಬಿಗಳ ಚಿಂವು, ಚಿಂವು: ಕಾಗೆಗಳ ಕಾ, ಕಾ ರವದೊಡನೆ ಅರೆ ಅರಳುತಿಹ ಕುಸುಮಗಳು ಯಾರನ್ನೋ ಸ್ವಾಗತಿಸುವುದಕ್ಕಾಗಿ, ತಮ್ಮ ಕೋಮಲ ಕಣ್ಣುಗಳನ್ನು ತೆರೆಯುತ್ತಲಿವೆ ಎಂಬಂತೆ ಕಾಣುತ್ತಲಿದೆ. ಯಾರನ್ನು ಸ್ವಾಗತಿಸುತ್ತಿವೆ ಎಂದು ಪೂರ್ವದೆಶೆಗೆ ನೋಡಿದೆ, ಸೂರ್ಯ ಆದೇ ಭೂಮಿಯಿಂದ ಅರೆ ಎದ್ದಿದ್ದಾನೆ. ಸೂರ್ಯನು ಅರಳುವ ಹೂಗಳನ್ನು ಸ್ವಾಗತಿಸುತ್ತಿರವನೋ ಹೂಗಳೇ ಸೂರ್ಯನನ್ನು ಸ್ವಾಗತಿಸುತ್ತಲಿವೆಯೋ ಅಥವಾ ಸೂರ್ಯ ಕುಸುಮಗಳೆರಡೂ ನನ್ನನ್ನೇ ಸ್ವಾಗತಿಸುತ್ತಲಿವೆಯೋ ಎಂದು ಒಂದುಗಳಿಗೆ ವಿಸ್ಮಿತನಾದೆನು. ಪಶ್ಚಿಮದತ್ತ ಹೊರಳಿ ನೋಡಲಾಗಿ ಕುಸುಮಲತಾ ಕುಂಜದಲ್ಲಿ ಏನೋ ಸಪ್ಪಳವಾದಂತಾಯಿತು. ತಾರೆಗಳ ಮಧ್ಯದಲ್ಲಿ ಷೋಡಶ ಕಲೆಗಳಿಂದಂದವಾಗಿಹ ಚಂದ್ರನು ಹೊಳೆಯುವಂತೆ ಆ ಕುಸುಮನಿವಹದ ಮಧ್ಯೆ ಒಂದು ಸಜೀವ ಕುಸುಮವೊಂದು ಕಾಣಿಸಿ ಕೊಂಡಿತು. ಶುಭ್ರವಾದ ಬಟ್ಟೆಯನ್ನುಟ್ಟ ಆ ನಾರೀ ಕುಸುಮವು ನಿಜವಾಗಿ ಕುಸುಮವೇ ಸರಿ. ಅವಳ ಪಯೋಧರದಿಂದ ನಗೆಯು ಹೊರಸೂಸುತ್ತಿದೆ. ನಗೆಯು

ಜೊತೆಗೆ ತಮ್ಮ ಹೊಳಪನ್ನು ತೋರಬೇಕೆಂದು ಅವಳ ದಾಳಂಬರ ಬೀಜ ದಂತಿರುವ ಹಲ್ಲುಗಳು ಕಾಣಿಸಿ ಕೊಳ್ಳುತ್ತಿವೆ. ಸೂರ್ಯ ಕಿರಣಗಳು ನೇರ ವಾಗಿ ಅವಳ ನೇತ್ರದ್ವಯವನ್ನು ಕುಕ್ಕುತ್ತಿವೆ. ಆದುದರಿಂದ ಅವಳ ಆ ಕಣ್ಣುಗಳು ಅತಿ ಅರಳಿದ ಕುಸುಮದಂತೆ ಅರ್ಧ ತೆರೆಯಲಾಗಿವೆ. ಅಂತೆಯೇ ಅವಳಿಗೆ "ಕುಸುಮ" ಎಂದು ಕರೆಯುತ್ತಿರಬಹುದೆಂದು ನನಗೆ ಭಾಸವಾಯಿತು. ಅವಳ ಅರೆತೆರದ ನಯನಗಳು ಬಿಲ್ಲಿನಂತೆ ಬಾಗಿವೆ. ಆ ಬಿಲ್ಲಿನಿಂದ ಹೊರಹೊರಟ ಬಾಣಗಳು ನನ್ನ ಮನಸ್ಸನ್ನು ಅತಿಯಾಗಿ ಘಾಸಿ ಗೊಳಿಸುತ್ತಿವೆ. ಶ್ರಾವಣದ ತಂಪಾದ ಗಾಳಿಯ ತೆರೆಗಳು ಕುಸುಮಗಳ ತಂಪನ್ನು ಹೊತ್ತು ನನ್ನನ್ನು ಅಪ್ಪುತ್ತಿವೆ. ಇಂತಹ ಸುಸಂಧಿಯಲ್ಲಿ ಕುಸುಮ ಳನ್ನು ಆಲಿಂಗಿಸಲು ಕಾತರನಾದೆ—ಅವಳ ಪ್ರೇಮಾಲಿಂಗನವನ್ನು ಸ್ವಾಗತಿ ಸಲು ಕೈಗಳನ್ನು ಮುಂದಕ್ಕೆ ಮಾಡಿದೆ. ಓಡುತೋಡುತ್ತ ಬಂದಳು, ಕೈಯಲ್ಲಿ ಕುಸುಮಮಾಲೆಯನ್ನು ಹಿಡಿದು–ಪ್ರಿಯೇ! ಎಂದೆ–'ಪ್ರಿಯಾ!' ಎಂದು ಅವಳು ಕುಸುಮಮಾಲೆಯನ್ನು ನನ್ನ ಕೊರಳಿಗೆ ಹಾಕಲು ಮುಂದಕ್ಕೆ ಬಂದಳು. ಕುಸುಮಮಾಲೆಯನ್ನು ಹಾಕುತ್ತಲೇ ಭುಸ್ಸೆಂಬ ಶಬ್ದ ಕೇಳ ಬಂತು. ಆಗ ನೋಡುತ್ತೇನೆ ಕುಸುಮಮಾಲೆಯ ಹೊಳೆವ ನಾಗರ ಹಾವೊಂದು ಹೆಡೆ ಎತ್ತಿ ನಿಂತಿದೆ. ಅಷ್ಟರಲ್ಲಿ ಕುಸುಮಳು ಎಲ್ಲಿಯೋ ಮಾಯ ವಾದಳು. ನಾಗರಹಾವು ನನ್ನನ್ನು ಬಿಗಿಯಾಗಿ ಸುತ್ತಹತ್ತಿತು. ಬಹು ಕಷ್ಟದಿಂದ ಅದರ ಬಿಗುವನ್ನು ಸಡಿಲಿಸಿಕೊಂಡು ಅದನ್ನು ನೆಲಕ್ಕೆ ಅಪ್ಪಳಿಸಿ ಅಯ್ಯೋ ಎಂದು ಓಡಹತ್ತಿದೆ. ಅದು ನನ್ನ ಬೆನ್ನಟ್ಟಿ ಓಡಹತ್ತಿದೆ. ಸತ್ತೆ! ಅಯ್ಯೋ! ಅಯ್ಯೋ!..................ಊರಿಗೆ ಹೋಗಲು ಅನುವಾಗಿದ್ದೇನೆ. ನನ್ನನ್ನು ಬೀಳ್ಕೊಡುವುದಕ್ಕಾಗಿ ನೆರೆದ ಜನರೆದುರು ಮನೆಯ ಮುಂದಣ ಬಯಲಿನಲ್ಲಿ ನಿಂತಿದ್ದೇನೆ. ಅಲ್ಲಿಂದ ಕಿಡಿಕಿ ಬಾಗಿಲಗಳೊಳಗಿಂದ ಕಾಣಿಸಿ ಬರುವ ನಡುಮನೆಯ ನೀಲೀಬಣ್ಣದ ಗೋಡೆಗಳ ದೃಶ್ಯ ಸರೋವರದಂತೆ ಕಾಣುತ್ತದೆ. ನಡುಮನೆಯಲ್ಲಿ ನಿಂತ ಕಮಲೆ ತನ್ನ ಕಮಲದಂತಹ ದೊಡ್ಡ ಕಣ್ಣುಗಳನ್ನರಳಿಸಿ ನನ್ನನ್ನೇ ದಿಟ್ಟಿಸಿ ನೋಡುತ್ತಿದಾಳೆ. ನಸುಗೆಂಪು ಬಣ್ಣದ ದೇಹ, ದುಂಡಾದ ಮುಖ, ಉಟ್ಟಿದ್ದ ಕಿರಿಮಂಜಿ ಬಣ್ಣದ ಸೀರೆಯ ಸೆರಗನ್ನು ಹೊದ್ದು ಕಿರಿಮಂಜಿ ಬಣ್ಣದ ಕಮಲದಲ್ಲಿದ್ದ ಲಕ್ಷ್ಮಿಯಂತೆ ತೋರುತ್ತಿದ್ದಾಳೆ.

ಅವಳ ಮುಖಕಮಲ ಬಾಡಿದೆ. ಮರೆಯಾಗುತ್ತಿದ್ದ ಸೂರ್ಯನು ಹೊಂಬಣ್ಣದ ಕಿರಣಗಳಂತಹ ದೀವಿಗೆಯ ಬೆಳಕು ಅವಳ ಮುಖವನ್ನು ಮುತ್ತಿದೆ. ನನ್ನ ಮನದಲ್ಲಿ ಬೆಳಗುತ್ತಿದ್ದ ಸೂರ್ಯನು ಇಂದು ಮರೆಯಾಗಿರುವುದರಿಂದ ಅವಳ ಮುಖಕಮಲವು ಬಾಡಿರಬಹುದೆಂದೆ. ಬಾಡಿದ ಕಮಲದ ಎಸಳುಗಳು ಉದುರಿ ನೆಲಕ್ಕೆ ಬೀಳುವಂತೆ ಅವಳು ಹೊದ್ದ ಸೆರಗು ತಲೆಯಮೇಲಿಂದ ಸಾವಕಾಶವಾಗಿ ಕೆಳಕ್ಕೆ ಜಾರುತ್ತಿದೆ. ಅವಳ ಆಪ್ತ ಬಂಧುಗಳು ಬಾಗಿಲದ ಬಳಿಯಲ್ಲಿಯೇ ನಿಂತಿದ್ದರಿಂದ ನಮ್ಮೀರ್ವರಿಗೆ ಮಾತನಾಡಲು ಶಕ್ಯವಿರಲಿಲ್ಲ. ಅವರಿಗೆ ಹೋಗುತ್ತೇನೆಂದು ಹೇಳಿದೆ. 'ಹೋಗುತ್ತೇನೆ' ಎಂಬ ಬೇಡಿಕೆ ತನ್ನಲ್ಲಿಯೇ ಎಂದು ಕಮಲೆಯಾದರೂ ಅರಿತಿರಬಹುದು. ಅಂತೆಯೇ ಅವಳ ಕಣ್ಣಿನಿಂದ ಕಂಬನಿಗಳು ಉದುರಿದವು. ಅವಳ ಹೃದಯದಿಂದ ಹೊರಟ ಅಂತಃಕರಣ ಭಾವನಾಪರವಶವಾದ ಹೊಳೆಗಳಂತೆ ಅವಳ ಬಾಷ್ಪ ಬಿಂದುಗಳು ತೋರಹತ್ತಿದವು. ನಾನು ಭಾವನಾಪರವಶನಾಗಿ ಕಣ್ಣುಗಳನ್ನು ಮುಚ್ಚಿದೆ. ನನ್ನ ಮನೋವೀಣಾ ತಂತಿಗಳನ್ನು ಅವಳ ಹೃದಯಾಕರ್ಷಕ ನೋಟವು ಮಿಾಟಿದಂತಾಗುತ್ತಿದೆ. ಆ ವೀಣೆಯಿಂದ ಹೊರಟ ದೀಪಕರಾಗವು ನಮ್ಮ ಮನಗಳನ್ನೊಳಹೊಕ್ಕು ನಮ್ಮೀರ್ವರ ಪ್ರೇಮಜ್ಯೋತಿಯನ್ನು ಪ್ರಜ್ವಲಗೊಳಿಸಹತ್ತಿದೆ. ಕಣ್ಣು ತೆರದೆ. ಯಾರೋ ಹಿಡಿದು ಜಗ್ಗುತಿದ್ದಾರೆ. ಗಾಡಿಗೆ ಸಮಯುವಾಗುವದೆಂದು—ಆ ಕೂಗು ರಾಮನನ್ನು ಸೀತೆಯಿಂದಗಲಿಸುವದಕ್ಕಾಗಿ ಕೂಗಿದ ಮಾರೀಚನ ಕೂಗಿನಂತಿತ್ತು. ಹಾಗೆಯೇ ನನಗೆ ನಡೆಯಬೇಕಾಯಿತು. ಹಾಯ್! ಕಮಲೆಯ ಮುಖಕಮಲವನ್ನು ಬಾಡಿಸಿ ಹೋಗಬೇಕಾಯಿತು.

…………ಸಾಲೆಯ ಹೂದೋಟದಲ್ಲಿ ಸಾಲಾಗಿ ಗಿಡ ಗುಲಾಬಿಗಳನ್ನು ಬೆಳೆಯಿಸಿದ್ದಾರೆ. ಇಂದು ಕೆಲವು ಗುಲಾಬಿ ಹೂಗಳನ್ನು ಎತ್ತಿಕೊಂಡು ನನ್ನ ಪ್ರೇಯಿಸಿ ಗುಲಾಬಿಗೆ ಅರ್ಪಿಸಬೇಕೆಂಬ ಲವಲವಕೆಯಿಂದ ಹೂದೋಟದೆಡೆಗೆ ಸಾಗಿದೆ. ಹಾದಿಯಲ್ಲಿ ಗುಲಾಬಿ ಹೂವಿನಂತಿರುವ 'ಗುಲಾಬಿ' ಗುಲಾಬೀ ಬಣ್ಣದ ಸೀರೆಯನ್ನುಟ್ಟು ಅದೇ ಭೂವ್ಯೋಮಗಳ ಮಧ್ಯೆ ಎರಚಿದ್ದ ಚೆಂಬಣ್ಣವನ್ನು ನಾಚಿಸುವಂತೆ ನಡೆದು ಬರುತಿದ್ದಾಳೆ. ಅವಳನ್ನು ನೋಡಿ 'ಗುಲಾಬಿ' ಎಂದೆ. ಓಡಿಬಂದು ಕರದಲ್ಲಿ ಕರವ ನೀಡಿದಳು. ಇಬ್ಬರೂ

ಜೊತೆಯಾಗಿಯೇ ತೋಟವನ್ನು ಮುಟ್ಟಿದೆವು. ಗಾಳಿಯಲ್ಲಿ ಹಾರಾಡುತ್ತಿರುವ ಗುಲಾಬಿ ಹೂಗಳ ಸಾಲಿನಲ್ಲಿ ಈರ್ವರ ಮನಗಳು ಆ ಗುಲಾಬಿ ಹೂಗಳಂತೆಯೇ ಹಾರಾಡುತ್ತಿವೆ. ಪರಸ್ಪರ ನಯನಗಳು ಕೂಡಿದವು ಮನವು ಮನವನ್ನಪ್ಪಿತು. ಅವಳ ಕೇಶರಾಶಿಯಲ್ಲಿ ಗುಲಾಬಿ ಹೂ ಒಂದನ್ನಿಡಬೇಕೆಂದು ಕೈ ಚಾಚಿದೆ. ಅಷ್ಟರಲ್ಲಿಯೇ 'ಗುಲಾಬಿ' ಮಾಯವಾಗಿದ್ದಾಳೆ. ಅಯ್ಯೋ ಕೈಗಳಿಗೆ ಗುಲಾಬಿ ಹೂಗಿಡಗಳ ಮುಳ್ಳುಗಳು ನಾಟಿವೆ. ರಕ್ತವು ಹರಿಯತೊಡಗಿದೆ. ಕೈತೆಗೆಯ ಹೋದೆ ಮುಳ್ಳುಗಳು ಮತ್ತಿಷ್ಟು ನಡಹತ್ತಿದವು. ಅಯ್ಯೋ....ಅಯ್ಯೋ........ಹಾಗೆಯೇ ಕಣ್ಣು ತೆರೆದು ನೋಡುತ್ತೇನೆ, ಮನೆಯಲ್ಲಿಯೇ ಮಲಗಿರುತ್ತೇನೆ-ವಿದ್ಯುದ್ದೀಪಗಳ ಪ್ರಕಾಶವು ಕಣ್ಣುಗಳನ್ನು ಕುಕ್ಕುತ್ತಿದೆ. ಯಾರೋ "ಹಾಗೆಯೇ ಮಲಗಿಕೊಳ್ಳಿರಿ ಪಟ್ಟಿ ಉಚ್ಚಿದೆ ಕಟ್ಟುತ್ತೇನೆಂದು" ಕೋಮಲ ಕಂಠದಿಂದ ಉಸುರಿದಂತಾಯಿತು. ಮತ್ತೊಮ್ಮೆ ಕಣ್ಣುತೆರೆದೆ—ನನ್ನ ಮಮತೆಯ ಮಡದಿ ತಾರೆ—ನನ್ನ ಗಾಯಗೊಂಡ ಕೈಯನ್ನು ತನ್ನ ಕೈಯಿಂದ ಹಿಡಿದು ಪಟ್ಟಿ ಕಟ್ಟುತ್ತಿರುವಳು. 'ಇದೇನು ಮಾಡುತ್ತಿರುವೆ' ಎಂದೆ, ಆಕೆ "ಡಾಕ್ಟರನು ಕಟ್ಟಿದ ಪಟ್ಟಿಯು ಬಿಚ್ಚಿ ರಕ್ತ ಹರಿಯಹತ್ತಿತ್ತು ಅದಕ್ಕಾಗಿ ಮತ್ತೊಮ್ಮೆ ಕಟ್ಟುತ್ತಿರುವೆ" ಎಂದಳು 'ತಾರೆ!'. 'ನಾನು ಪುರುಷನಾದ ಮಾತ್ರಕ್ಕೆ ನನ್ನ ಜೀವನದಲ್ಲಿ ಮೂರು ನಾಲ್ಕು ಜನ ಸ್ತ್ರೀಯರ ಕನಸುಗಳನ್ನು ಕಾಣಬಹುದೇ' ಎಂದು ಕೇಳಿದೆ. ಆಕೆ "ಅದು ನಿಮ್ಮ ಸಮಾಜ ಬದ್ಧವಾದ ಹಕ್ಕು." ಶಾಸ್ತ್ರ ಪುರಾಣಗಳು ಕೂಡ ಸಮ್ಮತಿಸುತ್ತಿವೆ. ಪುರುಷನು ಮೂರು ನಾಲ್ಕು ಜನ ಸ್ತ್ರೀಯರನ್ನು ಲಗ್ನವಾಗಬಹುದು, ಅವರ ಮೇಲೆ ಅಧಿಕಾರ ನಡೆಸಬಹುದು—ಆದರೆ ಸ್ತ್ರೀ ಓರ್ವನಿಗೆಯೇ ಸೇವೆ ಸಲ್ಲಿಸಬೇಕು. ಅವಳು ಅಧಮಳು. ಪುರುಷನಂತೆ ಅವಳು ವರ್ತಿಸಿದರೆ ಅವಳನ್ನು ಸಮಾಜವು ದೂಷಿಸುವುದು. ನಾಥಾ, ನೀವು ಮಾಡುತ್ತಿದ್ದುದು ಅನ್ಯಾಯವಲ್ಲ. ನಿಮ್ಮ ಆನಂದಕ್ಕಾಗಿ ಬೇಕಾದಷ್ಟು ಪುಷ್ಪಗಳನ್ನು ಕಾಲಕೆಳಗೆ ತುಳಿಯಬಹುದು." ಎಂದು ಉತ್ತರವಿತ್ತಳು. 'ಅಯ್ಯೋ ಈಪರಿ ಅನ್ಯಾಯವೇ' ಎಂದೆ. 'ತಾರೆ, ಇದೇ ನಾ ಕಂಡ ಕನಸು.' 'ನಾಥಾ! ಈ ಇದೇ ಜಗದಲ್ಲಿ ಕಾಣುತ್ತಿದ್ದ ಬರಿಯ ನೆನಸು.' ಎಂದು ನನಗೆ ಹೊದಿಕೆಯನ್ನು ಹೊಚ್ಚಿದಳು—

**ಸೂ-ಭಾಸ.**

K81-6
S53Y

K4246

آخری درج شدہ تاریخ پر یہ [illegible]ار
لی گئی تھی مقررہ مدت سے زیادہ رکھنے کی
صورت میں ایک آنہ یومیہ دیرانہ لیا جائیگا۔

# ಶರಣ ಸಾಹಿತ್ಯ ಗ್ರಂಥಮಾಲಾ, ಬೆಂಗಳೂರು ನಗರ.

| | | | |
|---|---|---|---|
| ೧. | ಪುರಾತನರ ತ್ರಿವಿಧಿ (ನಿಜಗುಣ ಶಿವಯೋಗಿ) | | ೧-೦-೦. |
| ೨. | ವೀರೇಶ ಚರಿತೆ (ರಾಘವಾಂಕ ಕವಿ) | | ೨-೦-೦. |
| ೩. | ಮನೋವಿಜಯಮ್ (ಗುರುಬಸವ ಕವಿ) | | ೨-೦-೦. |
| ೪. | ಬಸವೋದಾಹರಣಮ್ (ಪಾಲ್ಕುರಿಕೆ ಸೋಮನಾಥ) | | ೧-೦-೦. |
| ೫. | ಬಿಲ್ವಾಷ್ಟೋತ್ತರಮ್ | | ೦-೪-೦. |
| ೬. | ಘನಲಿಂಗಿದೇವರ ವಚನ ಮತ್ತು ತುರುಗಾಹಿ ರಾಮಣ್ಣ ವಚನ | | ೧-೦-೦. |
| ೭. | ಯುಗವಾಣಿ (ಕವನ ಸಂಗ್ರಹ) | | ೦-೧೨-೦. |
| ೮. | ಸಂಕ್ಷಿಪ್ತ ಶಿವಪೂಜಾವಿಧಿ (ಶ್ರೀಸ್ವಾಮಿ ವಿರೂಪಾಕ್ಷ ಒಡೆಯರ್) | | ೦-೮-೦. |
| ೯. | ಭಕ್ತಿಯುಗದ ಬಸವೇಶ್ವರ | (ಅಚ್ಚಿನಲ್ಲಿ) | ೫-೦-೦. |
| ೧೦. | ಗಣಸಹಸ್ರನಾಮ (ಪಾಲ್ಕುರಿಕೆ ಸೋಮನಾಥ) | | ೧-೦-೦. |
| ೧೧. | ಕನ್ನಡ ಹಾಡುಗಳು | (ಅಚ್ಚಿನಲ್ಲಿ) | ೦-೮-೦. |
| ೧೨. | ವೀರಶೈವ ಮಹಾಪುರುಷರು | ,, | ೧-೦-೦. |
| ೧೩. | ಇತಿಹಾಸ ಮತ್ತು ಸಂಶೋಧನೆ | ,, | ೧-೦-೦. |
| ೧೪, | ಕವಿ ಕಾಣಿಕೆ (ಕವನ ಸಂಗ್ರಹ) | ,, | ೧-೦-೦ |
| ೧೫. | ರಾಘವಾಂಕ ಪ್ರಶಸ್ತಿ | ,, | ೨-೦-೦ |
| ೧೬. | ಬಸವಪ್ಪಶಾಸ್ತ್ರಿ ಪ್ರಶಸ್ತಿ | ,, | ೨-೦-೦ |
| ೧೭. | ಷಡಕ್ಷರ ಕವಿ ಪ್ರಶಸ್ತಿ | ,, | ೨-೦-೦ |
| ೧೮. | ಸರ್ವಜ್ಞ ಕೈಪಿಡಿ | ,, | ೧-೦-೦ |
| ೧೯. | ಹಿಂದೂ ಧರ್ಮ ಮತ್ತು ಸಂಸ್ಕೃತಿ | ,, | ೨-೦-೦ |
| ೨೦. | ಕರ್ಣಾಟಕ ವಿಜಯ (ನಾಟಕ) | ,, | ೧-೦-೦ |
| ೨೧. | ಶರಣ ಬಸವೇಶ್ವರ ಚರಿತ್ರೆ | | ೦-೮-೦ |